ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

43

ಏಪ್ರಿಲ್ 7 ಶುಕ್ರವಾರ 2023

ಸಂಪುಟ: 43 | ಸಂಚಿಕೆ: 347 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕಾಂಗ್ರೆಸ್ 42 ಅಭ್ಯರ್ಥಿಗಳ ಎರಡನೇ ಪಟ್ಟಿ ಪ್ರಕಟ

■ ಅಳೆದು–ಸುರಿದು ಪಟ್ಟಿ ಪ್ರಕಟಿಸಿದ 'ಕೈ' ಹೈಕಮಾಂಡ್ ■ ಕಡೂರಲ್ಲಿ ದತ್ತ, ಚಿತ್ರದುರ್ಗದಲ್ಲಿ ರಘು ಆಚಾರ್‌ಗೆ ಟಿಕೆಟ್ ಮಿಸ್ ■ ಹಲವು ಕ್ಷೇತ್ರಗಳಲ್ಲಿ ವಲಸಿಗರಿಗೆ ಮಣೆ

- ಚಾಮುಂಡೇಶ್ವರಿ –ಸಿದ್ದೇಗೌಡ
- ಮಂಡ್ಯ –ಪಿ.ರವಿಕುಮಾರ್
- ಕೊಳ್ಳೇಗಾಲ –ಎ.ಆರ್.ಕೃಷ್ಣಮೂರ್ತಿ
- ಮಡಿಕೇರಿ –ಡಾ.ಮಂಥರ್‌ಗೌಡ
- ಕೆ.ಆರ್.ಪೇಟೆ –ಬಿ.ಎಲ್.ದೇವರಾಜ
- ಮೇಲುಕೋಟೆ–ದರ್ಶನ್ ಪುಟ್ಟಣ್ಣಯ್ಯ
- ಬೇಲೂರು –ಬಿ.ಶಿವರಾಂ



ಸಿದ್ದೇಗೌಡ ಪಿ.ರವಿಕುಮಾರ್ ಎ.ಆರ್.ಕೃಷ್ಣಮೂರ್ತಿ



ಡಾ.ಮಂಥರ್‌ಗೌಡ ಬಿ.ಎಲ್.ದೇವರಾಜ ದರ್ಶನ್‌ಪುಟ್ಟಣ್ಣಯ್ಯ ಬಿ.ಶಿವರಾಂ

ನವದೆಹಲಿ, ಏ.6(ಕೆಎಂಶಿ)– ಕಾಂಗ್ರೆಸ್ 42 ಅಭ್ಯರ್ಥಿಗಳ ಎರಡನೇ ಪಟ್ಟಿ ಬಿಡುಗಡೆ ಮಾಡಿದೆ. ರಾಜ್ಯ ಕಾಂಗ್ರೆಸ್ ನಾಯಕರ ಹಗ್ಗಜಗ್ಗಾಟದಿಂದ ಉಳಿದ 58 ಕ್ಷೇತ್ರಗಳಿಗೆ ಅಭ್ಯರ್ಥಿ ಆಯ್ಕೆ ವಿಚಾರದಲ್ಲಿ ದೆಹಲಿ ವರಿಷ್ಠರು ವಿಫಲರಾಗಿದ್ದಾರೆ.

ಕೋಲಾರದಲ್ಲಿ ಏಪ್ರಿಲ್ 10 ರಂದು ನಡೆಯಲಿರುವ ಕಾಂಗ್ರೆಸ್ ರ್‍ಯಾಲಿಯ ನಂತರ ಉಳಿದ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಆಯ್ಕೆ ಕಸರತ್ತು ನಡೆಯಲಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಅಧ್ಯಕ್ಷತೆಯಲ್ಲಿ ಕಳೆದ ಮೂರು ದಿನಗಳಿಂದ ದೆಹಲಿಯಲ್ಲಿ ಅಭ್ಯರ್ಥಿಗಳ ಆಯ್ಕೆಗೆ ನಡೆದ ಸಂಸದೀಯ ಮಂಡಳಿ ಸಭೆಯಲ್ಲಿ ಕೇವಲ 42 ಅಭ್ಯರ್ಥಿಗಳನ್ನು ಆಯ್ಕೆ ಮಾಡಲಷ್ಟೇ ಸಾಧ್ಯವಾಯಿತು.

ಹಾಲಿ ನಾಲ್ವರು ಶಾಸಕರಿಗೆ ಎರಡನೇ ಪಟ್ಟಿಯಲ್ಲೂ ಟಿಕೆಟ್ ದೊರೆತಿಲ್ಲ. ಸಿದ್ದರಾಮಯ್ಯ ಕಳೆದ ಬಾರಿ ಕಣಕ್ಕಿಳಿದಿದ್ದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರಕ್ಕೆ ಸಿದ್ದೇಗೌಡರಿಗೆ ಟಿಕೆಟ್ ಕೊಡಿಸುವಲ್ಲಿ ಸಫಲರಾಗಿದ್ದಾರೆ. ಅರಕಲಗೂಡು ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾದ ಮಾಜಿ ಸಚಿವ ಎ.ಮಂಜು ಪುತ್ರ ಡಾ.ಮಂಥರ್‌ಗೌಡರು ಮಡಿಕೇರಿ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಕಾಂಗ್ರೆಸ್ ಟಿಕೆಟ್ ನೀಡಿದೆ. ಮೇ 10ರಂದು ನಡೆಯುವ ಕರ್ನಾಟಕ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಈಗಾಗಲೇ 124 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಿದೆ.

ಮೇಲುಕೋಟೆ ಕ್ಷೇತ್ರದಲ್ಲಿ ಸರ್ವೋದಯ ಕರ್ನಾಟಕ ಪಕ್ಷದ ಅಭ್ಯರ್ಥಿ ದರ್ಶನ್ ಪುಟ್ಟಣ್ಣಯ್ಯ ಅವರನ್ನು ಬೆಂಬಲಿಸಲು ಪಕ್ಷ ನಿರ್ಧರಿಸಿದೆ. ಕಳೆದ ಬಾರಿ ವಿಧಾನಸಭೆ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರು ಸ್ಪರ್ಧಿಸಿದ್ದ ಬಾದಾಮಿ ಕ್ಷೇತ್ರದಿಂದ ಬಿ.ಬಿ. ಚಿಮ್ಮನಕಟ್ಟಿಗೆ ಟಿಕೆಟ್ ನೀಡಲಾಗಿದೆ. ಶಿಗ್ಗಾವಿಯಲ್ಲಿ ಸಿಎಂ ಬಸವರಾಜ ಬೊಮ್ಮಾಯಿ ವಿರುದ್ಧ ಸ್ಪರ್ಧಿಸಲಿದ್ದಾರೆ ಎಂದು ಹೇಳಲಾಗುತ್ತಿದ್ದ ವಿನಯ್ ಕುಲಕರ್ಣಿಗೆ ಧಾರವಾಡದಿಂದ ಟಿಕೆಟ್ ನೀಡಲಾಗಿದೆ. ಕಡೂರು ಕ್ಷೇತ್ರದಲ್ಲಿ ವೈ.ಎಸ್.ವಿ ದತ್ತ ಬದಲಿಗೆ ಆನಂದ್‌ಗೆ ಟಿಕೆಟ್ ನೀಡಿರುವುದು ಕುತೂಹಲಕ್ಕೆ ಕಾರಣವಾಗಿದೆ. ಜೆಡಿಎಸ್ ಬಿಟ್ಟು ಬಂದಿದ್ದ ಗುಬ್ಬಿ ಎಸ್.ಆರ್ ಶ್ರೀನಿವಾಸ್ ಅವರಿಗೆ ಟಿಕೆಟ್ ಸಿಕ್ಕಿದೆ. ಇತ್ತೀಚೆಗೆ ಬಿಜೆಪಿ ತೊರೆದಿದ್ದ ಕೂಡ್ಲಿಗಿ ಶಾಸಕ ಎನ್.ವೈ. ಗೋಪಾಲಕೃಷ್ಣ ಅವರಿಗೆ ಮೊಳಕಾಲ್ಮೂರಿಂದ ಟಿಕೆಟ್ ನೀಡಲಾಗಿದೆ. ಮತ್ತೊಂದೆಡೆ ಹಿರಿಯ ನಟ ದೊಡ್ಡಣ್ಣ ಅವರ ಅಳಿಯ ಕೆ.ಪಿ. ವೀರೇಂದ್ರಗೆ (ಪಪ್ಪಿ) ಚಿತ್ರದುರ್ಗ ವಿಧಾನಸಭಾ ಕ್ಷೇತ್ರದಿಂದ ಟಿಕೆಟ್ ಘೋಷಿಸಲಾಗಿದೆ. ಬೆಂಗಳೂರಿನ ಪ್ರಮುಖ ಕ್ಷೇತ್ರಗಳಲ್ಲಿ ಒಂದಾದ ಪದ್ಮನಾಭನಗರದಿಂದ ವಿ.ರಘುನಾಥ ನಾಯ್ಡುಗೆ ಟಿಕೆಟ್ ಘೋಷಿಸಲಾಗಿದೆ.


● 9ನೇ ಪುಟಕ್ಕೆ

ಯಾವತ್ತೂ ದೇಶವೇ ನಮಗೆ ಮೊದಲು

ಬಿಜೆಪಿ 44ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಘೋಷಣೆ

ನವದೆಹಲಿ: ಏನೇ ಮಾಡಿದರೂ 2024ರ ಚುನಾವಣೆಯಲ್ಲಿ ಬಿಜೆಪಿ ಸೋಲಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ತಿಳಿದ ಪ್ರತಿಪಕ್ಷಗಳು ತೀವ್ರ ಹತಾಶೆಗೊಳಗಾಗಿವೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಗುರುವಾರ ಹೇಳಿದ್ದು, ಕಾಂಗ್ರೆಸ್ ವಿರುದ್ಧ ಕಿಡಿಕಾರಿದ್ದಾರೆ.

ಬಿಜೆಪಿ 44ನೇ ಸಂಸ್ಥಾಪನಾ ದಿನದ ಹಿನ್ನೆಲೆಯಲ್ಲಿ ಪಕ್ಷದ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದ ಅವರು, ಬಿಜೆಪಿ ಪ್ರಜಾಪ್ರಭುತ್ವದ ಗರ್ಭದಿಂದ ಹುಟ್ಟಿದೆ. ಪ್ರಜಾಪ್ರಭುತ್ವ ಎಂಬ ಅಮೃತದಿಂದ ಪೋಷಿಸಲ್ಪಟ್ಟಿದೆ. ಹಾಗೇ, ಪ್ರಜಾಪ್ರಭುತ್ವ ಮತ್ತು ಸಂವಿಧಾನವನ್ನು ಗಟ್ಟಿಗೊಳಿಸಿದೆ, ಪವಿತ್ರಗೊಳಿಸಿದೆ.



ಬಿಜೆಪಿಯ ಪಾಲಿಗೆ ಈ ರಾಷ್ಟ್ರ ಬಹಳ ಮುಖ್ಯ. ನಮ್ಮ ಪಕ್ಷವು ಕೌಟುಂಬಿಕ ರಾಜಕಾರಣವನ್ನು

● 9ನೇ ಪುಟಕ್ಕೆ

ಬಂಡೀಪುರಕ್ಕೆ ನರೇಂದ್ರ ಮೋದಿ: ಹೆದ್ದಾರಿಯಲ್ಲಿ ಸಂಚಾರ ನಿರ್ಬಂಧ

ಚಾಮರಾಜನಗರ: ಇದೇ 9ರಂದು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶಕ್ಕೆ ಪ್ರಧಾನಿ ನರೇಂದ್ರ ಮೋದಿ ಭೇಟಿ ನೀಡುತ್ತಿರುವುದರಿಂದ ಭದ್ರತಾ ಕ್ರಮವಾಗಿ ಹುಲಿ ಸಂರಕ್ಷಿತ ಪ್ರದೇಶದ ಮೂಲಕ ಗುಂಡ್ಲುಪೇಟೆಯಿಂದ ತಮಿಳುನಾಡಿಗೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ 181 ಮತ್ತು 766ರಲ್ಲಿ (ಊಟಿ ರಸ್ತೆ) ಭಾರಿ ವಾಹನಗಳ ಸಂಚಾರವನ್ನು ಶುಕ್ರವಾರ (ಏ.7) ಸಂಜೆ 4ರಿಂದ 9ರ ಮಧ್ಯಾಹ್ನ 12 ಗಂಟೆಯವರೆಗೆ ಹಾಗೂ ಸರ್ಕಾರಿ ಬಸ್ ಮತ್ತು ವಾಹನಗಳನ್ನು ಬಿಟ್ಟು ಉಳಿದೆಲ್ಲ ವಾಹನಗಳ ಸಂಚಾರವನ್ನು ಶನಿವಾರ (ಏ.8) ಸಂಜೆ 4ರಿಂದ 9ರ ಮಧ್ಯಾಹ್ನ 12ರವರೆಗೆ ನಿರ್ಬಂಧಿಸಲಾಗಿದೆ. ಜಿಲ್ಲಾಧಿಕಾರಿ ಡಿ.ಎಸ್.ರಮೇಶ್ ಗುರುವಾರ ಈ ಸಂಬಂಧ ಆದೇಶ ಹೊರಡಿಸಿದ್ದಾರೆ. ಪ್ರಧಾನಿಯವರ ಭೇಟಿ ಕಾರಣಕ್ಕೆ ರಸ್ತೆ ನಿರ್ವಹಣೆ, ಇತರೆ ಪೂರ್ವ ಸಿದ್ಧತೆ ಮಾಡಿಕೊಳ್ಳುವ ಸಲುವಾಗಿ ಮತ್ತು ರಕ್ಷಣಾ ಹಿತದೃಷ್ಟಿಯಿಂದ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಾಗಿರುವುದರಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅವರು ಆದೇಶದಲ್ಲಿ ತಿಳಿಸಿದ್ದಾರೆ.

ಡ್ರೋನ್ ಹಾರಾಟ ನಿಷೇಧ

ಜೊತೆಗೆ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಎಲ್ಲ ರೀತಿಯ ಡ್ರೋನ್‌ಗಳ ಹಾರಾಟವನ್ನು 9ರವರೆಗೆ ಸಂಪೂರ್ಣವಾಗಿ ನಿರ್ಬಂಧಿಸಿ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದಾರೆ.

ಇಂದು, ನಾಳೆ ಪಾಲಿಕೆಯ ಎಲ್ಲಾ ವಲಯ ಕಚೇರಿಗಳಲ್ಲಿ ತೆರಿಗೆ ಸ್ವೀಕಾರ

ಮೈಸೂರು, ಏ.6(ಆರ್‌ಕೆ)–ನಾಳೆ (ಏ.7) ಶುಕ್ರವಾರ ಮತ್ತು ಏಪ್ರಿಲ್ 8ರ ಶನಿವಾರಗಳಂದು ಮೈಸೂರು ಮಹಾನಗರ ಪಾಲಿಕೆಯ ಎಲ್ಲಾ 9 ವಲಯ ಕಚೇರಿಗಳಲ್ಲಿ ತೆರಿಗೆ ಪಾವತಿಸುವ ಬ್ಯಾಂಕ್ ಕೌಂಟರ್‌ಗಳು ತೆರೆದಿರುತ್ತವೆ ಎಂದು ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ ಅವರು ತಿಳಿಸಿದ್ದಾರೆ.

ಶುಕ್ರವಾರ ಗುಡ್‌ಫ್ರೈಡೇ ಮತ್ತು ಏಪ್ರಿಲ್ 8, 2ನೇ ಶನಿವಾರ ಸರ್ಕಾರಿ ರಜೆ ಇರುವುದರಿಂದ ಪಾಲಿಕೆ ಕಚೇರಿಗಳು ಕಾರ್ಯ ನಿರ್ವಹಿಸುವುದಿಲ್ಲವಾದರೂ ತೆರಿಗೆ ಪಾವತಿ ಕೌಂಟರ್‌ಗಳು ಮಾತ್ರ ಕಾರ್ಯ ನಿರ್ವಹಿಸುತ್ತವೆ. ಆಸ್ತಿ ತೆರಿಗೆ, ಕಂದಾಯ, ನೀರಿನ ಬಿಲ್ (ಶೇ.5ರಷ್ಟು ವಿನಾಯಿತಿಯೊಂದಿಗೆ) ಹಾಗೂ ಇನ್ನಿತರ ಬಾಬ್ತಿನ ತೆರಿಗೆ ಪಾವತಿ ಮಾಡಬಹುದು ಎಂದು ತಿಳಿಸಿದರು. ಶೇ.5ರ ರಿಯಾಯಿತಿ ಇರುವುದರಿಂದ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ತೆರಿಗೆ ಪಾವತಿಸಲು ಬರುತ್ತಿರುವುದರಿಂದ ಅವರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಎರಡು ರಜಾ ದಿನಗಳಲ್ಲಿ ತೆರಿಗೆ ಪಾವತಿ ಕೌಂಟರ್‌ಗಳನ್ನು ಮಾತ್ರ ತೆರೆಯುತ್ತಿದ್ದು, ಭಾನುವಾರ ಎಂದಿನಂತೆ ರಜೆ ಇರುತ್ತದೆ ಎಂದು ಆಯುಕ್ತರು ತಿಳಿಸಿದ್ದಾರೆ.

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದಿಂದಲೇ ಸ್ಪರ್ಧೆ: ಸೋಮಣ್ಣ

ಬೆಂಗಳೂರು: ನನ್ನ ರಾಜಕೀಯ ಯಶಸ್ಸಿಗೆ ಕಾರಣವಾದ, ಕರ್ಮಭೂಮಿ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದಿಂದಲೇ ಈ ಬಾರಿ ಸ್ಪರ್ಧಿಸುತ್ತೇನೆ ಎಂದು ವಸತಿ ಸಚಿವ ವಿ.ಸೋಮಣ್ಣ ತಿಳಿಸಿದರು. ಬಿಜೆಪಿ ಕಾರ್ಯಕರ್ತರ ಬೃಹತ್ ಸಮಾವೇಶ ಉದ್ಘಾಟಿಸಿ, ಮಾತನಾಡಿದ ಅವರು, ನನ್ನ ರಾಜಕೀಯ ಜೀವನವು ತೆರೆದ ಪುಸ್ತಕದಂತೆ. 45 ವರ್ಷಗಳಿಂದ ರಾಜಕಾರಣದಲ್ಲಿದ್ದು, ರಾಜಕೀಯದಲ್ಲಿ ಯಶಸ್ಸು ಕಾಣಲು ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ ಕಾರಣ. ಇಲ್ಲಿನ ಎಲ್ಲ ಜನರನ್ನು ಒಂದೇ ರೀತಿಯಲ್ಲಿ ನೋಡಿದ್ದೇನೆ. ಇದೇ ಕ್ಷೇತ್ರದಿಂದ ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುತ್ತೇನೆ ಎಂದರು. ಕಾಂಗ್ರೆಸ್ ಪಕ್ಷದವರು ರಾಜಕೀಯ ಷಡ್ಯಂತ್ರ ಮಾಡುತ್ತಿದ್ದಾರೆ. ಕೋವಿಡ್ ಸಂದರ್ಭದಲ್ಲಿಯೂ ನಾನು ಜನರ ನಡುವೆ ನಿಂತು, ಕೆಲಸ ಮಾಡಿದ್ದೇನೆ. ಆಗ ವಿರೋಧ ಪಕ್ಷದವರು ಎಲ್ಲಿ ಹೋಗಿದ್ದರು ಎಂದು ಪ್ರಶ್ನಿಸಿದರು.



ಪ್ರಜಾಪ್ರಭುತ್ವ ಪ್ರಜ್ವಲಿಸುವುದೇ ಚುನಾವಣೆಗಳಿಂದ...!

● ಮತದಾರರ ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಿ ಮಾಜಿ ಕ್ರಿಕೆಟಿಗ ಜಾವಗಲ್ ಶ್ರೀನಾಥ್ ಅಭಿಮತ ● ನೈಜ ಪ್ರಜಾಪ್ರಭುತ್ವ ಆರಂಭವಾಗುವುದೇ ಚುನಾವಣಾ ಪ್ರಕ್ರಿಯೆಯಿಂದ



ಮೈಸೂರಿನ ಅರಮನೆ ಆವರಣದಲ್ಲಿ ಗುರುವಾರ ಆಯೋಜಿಸಿದ್ದ ಮತದಾರರ ಜಾಗೃತಿ ಕಾರ್ಯಕ್ರಮದಲ್ಲಿ ಮಾಜಿ ಕ್ರಿಕೆಟಿಗ ಜಾವಗಲ್ ಶ್ರೀನಾಥ್ ಅವರು ಸೆಲ್ಫಿ ಪಾಯಿಂಟ್‌ನಲ್ಲಿ ಅರಿವು ಮೂಡಿಸಿದರು

ಮೈಸೂರು, ಏ.6(ಆರ್‌ಕೆ)– ಪ್ರಜಾಪ್ರಭುತ್ವ ಪ್ರಜ್ವಲಿಸುವುದೇ ಚುನಾವಣೆಗಳಿಂದ ಎಂದು ಸ್ವೀಪ್ ಅಂಬಾಸಿಡರ್, ಮಾಜಿ ಅಂತಾರಾಷ್ಟ್ರೀಯ ಕ್ರಿಕೆಟಿಗ ಜಾವಗಲ್ ಶ್ರೀನಾಥ್ ಅವರು ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಮೈಸೂರು ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಜಿಲ್ಲಾ ಸ್ವೀಪ್ ಸಮಿತಿ ಹಾಗೂ ಮೈಸೂರು ಮಹಾನಗರ ಪಾಲಿಕೆ ಸಂಯುಕ್ತಾಶ್ರಯದಲ್ಲಿ ಅರಮನೆ ಆವರಣದಲ್ಲಿ ಆಯೋಜಿಸಿದ್ದ ಮತದಾರರ ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಈ ದೇಶದಲ್ಲಿ ಪ್ರಜಾಪ್ರಭುತ್ವ ಗಟ್ಟಿಯಾಗಿದೆ ಎಂದರೆ ಅದಕ್ಕೆ ಚುನಾವಣೆಗಳು ಕಾರಣ. ನಮ್ಮನ್ನು ಆಳುವ ಜನಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಚುನಾವಣೆಯೊಂದೇ ಮಾನದಂಡವಾಗಿದೆ ಎಂದರು.

ಎಂತಹವರನ್ನು ಆಯ್ಕೆ ಮಾಡಬೇಕು, ಯಾವ ಸರ್ಕಾರ ಬೇಕು ಎಂಬುದನ್ನು ನಿರ್ಧರಿಸುವವರು ಮತದಾರರು. ಆದ್ದರಿಂದ ಪ್ರಜ್ಞಾವಂತ ನಾಗರಿಕರು ಉತ್ತಮರಿಗೆ ಸಂವಿಧಾನ ಬದ್ಧವಾದ ಹಕ್ಕನ್ನು ಚಲಾಯಿಸಬೇಕು. ಪ್ರತಿಯೊಬ್ಬರೂ ತಪ್ಪದೇ ಮತ ಚಲಾಯಿಸುವ ಜೊತೆಗೆ ತಲಾ ಇಬ್ಬಿಬ್ಬರನ್ನು ಕರೆತಂದು ಮತ ಚಲಾಯಿಸುವಂತೆ ಮಾಡಿ ಎಂದು ಜಾವಗಲ್ ಶ್ರೀನಾಥ್ ನೆರೆದಿದ್ದ ಯುವ ಸಮೂಹಕ್ಕೆ ಕಿವಿಮಾತು ಹೇಳಿದರು.

ಜಿಲ್ಲಾ ಚುನಾವಣಾಧಿಕಾರಿಯಾದ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಅವರು ಮಾತನಾಡಿ, ಪ್ರತಿಯೊಬ್ಬರೂ ಚುನಾವಣೆಯಲ್ಲಿ ಪಾಲ್ಗೊಂಡು ಮತ ಚಲಾಯಿಸುವ ಮೂಲಕ ಜಿಲ್ಲೆಯಲ್ಲಿ ಮತದಾನದ ಪ್ರಮಾಣ ಹೆಚ್ಚಿಸುವ ಮೂಲಕ ಪ್ರಜಾಪ್ರಭುತ್ವದ ಹಬ್ಬದಲ್ಲಿ ಭಾಗಿಗಳಾಗಿ, ಸಂಭ್ರಮಿಸಬೇಕು ಎಂದರು. ಎಲ್ಲಾ ಮತಗಟ್ಟೆಗಳಲ್ಲಿ ಮತದಾರರಿಗಾಗಿ ಅಗತ್ಯ ಮೂಲ ಸೌಲಭ್ಯಗಳನ್ನು ಒದಗಿಸಲಾಗಿದೆ. ಚುನಾವಣಾಧಿಕಾರಿ ಹೆಸರು, ಮೊಬೈಲ್ ಸಂಖ್ಯೆಗಳನ್ನು ಬರೆಯಲಾಗಿದೆ. ಮೊದಲು ತಮ್ಮ ಮತಗಟ್ಟೆ ಯಾವುದೆಂಬುದನ್ನು ಖಚಿತಪಡಿಸಿಕೊಂಡು ಅಲ್ಲಿ ಯಾವುದೇ ತೊಂದರೆಯಾದರೂ ಚುನಾವಣಾಧಿಕಾರಿಗಳ ಗಮನಕ್ಕೆ ತಂದಲ್ಲಿ ಸಮಸ್ಯೆ ಬಗೆಹರಿಸಲಾಗುವುದು ಎಂದು ಅವರು ತಿಳಿಸಿದರು.

ಈ ಬಾರಿ ಏಪ್ರಿಲ್ 1ಕ್ಕೆ 18 ವರ್ಷ ಪೂರ್ಣಗೊಂಡವರಿಗೆ ಮತದಾನ ಮಾಡಲು ಅವಕಾಶ ಕಲ್ಪಿಸಲಾಗಿದೆ. ಅದರಿಂದ 2,500 ಮಂದಿ ಯುವ ಮತದಾರರಿಗೆ ಅವಕಾಶ ಲಭಿಸಲಿದೆ. ಅನಾರೋಗ್ಯದಿಂದ ಹಾಸಿಗೆ ಹಿಡಿದಿರುವ 40 ವರ್ಷ ಮೇಲ್ಪಟ್ಟವರು ಹಾಗೂ 80 ವರ್ಷ ಮೇಲ್ಪಟ್ಟ, ಮತಗಟ್ಟೆಗಳಿಗೆ


● 9ನೇ ಪುಟಕ್ಕೆ

ಮೈಸೂರು ಮಿತ್ರ ಶುಕ್ರವಾರ 7 ಏಪ್ರಿಲ್ 2023

ಮೀಸಲಾತಿ ವಿಚಾರವಾಗಿ ಕಾಂಗ್ರೆಸ್ ಹೇಳಿಕೆ ಬರೀ ಡೋಂಗಿ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿರುಗೇಟು

ಬೆಂಗಳೂರು, ಏ.6 (ಕೆಎಂಶಿ)– ಮೀಸಲಾತಿ ಹೆಚ್ಚಿಸುವ ರಾಜಕೀಯ ಇಚ್ಛಾಶಕ್ತಿ



ಕಾಂಗ್ರೆಸ್ಸಿಗೆ ಇರಲಿಲ್ಲ, ಅವರದ್ದು ಬರೀ ಡೋಂಗಿತನ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೀಸಲಾತಿ ವಿಚಾರ ಬಿಜೆಪಿಗೆ ತಿರುಗುಬಾಣ ಆಗಲಿದೆ ಎಂಬ ಕಾಂಗ್ರೆಸ್ ಹೇಳಿಕೆಗೆ ತಿರುಗೇಟು ನೀಡಿದ ಅವರು, ನಮ್ಮ ನಿರ್ಧಾರಗಳು ಕಾಂಗ್ರೆಸ್‌ಗೆ ತಿರುಗುಬಾಣ ಆಗಲಿದೆ. ಕಾಂಗ್ರೆಸ್ ಮಾಡದೆ ಇದ್ದುದನ್ನು ಬಿಜೆಪಿ ಮಾಡಿ ತೋರಿಸಿದೆ ಎಂದರು.

ಇಷ್ಟು ದಿನ ದೀನದಲಿರನ್ನು ಕಾಂಗ್ರೆಸ್ ಮತ ಬ್ಯಾಂಕ್ ಮಾಡಿಕೊಂಡಿತ್ತು. ಅವರಿಗೆ ನ್ಯಾಯ ಒದಗಿಸುವ ಕೆಲಸವನ್ನು ನಾವು ಮಾಡಿದ್ದೇವೆ. ಹತಾಶೆಯಿಂದ ಕಾಂಗ್ರೆಸ್ ಆರೋಪಿಸುತ್ತಿದೆ. ಇಷ್ಟು ದಿನ ಅವರು ಹೇಳಿಕೊಂಡು ಬಂದಿದ್ದು ಅವರಿಗೇ ತಿರುಗು ಬಾಣ ಆಗಲಿದೆ ಎಂದರು. ರಾಜ್ಯ ಕೋರ್ ಕಮಿಟಿ ಸಭೆ ನಿನ್ನೆ ಮುಕ್ತಾಯವಾಗಿದೆ. ಏ.8ರಂದು ಸಭೆ ಸೇರಿ ಅಂತಿಮ ಪಟ್ಟಿ ಬಿಡುಗಡೆ ಮಾಡಲಾಗುವುದು ಎಂದರು.

ಹಾಲಿ ಶಾಸಕರಿಗೆ ಟಿಕೆಟ್ ಕೈ ತಪ್ಪುವ ವಿಚಾರವಾಗಿ ಪ್ರತಿಕ್ರಿಯೆ ನೀಡಿ ಮೂರು ನಾಲ್ಕು ಹಂತದಲ್ಲಿ ಪರಿಶೀಲಿಸಿ ವರದಿ ಪಡೆದುಕೊಳ್ಳಲಾಗಿದೆ. ಅದನ್ನೆಲ್ಲ ಗಮನ ದಲ್ಲಿಟ್ಟುಕೊಂಡು ಟಿಕೆಟ್ ನೀಡಲಾಗುವುದು.ಎರಡು ಕ್ಷೇತ್ರದಲ್ಲಿ ಸ್ಪರ್ಧಿಸುವುದು ಕೇವಲ ವದಂತಿ ಎಂದು ಸ್ಪಷ್ಟಪಡಿಸಿದ ಮುಖ್ಯಮಂತ್ರಿಗಳು, ಅದಕ್ಕೆ ಯಾರೂ ಕಿವಿ ಗೊಡಬಾರದು ಎಂದು ಹೇಳಿದರು. ಸೆಲೆಬ್ರಿಟಿಗಳು ಬಿಜೆಪಿ ಪರ ಪ್ರಚಾರ ವಿಚಾರಕ್ಕೆ ಸಂಬಂಧಿಸಿದಂತೆ ಮಾತನಾಡಿ, ತೆಲಗು ಚಿತ್ರನಟ ಪವನ್ ಕಲ್ಯಾಣ್ ಅವರನ್ನು ಕೇಂದ್ರ ನಾಯಕರು ಭೇಟಿಯಾಗಿದ್ದಾರೆ. ಈ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ. ಕಾದು ನೋಡಿ ಎಂದರು. ಅಪರಾಧ ಹಿನ್ನೆಲೆಯುಳ್ಳವರಿಗೆ ಬಿಜೆಪಿ ಟಿಕೆಟ್ ನೀಡಿರುವ ಬಗ್ಗೆ ಮಾತನಾಡಿ, ಕಾನೂನು ಬಹಳ ಸ್ಪಷ್ಟವಾಗಿದೆ. ಪ್ರಕರಣಗಳು ವಿವಿಧ ಹಂತದಲ್ಲಿ ಇರುತ್ತವೆ. ಇದನ್ನೆಲ್ಲ ಗಮನಿಸಿ ಟಿಕೆಟ್ ನೀಡಲಾಗುವುದು ಎಂದರು.

ಅಕ್ಕಮಹಾದೇವಿ ಜಯಂತಿ ಆಚರಣೆ



ಮೈಸೂರು,ಏ.6–ಶ್ರೀ ಅಂಬಾ ಭವಾನಿ ಮಹಿಳಾ ಸಮಾಜದ ವತಿಯಿಂದ ಅಕ್ಕಮಹಾದೇವಿ ಜಯಂತಿ ಪ್ರಯುಕ್ತ ಚಾಮುಂಡಿಬೆಟ್ಟದ ಪಾದದಲ್ಲಿರುವ ಶ್ರೀ ಅಂಬಾ ಭವಾನಿ ಮಹಿಳಾ ಸಮಾಜದ ಕಚೇರಿಯಲ್ಲಿ ಅಕ್ಕಮಹಾದೇವಿಯ ಭಾವ ಚಿತ್ರಕ್ಕೆ ಪುಷ್ಪಾರ್ಚನೆಯನ್ನು ಮಾಡಿ, ಸಿಹಿ ವಿತರಿಸಲಾಯಿತು. ಈ ವೇಳೆ ನಾಟ್ಯ ವಿದುಷಿ ಡಾ.ಚಿತ್ರಾ ಬಿಳಿಗಿರಿ ಮಾತನಾಡಿ, ಕನ್ನಡ ಸಾಹಿತ್ಯದಲ್ಲಿ ವಚನಗಳನ್ನು ಬರೆದ ಮೊದಲ ಮಹಿಳೆ ಎಂದು ಅಕ್ಕಮಹಾದೇವಿ ಪಾತ್ರವಾಗಿದ್ದು, ಅವರು ಒಬ್ಬ ಮಹಾನ್ ಕವಯತ್ರಿ. ದಕ್ಷಿಣ ಭಾರತದಲ್ಲಿ ಭಕ್ತಿಸಾರ ಹರಡುವಲ್ಲಿ ಮಹತ್ತರವಾದ ಪಾತ್ರವನ್ನು ವಹಿಸಿದ್ದಾರೆ. ಎಲ್ಲಾ ಮಹಿಳೆಯರಿಗೂ ಆದರ್ಶ ಶಿರೋಮಣಿಯಾಗಿ, ಇಹ ಭೋಗಗಳನ್ನು ತ್ಯಜಿಸಿ, ಜನರ ನಿಂದನೆ ಗಳನ್ನು ಮನಸ್ಸಿಗೆ ಹಾಕಿಕೊಳ್ಳದೆ ನಮ್ಮ ನಮ್ಮ ಕಾಯಕವನ್ನು ನಿಸ್ವಾರ್ಥತೆಯಿಂದ ಮಾಡಬೇಕೆಂದು ಅನುಭವ ಮಂಟಪ ದಲ್ಲಿ ಅನುಭವವನ್ನು ಹೇಳಿಕೊಟ್ಟವರು ಸಮಾಜವನ್ನುಖಿ ಕೆಲಸದಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳಬೇಕಾಗುತ್ತದೆ ಎಂದು ಅಭಿಪ್ರಾಯವನ್ನು ಹಂಚಿಕೊಂಡರು.

ಶ್ರೀ ಅಂಬಾ ಭವಾನಿ ಮಹಿಳಾ ಸಮಾಜದ ಅಧ್ಯಕ್ಷರಾದ ಸವಿತಾ ಘಾಟ್ಕೆ, ಕ್ಷತ್ರಿಯರ ಮುಖಂಡರಾದ ಗಾಯತ್ರಿ ಪಾಂಡೋಜಿರವರು, ಪ್ರೇಮ ರವಿ ಶಂಕರ್, ರೂಪ ರಾಘವೇಂದ್ರ ಮಮತಾ, ಮೀನಾ, ಶಶಿ ಇನ್ನಿತರರು ಹಾಜರಿದ್ದರು.

ಏ.11ರಿಂದ ಬೇಸಿಗೆ ಸ್ವರ್ಗ

ಮೈಸೂರು,ಏ.6–ನಗರದ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ವತಿಯಿಂದ 'ಜ್ಞಾನ ಪ್ರಕಾಶ ಭವನ'ದಲ್ಲಿ ಏ.11ರಿಂದ 13ರವರೆಗೆ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ 10ರಿಂದ 15 ವರ್ಷ ವಯೋಮಿತಿಯ ಮಕ್ಕಳಿಗಾಗಿ 'ಬೇಸಿಗೆ ಸ್ವರ್ಗ' ಎಂಬ ಶೀರ್ಷಿಕೆಯಲ್ಲಿ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿದೆ. ಶಿಬಿರದಲ್ಲಿ ಯೋಗ, ಧ್ಯಾನ, ಮೌಲ್ಯ ಶಿಕ್ಷಣ, ಆಟೋಟಗಳು, ವಿವಿಧ ಸ್ಪರ್ಧೆಗಳನ್ನು ಕಲಿಸಲಾಗುವುದು. ಮಾಹಿತಿಗಾಗಿ ಮೊಬೈಲ್ 8892257967 ಅಥವಾ 9900264937 ಸಂಪರ್ಕಿಸಬಹುದು.

ಮುಂದುವರೆದ ಆನ್‌ಲೈನ್ ದೋಖಾ

ಕೊಡಗಿನ ಯೋಧ ಸೇರಿ ಇಬ್ಬರಿಗೆ ಲಕ್ಷಾಂತರ ರೂ. ವಂಚಿಸಿದ ಖದೀಮರು

ಮಡಿಕೇರಿ, ಏ.6–ವ್ಯಕ್ತಿಯೋರ್ವರ ಕ್ರೆಡಿಟ್ ಕಾರ್ಡ್‌ನಿಂದ 1.99 ಲಕ್ಷ ರೂ. ಅಕ್ರಮವಾಗಿ ವರ್ಗಾವಣೆ ಮಾಡಿಕೊಂಡಿರುವ ಬಗ್ಗೆ ವರದಿಯಾಗಿದೆ. ವಿರಾಜಪೇಟೆ ತಾಲೂಕು ಬೋಯಿಕೇರಿ ನಿವಾಸಿ ಹೆಚ್.ಆರ್.ರವಿಕುಮಾರ್ ಎಂಬುವರು ಕ್ರೆಡಿಟ್ ಕಾರ್ಡ್ ಹೊಂದಿದ್ದು, ಕಳೆದ ಮಾ.24ರಂದು ಅವರ ಖಾತೆಯನ್ನು ಪರಿಶೀಲಿಸಿದಾಗ ಅದರಲ್ಲಿ ಕೇವಲ 46 ರೂ. ಮಾತ್ರ ಇತ್ತು. ಈ ಹಿನ್ನೆಲೆಯಲ್ಲಿ ಅವರು ಬ್ಯಾಂಕ್‌ಗೆ ಹೋಗಿ ಸ್ಟೇಟ್‌ಮೆಂಟ್ ತೆಗೆದು ನೋಡಿದಾಗ ಮಾ.3ರಂದು



ಎರಡು ಹಂತಗಳಲ್ಲಿ ಅವರ ಕ್ರೆಡಿಟ್ ಕಾರ್ಡ್‌ನಿಂದ 1,99,965 ರೂ. ಡ್ರಾ ಮಾಡಿರುವುದು ಗೊತ್ತಾಗಿದೆ. ರವಿಕುಮಾರ್ ಅವರು ಯಾರಿಗೂ ತನ್ನ ಕ್ರೆಡಿಟ್ ಕಾರ್ಡ್‌ನ ಮಾಹಿತಿಯನ್ನು ನೀಡಿಲ್ಲ. ಹೀಗಿದ್ದರೂ ಅವರ ಖಾತೆಯಿಂದ ಅಕ್ರಮವಾಗಿ ಹಣ ಡ್ರಾ ಆಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಯೋಧನೋರ್ವನ ಮೊಬೈಲ್ ಲಿಂಕ್ ಕಳುಹಿಸಿ 99,699 ರೂ. ಅಕ್ರಮವಾಗಿ ವರ್ಗಾವಣೆ ಮಾಡಿಕೊಳ್ಳಲಾಗಿದ್ದು, ಮಣಿಪುರದ ಇಂಫಾಲ್‌ನಲ್ಲಿ ಭಾರತೀಯ ಸೇನೆಯಲ್ಲಿ ಕೆಲಸ ಮಾಡಿಕೊಂಡಿರುವ ಶಿರಂಗಾಲ ಬಳಿಯ ಮೂಡ್ಲು ಕೊಪ್ಪಲು ಗ್ರಾಮದ ಎಂ.ಎನ್.ನಾಗೇಶ್ ರಜೆಗಾಗಿ ಸ್ವಗ್ರಾಮಕ್ಕೆ ಆಗಮಿಸಿದ್ದಾರೆ. ಏ.1ರಂದು ಅವರ ಮೊಬೈಲ್‌ಗೆ 7439357475 ಸಂಖ್ಯೆಯಿಂದ ಲಿಂಕ್‌ವೊಂದನ್ನು ರವಾನಿಸಿದ ನಂತರ 8327655147 ಸಂಖ್ಯೆಯಿಂದ ಕರೆ ಮಾಡಿದ ವ್ಯಕ್ತಿ ಲಿಂಕ್ ಮೇಲೆ ಕ್ಲಿಕ್ ಮಾಡಿ 3 ರೂ. ಕಳುಹಿಸುವಂತೆ ಹೇಳಿದ್ದಾನೆ. ಅದರಂತೆ ಅವರು ಕಳುಹಿಸಿದ ನಂತರ ಏ.2ರಂದು ಸಂಜೆ ಜಿತೇಂದ್ರಕುಮಾರ್ ಎಂದು ಹೇಳಿಕೊಂಡ ವ್ಯಕ್ತಿ ಕರೆ ಮಾಡಿ, ನಿಮಗೆ ಕೊರಿಯರ್ ಬರುತ್ತದೆ ಎಂದು ಹೇಳಿ ಕರೆಯನ್ನು ಕಟ್ ಮಾಡಿದ್ದಾನೆ. ತಕ್ಷಣವೇ ಅವರ ಖಾತೆಯಿಂದ 5 ಹಂತಗಳಲ್ಲಿ ಪ್ರೇಮ್‌ಸಿಂಗ್ ಹಾಗೂ ಪಂಕಜ್‌ಕುಮಾರ್ ಎಂಬ ಹೆಸರಿನ ಖಾತೆಗಳಿಗೆ ಒಟ್ಟು 99,699 ರೂ. ವರ್ಗಾವಣೆಯಾಗಿದೆ. ಇವೆರಡೂ ಪ್ರಕರಣಗಳು ಕೊಡಗು ಜಿಲ್ಲಾ ಸೆನ್ ಠಾಣೆಯಲ್ಲಿ ದಾಖಲಾಗಿವೆ.

ಗಾಂಜಾ ವಶ : ಓರ್ವನ ಬಂಧನ

ಮೈಸೂರು, ಏ.6– ಮೈಸೂರಿನ ಮಂಡಿ ಠಾಣೆ ಪೊಲೀಸರು ಓರ್ವನನ್ನು ಬಂಧಿಸಿ 1 ಕೆ.ಜಿ. ಗಾಂಜಾ ವಶಪಡಿಸಿಕೊಂಡಿದ್ದಾರೆ. ಮೂಲತಃ ಶಿವಮೊಗ್ಗ ಜಿಲ್ಲೆ ಭದ್ರಾವತಿಯವನಾಗಿದ್ದು, ಹಾಲಿ ಮೈಸೂರಿನ ಬಿಎಂಶ್ರೀ ನಗರದಲ್ಲಿ ವಾಸವಿರುವ ರಜಾಕ್ ಅಲಿಯಾಸ್ ಅಬ್ದುಲ್ ರಜಾಕ್ ಅಲಿಯಾಸ್ ಮೇಟು(36) ಬಂಧಿತನಾಗಿದ್ದು, ಈತ ಏ.4ರಂದು ರಾತ್ರಿ 8 ಗಂಟೆ ಸುಮಾರಿನಲ್ಲಿ ಲಷ್ಕರ್ ಮೊಹಲ್ಲಾದ ಕಾಂತರಾಜ ಅರಸ್ ಪಾರ್ಕ್ ರಸ್ತೆಯಲ್ಲಿರುವ ಬಾಬಾ ಲಾಡ್ಜ್ ಮುಂಭಾಗ ಕೈಯ್ಯಲ್ಲಿ ಬ್ಯಾಗ್ ಹಿಡಿದು ತೆರಳುತ್ತಿದ್ದಾಗ ಚುನಾವಣಾ ಅಕ್ರಮ ತಡೆಗಾಗಿ ಗಸ್ತಿನಲ್ಲಿದ್ದ ಮಂಡಿ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಎನ್.ಅನಿಲ್‌ಕುಮಾರ್ ನೇತೃತ್ವದ ತಂಡ ಈತನನ್ನು ಹಿಡಿದು ಶೋಧನೆ ನಡೆಸಿದಾಗ 1 ಕೆ.ಜಿ.ಗೂ ಹೆಚ್ಚು ತೂಕದ ಗಾಂಜಾ ಪತ್ತೆಯಾಗಿದೆ. ಈ ಸಂಬಂಧ ಮಂಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮನೆ ಬೀಗ ಮುರಿದು ಚಿನ್ನಾಭರಣ ಕಳವು

ಮೈಸೂರು,ಏ.6– ಮನೆ ಬೀಗ ಮುರಿದು ಚಿನ್ನಾಭರಣ ಕಳವು ಮಾಡಿರುವ



ಘಟನೆ ಮೈಸೂರಿನ ಜೆ.ಪಿ.ನಗರದ ನಾಚನಹಳ್ಳಿಪಾಳ್ಯದಲ್ಲಿ ನಡೆದಿದೆ. ಅಲ್ಲಿನ ನಿವಾಸಿ ಜಯಮ್ಮ(56) ಅವರು ಏ.3ರಂದು ಅಶೋಕಪುರಂನಲ್ಲಿರುವ ತಮ್ಮ ತಂದೆ ಮನೆಗೆ ಹೋಗಿದ್ದು, ಏ.5ರಂದು ಬೆಳಗ್ಗೆ ಹಿಂತಿರುಗಿದಾಗ ಅವರ ಮನೆ ಬೀಗ ಮುರಿದು 20 ಗ್ರಾಂ ತೂಕದ 2 ಬಳೆ, 5 ಗ್ರಾಂ ತೂಕದ ಓಲೆ, 4 ಗ್ರಾಂನ ಓಲೆ, 9 ಗ್ರಾಂನ 2 ಜೊತೆ ಮಾಟಿ, 9 ಗ್ರಾಂನ ಎರಡು ಉಂಗುರಗಳನ್ನು ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ವಿದ್ಯಾರಣ್ಯಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಮಪತ್ರ ಸಲ್ಲಿಕೆಗೆ ಚುನಾವಣಾಧಿಕಾರಿ ಕಚೇರಿಗಳಲ್ಲಿ ಸಿದ್ಧತೆ







ಮೈಸೂರು ಜಿಲ್ಲಾದ್ಯಂತ ಎಲ್ಲಾ 11 ವಿಧಾನಸಭಾ ಕ್ಷೇತ್ರಗಳ ಚುನಾವಣಾಧಿಕಾರಿಗಳ ಕಚೇರಿಗಳಲ್ಲಿ ನಾಮಪತ್ರ ಸಲ್ಲಿಕೆಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ಮೈಸೂರು,ಏ.6(ಆರ್‌ಕೆ)–ಚುನಾವಣಾ ವೇಳಾಪಟ್ಟಿ ಪ್ರಕಟಗೊಳ್ಳುತ್ತಿದ್ದಂತೆಯೇ ಜಿಲ್ಲಾಡಳಿತ ಮತ್ತು ಜಿಲ್ಲಾ ಚುನಾವಣಾಧಿಕಾರಿ ಕಚೇರಿಗಳು ಮೈಸೂರು ನಗರ ಮತ್ತು ಜಿಲ್ಲಾದ್ಯಂತ ಎಲ್ಲಾ 11 ಕ್ಷೇತ್ರಗಳ ಚುನಾವಣಾಧಿಕಾರಿಗಳ ಕಚೇರಿಗಳಲ್ಲಿ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಅಭ್ಯರ್ಥಿಗಳಿಂದ ನಾಮಪತ್ರ ಸ್ವೀಕರಿಸುವುದು, ನಾಮಪತ್ರಗಳ ಪರಿಶೀಲನೆ, ವಾಪಸ್ ಪಡೆಯುವುದು, ಅಭ್ಯರ್ಥಿಗಳ ಅಂತಿಮ ಪಟ್ಟಿ ಪ್ರಕಟಿಸುವುದು ಸೇರಿದಂತೆ ಒಟ್ಟಾರೆ 2023ರ ವಿಧಾನಸಭಾ ಚುನಾವಣೆ ಪ್ರಕ್ರಿಯೆ ನಡೆಸಲು ಚುನಾವಣಾಧಿಕಾರಿ (ರಿಟರ್ನಿಂಗ್ ಆಫಿಸರ್) ಗಳ ಕಚೇರಿಗಳಿಗೆ ಟೇಬಲ್, ಚೇರ್, ಇಂಟರ್‌ನೆಟ್ ಸಂಪರ್ಕ, ಲೇಖನ ಸಾಮಗ್ರಿಗಳು, ನಾಮಪತ್ರ ಸ್ವೀಕರಿಸಲು ಅಗತ್ಯ ಮೂಲ ಸೌಲಭ್ಯಗಳನ್ನು ಒದಗಿಸಲಾಗಿದೆ.

ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರದ ಚುನಾವಣಾಧಿಕಾರಿ, ಪಿರಿಯಾಪಟ್ಟಣ ತಾಲೂಕು ಕಚೇರಿ (08223–274175) ಯಲ್ಲಿ, ಕೆ.ಆರ್.ನಗರ ತಾಲೂಕು ಕಚೇರಿ (08223–262234)ಯಲ್ಲಿ, ಕೆ.ಆರ್.ನಗರ, ಹುಣಸೂರು ಉಪವಿಭಾಗಾಧಿಕಾರಿ ಕಚೇರಿ (08222–252073) ಯಲ್ಲಿ, ಹುಣಸೂರು, ಹೆಚ್.ಡಿ.ಕೋಟೆ ತಾಲೂಕು ಕಚೇರಿ (08228–244325) ಯಲ್ಲಿ, ಹೆಚ್.ಡಿ.ಕೋಟೆ, ನಂಜನಗೂಡು ತಾಲೂಕು ಕಚೇರಿ (08221–226252) ಯಲ್ಲಿ, ನಂಜನಗೂಡು, ಮೈಸೂರು ತಾಲೂಕು ಕಚೇರಿ (0821–2414811) ಯಲ್ಲಿ, ಚಾಮುಂಡೇಶ್ವರಿ, ಮೈಸೂರು ಮಹಾನಗರಪಾಲಿಕೆ ಮುಖ್ಯ ಕಚೇರಿ ನೆಲಮಹಡಿಯ ಕೊಠಡಿ ಸಂಖ್ಯೆ 20(0821–2427201) ರಲ್ಲಿ ಕೃಷ್ಣರಾಜ, ಮೊದಲ ಮಹಡಿಯ ಹಳೇ ಕೌನ್ಸಿಲ್ ಸಭಾಂಗಣ(0821–2427202)ದಲ್ಲಿ, ಚಾಮರಾಜ, ಚಾಮುಂಡಿವಿಹಾರ ಕ್ರೀಡಾಂಗಣದ ಮೊದಲ ಮಹಡಿಯ ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿ (0821–2427403)ಯಲ್ಲಿ ನರಸಿಂಹರಾಜ, ನಂಜನಗೂಡು ತಾಲೂಕು ಪಂಚಾಯ್ತಿ ಕಚೇರಿ (08221–226253) ಯಲ್ಲಿ ವರುಣಾ ಹಾಗೂ ತಿ.ನರಸೀಪುರ ತಾಲೂಕು ಕಚೇರಿ (08227–260210) ಯಲ್ಲಿ ತಿ.ನರಸೀಪುರ ವಿಧಾನಸಭಾ ಕ್ಷೇತ್ರದ ಚುನಾವಣಾಧಿಕಾರಿಗಳ ಕಚೇರಿಗಳನ್ನು ಸಜ್ಜುಗೊಳಿಸಲಾಗಿದೆ.

ಈಗಾಗಲೇ ಚುನಾವಣಾಧಿಕಾರಿಗಳು ಹಾಗೂ ಸಹಾಯಕ ಚುನಾವಣಾಧಿಕಾರಿಗಳು ಕಾರ್ಯೋನ್ಮುಖರಾಗಿದ್ದು, ಮಾದರಿ ನೀತಿ ಸಂಹಿತೆಯನ್ನು ಪರಿಣಾಮ ಕಾರಿಯಾಗಿ ಅನುಷ್ಠಾನಗೊಳಿಸಲು ಮುಂದಾಗಿದ್ದಾರೆ. ತಮ್ಮ ಕ್ಷೇತ್ರ ವ್ಯಾಪ್ತಿಯ ಚೆಕ್ ಪೋಸ್ಟ್‌ಗಳ ಕಾರ್ಯವೈಖರಿಗಳನ್ನು ಅವರು ನಿರಂತರವಾಗಿ ಪರಿಶೀಲಿಸುತ್ತಿದ್ದಾರೆ.

ನಡುಬೆಟ್ಟದ ಎಸ್ಟೇಟ್‌ನಲ್ಲಿ ಇಂದಿನಿಂದ ಪಂಚದೇವರ ಕೊಂಡೋತ್ಸವ


ಮೈಸೂರು, ಏ.6(ಎಂಟಿವೈ)– ತಮಿಳುನಾಡಿನ ಊಟಿಯಲ್ಲಿರುವ ಕನ್ನಡಿಗರು ಆಚರಿಸುವ ಪಂಚದೇವರ ಕೊಂಡೋತ್ಸವ ನಾಳೆ(ಏ.7)ಯಿಂದ ಎರಡು ದಿನಗಳ ಕಾಲ ವಿಜೃಂಭಣೆಯಿಂದ ನಡೆಯಲಿದೆ.



ನೀಲಗಿರಿ ಜಿಲ್ಲೆಯ, ಗೂಡಲೂರು ತಾಲೂಕಿನ, ನಡುಬೆಟ್ಟ ಪಂಚಾಯ್ತಿ ವ್ಯಾಪ್ತಿಯ ಲೋಯರ್ ಪ್ರಾಸ್ಪೆಕ್ಟ್ ಎಸ್ಟೇಟ್ (ಗಾರ್ಡನ್ ತೋಟ) ಎಂಬಲ್ಲಿ ಏ.7 ಮತ್ತು 8ರಂದು ಕೊಂಡೋತ್ಸವ ಜರುಗಲಿದೆ. ಸಿದ್ದಪ್ಪಾಜಿ, ಮಂಟೇಸ್ವಾಮಿ, ರಾಚಪ್ಪಾಜಿ, ದೊಡ್ಡಮ್ಮ ತಾಯಿ ಹಾಗೂ ಚೆನ್ನಾಜಮ್ಮ ದೇವರ ಕೊಂಡೋತ್ಸವ ಇದಾಗಿದ್ದು, ಪಂಚ ದೇವರುಗಳ ಕೊಂಡೋತ್ಸವ ಎಂದೇ ಜನಜನಿತವಾಗಿದೆ. ಈ ಕೊಂಡೋತ್ಸವದಲ್ಲಿ ಊಟಿ, ಕೂನೂರು, ಅರವನಕಾಡು ಮಾತ್ರವಲ್ಲದೆ, ಬೆಂಗಳೂರು, ಮೈಸೂರು, ಮಂಡ್ಯ, ಚಾಮರಾಜನಗರ, ಕೊಳ್ಳೇಗಾಲ ಸೇರಿದಂತೆ ಇನ್ನಿತರೆಡೆಯಲ್ಲಿ ನೆಲೆಸಿರುವ ನೀಲಗಿರಿ ಕನ್ನಡಿಗರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಪೂಜೆ ಸಲ್ಲಿಸುವ ಸಂಪ್ರದಾಯ ಅನುಸರಿಸುತ್ತಿದ್ದು, ಈ ಬಾರಿ ನಡೆಯುವ ಕೊಂಡೋತ್ಸವದಲ್ಲಿ ಅಪಾರ ಸಂಖ್ಯೆಯ ಭಕ್ತರು ಪಾಲ್ಗೊಳ್ಳಲಿದ್ದಾರೆ ಎಂದು ನಡುಬೆಟ್ಟ ಪಂಚಾಯ್ತಿ ವ್ಯಾಪ್ತಿಯ ಲೋಯರ್ ಪ್ರಾಸ್ಪೆಕ್ಟ್ ಎಸ್ಟೇಟ್ ಗ್ರಾಮದ ಮುಖಂಡರಾದ ಆರ್.ಸಿ.ಮಹಾದೇವ, ಆನಂದರಾಜು, ಎಂ.ರವೀಂದ್ರ, ದುಂಡು ಮಹಾದೇವ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಗತ್ಯ ಸೇವೆಯಲ್ಲಿರುವವರಿಗೆ ಅಂಚೆ ಮತಪತ್ರಗಳ ಮೂಲಕ ಮತದಾನಕ್ಕೆ ಅವಕಾಶ: ಡಿಸಿ ರಾಜೇಂದ್ರ

ಮೈಸೂರು,ಏ.6(ಎಂಕೆ)– ರಾಜ್ಯ ವಿಧಾನಸಭಾ ಚುನಾವಣೆಯ ಮತದಾನ ದಿನದಂದು





ಅಗತ್ಯ ಸೇವೆಯಲ್ಲಿರುವವರಿಗೆ ಅಂಚೆ ಮತಪತ್ರಗಳ ಮೂಲಕ ಮತದಾನಕ್ಕೆ ಅವಕಾಶ ಕಲ್ಪಿಸಲಾಗುತ್ತಿದೆ ಎಂದು ಚುನಾವಣಾಧಿಕಾರಿಗಳೂ ಆದ ಡಿಸಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ಅಂಚೆ ಮತಪತ್ರದ ಮೂಲಕ ಮತದಾನಕ್ಕೆ ಸಂಬಂಧಿಸಿದಂತೆ ನೋಡಲ್ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಭಾರತ ಚುನಾವಣಾ ಆಯೋಗದ ನಿರ್ದೇಶನದನ್ವಯ ಅಗತ್ಯ ಸೇವೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯುತ್ ಇಲಾಖೆ, ಬಿಎಸ್‌ಎನ್‌ಎಲ್, ರೈಲ್ವೆ, ಆರೋಗ್ಯ ಇಲಾಖೆ, ವಿಮಾನಯಾನ, ಸಾರಿಗೆ(ಕೆಕೆಆರ್‌ಟಿಸಿ), ಅಗ್ನಿಶಾಮಕದಳ, ಚುನಾವಣಾ ದಿನದ ಕವರೇಜ್ ಮಾಡುವ ಅಧಿಕೃತ ಮಾಧ್ಯಮ ಪ್ರತಿನಿಧಿಗಳು, ಟ್ರಾಫಿಕ್ ಪೊಲೀಸ್ ಹಾಗೂ ಆಂಬುಲೆನ್ಸ್ ಸೇವೆಯಲ್ಲಿರುವವರಿಗೆ ಅಂಚೆ ಮತಪತ್ರಗಳ ಮೂಲಕ ಮತಚಲಾಯಿಸಲು ಅವಕಾಶವಿರುತ್ತದೆ ಎಂದು ಅವರು ಹೇಳಿದರು.

ಅಗತ್ಯ ಸೇವೆಯಲ್ಲಿರುವವರು ಮತದಾನ ದಿನದ ಏಳು ದಿನ ಮುಂಚಿತವಾಗಿ ನಮೂನೆ–12ಡಿ ಫಾರ್ಮ್ ಭರ್ತಿ ಮಾಡಿ ಚುನಾವಣಾಧಿಕಾರಿಗಳಿಗೆ ಸಲ್ಲಿಸಬೇಕು. ನಮೂನೆ ಸಲ್ಲಿಸಿದ ಬಳಿಕ ಸಂಬಂಧಪಟ್ಟ ಇಲಾಖೆ, ಸಂಸ್ಥೆಗಳ ಮುಖ್ಯಸ್ಥರು ಅನುಮೋದನೆ ನೀಡಬೇಕು. ನಾಮಪತ್ರ ಪ್ರಕ್ರಿಯೆ ಮುಗಿದ ನಂತರ ಗೌಪ್ಯವಾಗಿ ಅಂಚೆ ಮತಪತ್ರಗಳ ಮೂಲಕ ಮತ ಚಲಾವಣೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ಈ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖೆ, ಸಂಸ್ಥೆಗಳು, ಮತದಾನ ದಿನದಂದು ಅಗತ್ಯ ಸೇವೆಯಲ್ಲಿ ಕಾರ್ಯನಿರ್ವಹಿಸುವ ನೌಕರರು, ಸಿಬ್ಬಂದಿಗೆ ನಮೂನೆ ಅರ್ಜಿ ಸಲ್ಲಿಸುವ ಕುರಿತಂತೆ ಮಾಹಿತಿ ನೀಡುವುದರ ಜೊತೆಗೆ ಮತದಾನಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ತಿಳಿಸಿದರು. ಸಭೆಯಲ್ಲಿ ಅಂಚೆ ಮತಪತ್ರದ ಜಿಲ್ಲಾ ನೋಡೆಲ್ ಅಧಿಕಾರಿ ವಿಷ್ಣುವರ್ಧನ ರೆಡ್ಡಿ, ನೋಡೆಲ್ ಅಧಿಕಾರಿಗಳು ಉಪಸ್ಥಿತರಿದ್ದರು.




ಮೈಸೂರಿನ ಯಾದವಗಿರಿಯಲ್ಲಿರುವ ಉತ್ತರಾದಿ ಮಠ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಹನುಮಾನ್ ಜಯಂತಿ ಅಂಗವಾಗಿ ಮಧು ಅಭಿಷೇಕ, ವಾಯುಸ್ತುತಿ ಪುನಸ್ಚರಣೆಯನ್ನು ಪಂಡಿತ್ ಕೊರ್ಲಹಳ್ಳಿ ಶ್ರೀನಿವಾಸಾಚಾರ್ಯ ನೆರವೇರಿಸಿದರು. ನಂತರ ಭಕ್ತಾದಿಗಳಿಗೆ ಪಾನಕ, ಮಜ್ಜಿಗೆ, ಕೋಸಂಬರಿ ವಿತರಿಸಲಾಯಿತು. ಪಂಡಿತ್ ವಿದ್ವಾನ್ ಅನಿರುದ್ಧಾಚಾರ್ಯ, ಪಂಡಿತ್ ಕೊರ್ಲಹಳ್ಳಿ ಶ್ರೀನಿವಾಸಾಚಾರ್ಯ, ಪ್ರಮೋದ್, ಸತ್ಯ ಬದ್ರಿನಾಥ್, ಸನತ್, ವಿಘ್ನೇಶ್ವರಭಟ್, ಶ್ರೀನಿವಾಸ್, ಅರ್ಚಕರಾದ ನಾಗಭೂಷಣ್, ಸುಧನ್ವ ಇದ್ದರು.



ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ಪಂಚಮುಖಿ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಗುರುವಾರ ಹನುಮ ಜಯಂತಿಯ ಅಂಗವಾಗಿ ಸ್ವಾಮಿಗೆ ವಿಶೇಷ ಅಲಂಕಾರ ಹಾಗೂ ವಿವಿಧ ಬಗೆಯ ನೈವೇದ್ಯ ಮತ್ತು ಧಾರ್ಮಿಕ ಕೈಂಕರ್ಯಗಳನ್ನು ನೆರವೇರಿಸಲಾಯಿತು. ಮೈಸೂರು ನಗರ–ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಡಿ.ಟಿ.ಪ್ರಕಾಶ್, ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಮ ಅಯ್ಯಂಗಾರ್, ಸುರೇಶ್, ಚರಣ್, ಗುರು, ಇರಲಾಲ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

7.4.2023 ಶುಕ್ರವಾರ, ಮಳೆ ನಕ್ಷತ್ರ: ರೇವತಿ, 31.03.2023ರಿಂದ 13.04.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ:ಪಾಡ್ಯ, ನಕ್ಷತ್ರ: ಚಿತ್ತ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಹೈಪೋಥೈರಾಯ್ಡ್ ಬಗ್ಗೆ ವೈದ್ಯಕೀಯ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9.30 ರಿಂದ.
- **ಸ್ಪಂದನ ಸಾಂಸ್ಕೃತಿಕ ಪರಿಷತ್ತು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ವಿಸ್ಮಯ ಪ್ರಕಾಶನ :** ರಾಜ್ಯ ಮಟ್ಟದ ಯುಗಾದಿ ಕಾವ್ಯ ಮೇಳ, ನಾಲ್ವಡಿ ಕೃಷ್ಣರಾಜ ಒಡೆಯರ್ ಸಮಾಜಮುಖಿ ಪ್ರಶಸ್ತಿ, ಯುವ ಚೇತನ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಹಿರಿಯ ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಆಶಯ ನುಡಿ : ಸ್ಪಂದನ ಸಾಂಸ್ಕೃತಿ ಪರಿಷತ್ ಸಂಸ್ಥಾಪಕ ಅಧ್ಯಕ್ಷ ಟಿ. ಸತೀಶ್ ಜವರೇಗೌಡ, ಪ್ರಶಸ್ತಿ ಪ್ರದಾನ : ಕವಯತ್ರಿ ಡಾ. ಲತಾ ರಾಜಶೇಖರ್, ಮುಖ್ಯ ಅತಿಥಿಗಳು : ಸಂಸ್ಕೃತಿ ಚಿಂತಕ ಕೆ. ರಘುರಾಂ ವಾಜಪೇಯಿ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಡಾ. ಎಂ.ಬಿ. ಮಂಜೇಗೌಡ, ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮ ನಂದೀಶ್, ಹಿರಿಯ ಸಾಹಿತಿ ಸಿದ್ದಲಿಂಗಯ್ಯ ಬನ್ನಂಗಾಡಿ, ಸ್ಥಳ: ಜಿಲ್ಲಾ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10ಕ್ಕೆ.
- **ಸೃಜನಶೀಲರು :** ವಾರ್ಷಿಕೋತ್ಸವ, ಪುಸ್ತಕ ಬಿಡುಗಡೆ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ, ಅತಿಥಿಗಳು : ಸಾಹಿತಿ ಡಾ. ಉಷಾದೇವಿ, ಚುಕ್ಕಿ ಚಿತ್ರಗಾರ ಮೋಹನ್ ವರ್ಣೇಕರ್, ಸಾಹಿತಿಗಳಾದ ಡಾ. ಸುಧಾ ರಮೇಶ್, ಶ್ರೀಮತಿ ಸಂಧ್ಯಾ ಬಾದಾಮಿ, ಸೃಜನಶೀಲ ಪ್ರಶಸ್ತಿ ಸ್ವೀಕರಿಸಲಿರುವವರು : ಹರವು ದೇವೇಗೌಡ (ಸ್ಮಾರಕ ಸಂರಕ್ಷಣೆ), ರಮೇಶ್ ವೈ (ಪರಿಸರ ಸಂರಕ್ಷಣೆ), ಕು. ಹರ್ಷಿಯಾ ಬಾನು (ಶಿಕ್ಷಣ ಮತ್ತು ಸಾಹಿತ್ಯ), ಸ್ಥಳ: ಚಂದ್ರವನ ಆಶ್ರಮ, ಶ್ರೀರಂಗಪಟ್ಟಣ, ಬೆಳಗ್ಗೆ 10ಕ್ಕೆ.
- **ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಕನ್ನಡ ಸಾಹಿತ್ಯ ಕಲಾಕೂಟ :** ಮಾರಿಯೋ ಪೂಜೋ ಅವರ ಡಾ. ನೇಸರ ಕಾಡನಕುಪ್ಪೆ ಅನುವಾದಿಸಿರುವ ಗಾಡ್‌ಫಾದರ್–1 ಕಾದಂಬರಿ ಲೋಕಾರ್ಪಣೆ ಸಮಾರಂಭ, ಅಧ್ಯಕ್ಷತೆ : ಸಾಹಿತಿ ಡಾ. ರಾಮೇಗೌಡ, ಕಾದಂಬರಿ ಲೋಕಾರ್ಪಣೆ: ವನ್ಯಜೀವಿ ಛಾಯಾಗ್ರಾಹಕ ಕೃಪಾಕರ ಸೇನಾನಿ, ಕಾದಂಬರಿ ಕುರಿತು: ಹಿರಿಯ ಪತ್ರಕರ್ತ ಕೆ.ನರಸಿಂಹಮೂರ್ತಿ, ಮುಖ್ಯ ಅತಿಥಿಗಳು : ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಸದಸ್ಯೆ ಪ್ರೊ.ಎನ್.ಉಷಾರಾಣಿ, ಲೇಖಕ ಡಾ.ನೇಸರ ಕಾಡನಕುಪ್ಪೆ, ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ.ಚಂದ್ರಶೇಖರ್, ಪ್ರಕಾಶಕ ಡಿ.ಎನ್.ಲೋಕಪ್ಪ, ಸ್ಥಳ: ರೋಟರಿ ಸೆಂಟರ್, ಎಫ್.ಕೆ.ಇರಾನಿ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.
- **ಸುಯೋಗ್ ಆಸ್ಪತ್ರೆ, ಸುಯೋಗ್ ಕಾಲೇಜ್ ಆಫ್ ನರ್ಸಿಂಗ್:** ವಿಶ್ವ ಆರೋಗ್ಯ ದಿನಾಚರಣೆ, ಉದ್ಘಾಟನೆ: ಮಹಾಕವಯತ್ರಿ ಡಾ. ಲತಾ ರಾಜಶೇಖರ್, ಅಧ್ಯಕ್ಷತೆ: ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ. ಎಸ್.ಪಿ.ಯೋಗಣ್ಣ, ವಿಶ್ವ ಆರೋಗ್ಯ ದಿನ ಕುರಿತು: ಐಎಂಎ ಅಧ್ಯಕ್ಷ ಡಾ.ವೈ.ಎನ್.ಶಿವಕುಮಾರ್, ಮುಖ್ಯ ಅತಿಥಿಗಳು : ಮುಡಾ ಮಾಜಿ ಆಯುಕ್ತ ಸಿ.ಜಯಣ್ಣ, ಶ್ರೀಮತಿ ಸುಧಾ ಯೋಗಣ್ಣ, ಸ್ಥಳ: ಸುಯೋಗ್ ಆಸ್ಪತ್ರೆ ಸಭಾಂಗಣ, ರಾಮಕೃಷ್ಣನಗರ, ಸಂಜೆ 4ಕ್ಕೆ.
- **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ಅನಿರುದ್ಧಾಚಾರ್ ಪಾಂಡುರಂಗಿ ಅವರಿಂದ ಪದ್ಮಪುರಾಣ ಕುರಿತು ಪ್ರವಚನ, ಸ್ಥಳ: ಶ್ರೀರಾಯರ ಮಠ, ಜಯಲಕ್ಷ್ಮಿಪುರಂ, ಸಂಜೆ 5ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಇಂಜಿನಿಯರಿಂಗ್ ವಿದ್ಯಾವಿಕಾಸ, ಪ್ರಾಯೋಜಕರು–ವಿದ್ಯಾವಿಕಾಸ ಇಂಜಿನಿಯರಿಂಗ್ ಕಾಲೇಜ್, ಮೈಸೂರು, 6.40 ಅರಿವಿನ ಶಿಖರ, ಗಾಯನ –ಸದಾಶಿವ ಪಾಟೀಲ್, ಡಾ.ಪಿ.ಎಸ್.ಮುರಳೀಧರ್, ವ್ಯಾಖ್ಯಾನ–ಡಾ.ಬೋರೇಗೌಡ ಚಿಕ್ಕಮರಳಿ, 7.15 ಭಾವಗೀತೆ–ಶಿವಮೊಗ್ಗ ಸುಬ್ಬಣ್ಣ, ಹೆಚ್.ಕೆ. ನಾರಾಯಣ, ಸುಲೋಚನ, 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 9.30 ಗಾಂಧೀ ಸ್ಮೃತಿ, 10.00 ಡಾ.ಎಸ್.ವಿಜಯರಾಘವನ್–ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ–ಉಮೇಶ್ ಎಸ್.ಎಸ್., 1.00 ರಂಗಗೀತೆಗಳು–ನಿರುಪಮ ನಾಟಕದ ಹಾಡುಗಳು, 1.20 ಭಾವಗೀತೆ–ಕೃಪಾ ಪ್ರಸಾದ್, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರಕುಮಾರ್, 3.00 ಮೌನದಾಚೆಯ ಬೆಳಕು–ಸದಾಶಿವ ಬ್ರಹ್ಮೇಂದ್ರರ ಜೀವನ ಹಾಗೂ ರಚನೆಗಳನ್ನಾಧರಿಸಿದ ವಿಶೇಷ ಕಾರ್ಯಕ್ರಮ ಸರಣಿ, 4.00 ಮಹಿಳಾರಂಗ– ಸಖೀಪದ, ಪ್ರಸ್ತುತಿ– ಎಂ.ಎಸ್. ಭಾರತಿ, 4.30 ವೃತ್ತಿ ಮಾರ್ಗದರ್ಶನ–ನ್ಯಾನೋ ಟೆಕ್ನಾಲಜಿ ಅಂಡ್ ಕಾಸ್ಮೆಟಿಕ್ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ. ಆಶಾ ಶ್ರೀನಿವಾಸನ್ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್‌ವಾಣಿ–ತೋಟಗಾರಿಕೆ ಬೆಳೆಗಳಿಗೆ ಬೋಡೋ ದ್ರಾವಣದ ಪ್ರಾಮುಖ್ಯತೆ ಕುರಿತು ಡಾ.ಜಿ.ನಾಗೇಶ್ ಅವರೊಂದಿಗೆ ಸಂದರ್ಶನ, 8.00 ವಿಜ್ಞಾನ ಭಾರತಿ–ಸಕ್ಕರೆಗೆ ಏಕೆ ಈ ಅಪವಾದ–ಈ ಕುರಿತು ಡಾ.ಮನೋಹರ್ ಎಂ.ಪಿ ಅವರೊಂದಿಗೆ ಮಾತುಕತೆಯಲ್ಲಿ ಭಾಗವಹಿಸುತ್ತಾರೆ–ಕೆ.ಬಿ.ಮೀನಾ, 9.15 ಜನಪದ ಸಂಗೀತ–ಮಾಯಮ್ಮ ಮತ್ತು ತಂಡ, 10.30 ಸವಿನೆನಪು

ನಗರದಲ್ಲಿ ವಿವಿಧೆಡೆ ಶ್ರೀರಾಮೋತ್ಸವ



- **ಶ್ರೀ ರಾಮ ಸೇವಾ ಚಾರಿಟಬಲ್ ಟ್ರಸ್ಟ್‌ನ ಅಂಗಸಂಸ್ಥೆ ಶ್ರೀ ರಾಮ ಸೇವಾ ಮಂಡಲಿ :** 70ನೇ ವರ್ಷದ ಶ್ರೀ ರಾಮೋತ್ಸವ, ವಿದುಷಿ ಶ್ರೀಮತಿ ಶುಭಾ ರಾಘವೇಂದ್ರ ಮತ್ತು ವೃಂದದವರಿಂದ ದೇವರ ನಾಮಗಳು, ಸ್ಥಳ: ಶ್ರೀ ಅವನಿ ಶಂಕರ ಮಠ, ವಿದ್ಯಾರಣ್ಯಪುರಂ, ಸಂಜೆ 6.30ಕ್ಕೆ.
- **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ :** ಶ್ರೀ ರಾಮೋತ್ಸವ, ವಿದ್ವಾನ್ ಪ್ರಸನ್ನ ವೆಂಕಟರಾಮನ್ ಮತ್ತು ವಿದ್ವಾನ್ ರಿತ್ವಿಕ್ ರಾಜ ಅವರಿಂದ ಶಾಸ್ತ್ರೀಯ ಸಂಗೀತ, ವಿದ್ವಾನ್ ಹೆಚ್.ಎನ್. ಭಾಸ್ಕರ್–ಪಿಟೀಲು, ವಿದ್ವಾನ್ ಡೆಲ್ಲಿ ಸಾಯಿರಾಂ–ಮೃದಂಗ, ವಿದ್ವಾನ್ ಬಿ. ರಾಜಶೇಖರ್–ಮೋರ್ಚಿಂಗ್, ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ, ಶ್ರೀರಾಮಪೇಟೆ, ಸಂಜೆ 6.30ಕ್ಕೆ.
- **ಶ್ರೀ ರಾಮ ಮಂದಿರ :** ಶ್ರೀ ರಾಮನವಮಿ, ಬೆಳಗ್ಗೆ ಶ್ರೀ ಚಂಡಿ ಹೋಮ, ಸಂಜೆ 6.30ಕ್ಕೆ ಸಾಗರ ಚಕ್ರವರ್ತಿ ಅವರಿಂದ ಭಕ್ತಿಗಾಯನ, ಸ್ಥಳ: ಶ್ರೀ ರಾಮ ಮಂದಿರ, ಜಯನಗರ.
- **ಶ್ರೀ ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರ :** 107ನೇ ರಾಮನವಮಿ ವಾರ್ಷಿಕ ಪರಂಪರೆಯ ಸಂಗೀತೋತ್ಸವ, ವಿದುಷಿ ಮಾನ್ಸಿ ಪ್ರಸಾದ್ ಅವರಿಂದ ಕರ್ನಾಟಕ ಶಾಸ್ತ್ರೀಯ ಗಾಯನ, ವಿದುಷಿ ಅದಿತಿ ಕೃಷ್ಣ ಪ್ರಕಾಶ್–ವಯೋಲಿನ್, ವಿದ್ವಾನ್ ಜಿ.ಎಸ್. ರಾಮಾನುಜಂ–ಮೃದಂಗ, ವಿದ್ವಾನ್ ವಿ.ಎಸ್. ರಮೇಶ್–ಘಟಂ, ಸ್ಥಳ: ಶ್ರೀ ಪ್ರಸನ್ನ ಸೀತಾರಾಮ ಮಂದಿರ, ಸಂಜೆ 6.15ಕ್ಕೆ.

ರಂಗ ಶಿಕ್ಷಣ ಪ್ರಯೋಗಾತ್ಮಕವಾಗಿರಬೇಕು ಬದಲಾಗಿ ಥಿಯರಿಗಳ ಕಲಿಸುವುದಲ್ಲ

● ರಂಗಕರ್ಮಿ ಡಾ.ಶಿವಪ್ರಕಾಶ್ ಅಭಿಮತ ● ವಾಣಿಜ್ಯೀಕರಣದಿಂದ ಬುಡಕಟ್ಟು ರಂಗ ಕಲೆಗಳು ನಾಶ

ಮೈಸೂರು,ಏ.6(ಎಂಕೆ)–ರಂಗ ಶಿಕ್ಷಣ ಕೇಂದ್ರಗಳು ಪ್ರಯೋಗಾತ್ಮಕವಾಗಿರಬೇಕೇ ಹೊರತು, ಸಿದ್ಧಾಂತಗಳೆಂಬ ಥಿಯರಿಗಳನ್ನು ಕಲಿಸುವುದಲ್ಲ. ಸಿದ್ಧಾಂತಕ್ಕೂ ನಮ್ಮ ನೆಲದ ನಿಜಗಳಿಗೂ ಯಾವುದೇ ಸಂಬಂಧವಿಲ್ಲ ಎಂದು ಹಿರಿಯ ಸಾಹಿತಿ ಮತ್ತು ನಾಟಕಕಾರ ಡಾ.ಹೆಚ್.ಎಸ್.ಶಿವಪ್ರಕಾಶ್ ಅಭಿಪ್ರಾಯಪಟ್ಟರು.



ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದಲ್ಲಿ ಆಯೋಜಿಸಿದ್ದ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ನಾಟಕಕಾರ ಡಾ.ಹೆಚ್.ಎಸ್.ಶಿವಪ್ರಕಾಶ್ ಅವರನ್ನು ಅಭಿನಂದಿಸಲಾಯಿತು.

ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದಲ್ಲಿ ವಿಶ್ವ ರಂಗ ಭೂಮಿ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ರಂಗ ಶಾಲೆಯೂ ಪಾಶ್ಚಿಮಾತ್ಯ ಮಾದರಿಯನ್ನೇ ಅನುಸರಿಸಿಕೊಂಡು ಬಂದಿದ್ದು, ನಮ್ಮ ದೇಶದ ಇತರೆ ಸ್ವಾಯತ್ತ ರಂಗ ಶಿಕ್ಷಣ ಸಂಸ್ಥೆಗಳು ಕೂಡ ಇದನ್ನೇ ಅನುಸರಿಸುತ್ತಿವೆ ಎಂದರು.

ಇಂಗ್ಲಿಷ್ ಬಂದ ನಂತರ ನಮ್ಮಲ್ಲಿರುವ ಕಲಾ ಪ್ರಕಾರಗಳನ್ನು ಗುರ್ತಿಸಲು ನಮ್ಮ ಬಳಿ ಸರಿಯಾದ ಶಬ್ದ ಪುಂಜವಿಲ್ಲ. ರಂಗ ಶಿಕ್ಷಣದಲ್ಲಿ ಬಳಸುವ ಪಾರಿಭಾಷಿಕ ಶಬ್ಧಗಳ ಸುಧಾರಣೆಯಾಗಬೇಕು. ವಾಣಿಜ್ಯೀಕರಣದಿಂದಾಗಿ ಬುಡಕಟ್ಟು ಸಮುದಾಯಗಳ ರಂಗ ಕಲೆಗಳು ನಶಿಸಿ ಹೋಗುತ್ತಿವೆ. ಅವುಗಳ ಸ್ವಾಯತ್ತತೆ ನಾಶವಾಗುತ್ತಿದೆ. ತಳ ಸಮುದಾಯಗಳ, ಆದಿವಾಸಿಗಳ ರಂಗಕಲೆಗಳನ್ನು ಸಾಮಾಜಿಕವಾಗಿ ಮುಖ್ಯವಾಹಿನಿಗೆ ತರುವ ಮೂಲಕ, ಅವರ ಪ್ರಗತಿಯ ಜೊತೆಗೆ ಕಲೆಗಳನ್ನು ಉಳಿಸುವ, ಬೆಳೆಸಲು ಕೆಲಸವನ್ನು ಸರ್ಕಾರ, ರಂಗ ತಜ್ಞರು, ವಿಶ್ವವಿದ್ಯಾಲಯಗಳು ಆದ್ಯತೆ ವಹಿಸಿ ಕೆಲಸ ಮಾಡಬೇಕು ಎಂದರು.

ಯಾವುದೇ ನಾಟಕ ಪ್ರದರ್ಶನಕ್ಕೂ ಮೊದಲು ಬಜೆಟ್ ಮುಖ್ಯವಾಗಿರುತ್ತದೆ. ನಾಟಕ ಎಂಬುದು ಸರಳವಾದದು. ಅಲ್ಲಿ ಮಾನವ ಸಂಪನ್ಮೂಲ ಶಕ್ತಿ ಹೆಚ್ಚು ಬಳಕೆಯಾಗಬೇಕೇ ವಿನಹ, ಆರ್ಥಿಕ ಸಂಪನ್ಮೂಲವಲ್ಲ. ಆದರೆ, ನಿರ್ದೇಶಕನ ಸರ್ವಾಧಿಕಾರದ ರಂಗಭೂಮಿ ಇದ್ದರೆ, ಅದು ಆಧುನಿಕ ರಂಗಭೂಮಿಯಾಗಿದೆ. ವಿಶ್ವವಿದ್ಯಾನಿಲಯಗಳಲ್ಲಿ ರಂಗಕಲೆಗಳನ್ನು ಕಲಿಸುವ ವೈಖರಿಯು ದೇಶದ ರಂಗ ಕಲೆಗಳ ವಾಸ್ತವತೆಗೆ ಹತ್ತಿರವಾಗಿಯೇ ಎಂಬುದರ ಬಗ್ಗೆ ಚಿಂತಿಸಬೇಕಾಗಿದೆ ಎಂದು ಸಲಹೆ ನೀಡಿದರು.

ಅಸ್ಪೃಶ್ಯತೆಗೆ ಒಳಗಾಗಿವೆ: ಸಂಗೀತ ವಿವಿ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಮಾತನಾಡಿ, ಪ್ರಸ್ತುತ ಎನ್‌ಇಪಿ ಶಿಕ್ಷಣ ಪದ್ಧತಿಯಲ್ಲಿ ಪ್ರದರ್ಶಕ ಕಲೆಗಳೂ ಒಳಪಟ್ಟಿರುವ ಹಿನ್ನೆಲೆಯಲ್ಲಿ ಹೆಚ್ಚು ಚರ್ಚೆಯಾಗುವ ಅಗತ್ಯವಿದೆ. ನಮ್ಮ ರಂಗ ಶಿಕ್ಷಣ ಮತ್ತು ಪ್ರದರ್ಶಕ ಕಲೆಗಳು ಅಸ್ಪೃಶ್ಯತೆಗೆ ಒಳಗಾಗಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸರ್ಕಾರ ಮತ್ತು ಆಡಳಿತದ ತಾರತಮ್ಯ ಧೋರಣೆಯಿಂದ ಪ್ರದರ್ಶಕ ಕಲೆಗಳ ಅಭಿವೃದ್ಧಿಗೆ ಅವಶ್ಯವಾದ ಆರ್ಥಿಕ ನೆರವು ದೊರೆಯುತ್ತಿಲ್ಲ. ನಮ್ಮಲ್ಲಿ ಒಬ್ಬರೂ ಖಾಯಂ ಪ್ರಾಧ್ಯಾಪಕರು ಇಲ್ಲ. ಎನ್‌ಇಪಿಯನ್ನು ಸುಮ್ಮನೆ ಜಾರಿ ಮಾಡಿದರೆ ಸಾಲದು, ಮೂಲ ಸೌಕರ್ಯ ಮತ್ತು ಸಂಪನ್ಮೂಲವನ್ನು ಒದಗಿಸಬೇಕು. ಪ್ರದರ್ಶಕ ಕಲೆಗಳಿಗೆ ಅನ್ಯಾಯವಾಗಿದೆ. ಹಾಗಾಗಿ, ಸರ್ಕಾರ ಇದರತ್ತಲೂ ಹೆಚ್ಚು ಗಮನ ನೀಡಬೇಕು ಎಂದರು. ವಿಚಾರ ಸಂಕಿರಣದಲ್ಲಿ ಭಾಗವಹಿಸಿದವರಿಗೆ ಹಾಗೂ ಸಂಶೋಧನಾ ಪ್ರಬಂಧ ಮಂಡಿಸಿದ ಸಂಶೋಧನಾ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ನೀಡಲಾಯಿತು. ಇದೇ ವೇಳೆ ನಾಟಕಕಾರ ಡಾ.ಹೆಚ್.ಎಸ್.ಶಿವಪ್ರಕಾಶ್ ಅವರನ್ನು ಅಭಿನಂದಿಸಲಾಯಿತು. ಸಂಗೀತ ವಿವಿಯ ಕುಲಸಚಿವ ಪ್ರೊ.ಟಿ.ಎಸ್.ದೇವರಾಜು ಉಪಸ್ಥಿತರಿದ್ದರು.

ಮೈಸೂರಲ್ಲಿಂದು ವಿಶ್ವ ಆರೋಗ್ಯ ದಿನಾಚರಣೆ

ಮೈಸೂರು, ಏ.6(ಪಿಎಂ)– ಸುಯೋಗ್ ಆಸ್ಪತ್ರೆ ಮತ್ತು ಸುಯೋಗ್ ಕಾಲೇಜ್ ಆಫ್ ನರ್ಸಿಂಗ್ ಜಂಟಿ ಆಶ್ರಯದಲ್ಲಿ ಏ.7ರಂದು ವಿಶ್ವ ಆರೋಗ್ಯ ದಿನಾಚರಣೆ ಹಮ್ಮಿಕೊಳ್ಳಲಾಗಿದೆ. ರಾಮಕೃಷ್ಣನಗರದಲ್ಲಿರುವ ಸುಯೋಗ್ ಆಸ್ಪತ್ರೆ ಸಭಾಂಗಣದಲ್ಲಿ ಅಂದು ಸಂಜೆ 4ಕ್ಕೆ ಕವಯತ್ರಿ ಡಾ.ಲತಾ ರಾಜಶೇಖರ್ ದಿನಾಚರಣೆ ಉದ್ಘಾಟಿಸಲಿದ್ದಾರೆ. ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ. ಎಸ್.ಪಿ.ಯೋಗಣ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ವಿಶ್ವ ಆರೋಗ್ಯ ದಿನ ಕುರಿತು ಐಎಂಎ ಅಧ್ಯಕ್ಷ ಡಾ.ವೈ.ಎನ್.ಶಿವಕುಮಾರ್ ಮಾತನಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ನಗರಾಭಿವೃದ್ಧಿ ಪ್ರಾಧಿಕಾರದ ನಿವೃತ್ತ ಆಯುಕ್ತ ಸಿ.ಜಯಣ್ಣ ಹಾಗೂ ಸುಯೋಗ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ಮ್ಯಾನೇಜಿಂಗ್ ಟ್ರಸ್ಟಿ ಸುಧಾ ಯೋಗಣ್ಣ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಏ.11ರಿಂದ ಚಿಣ್ಣರ ಲೋಕ ಬೇಸಿಗೆ ಶಿಬಿರ

ಮೈಸೂರು,ಏ.6–ಮೈಸೂರಿನ ಕಲಾಧಾರೆ ಕಲ್ಚರಲ್ ಟ್ರಸ್ಟ್ ವತಿಯಿಂದ ಏ.11ರಿಂದ ಮೇ 10ರವರೆಗೆ ಚಿಣ್ಣರ ಲೋಕ ಬೇಸಿಗೆ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರವು ಕನ್ನಡ ವಿಕಾಸ ಶೈಕ್ಷಣಿಕ, ಸಾಮೂಹಿಕ ಸಾಂಸ್ಕೃತಿಕ ಸಂಸ್ಥೆ, ನೃಪತುಂಗ ಕನ್ನಡ ಶಾಲೆ, ರಾಮಕೃಷ್ಣನಗರ, ಶ್ರೀ ಸಾಯಿಬಾಬಾ ದೇವಸ್ಥಾನ ಹತ್ತಿರ ನಡೆಯಲಿದೆ. ಶಿಬಿರದಲ್ಲಿ ವೈವಿಧ್ಯಮಯ ನೃತ್ಯಗಳು, ಸಂಗೀತ (ಹಾಡುಗಾರಿಕೆ), ನಾಟಕ, ಚಿತ್ರಕಲೆ, ಯೋಗ, ಕರಾಟೆ ಹೇಳಿಕೊಡಲಾಗುವುದು. ಮಾಹಿತಿಗೆ ಮೊ. 98807 77121, 9886389214 ಸಂಪರ್ಕಿಸಬಹುದು.

ಮೈಸೂರು ಬಿಜೆಪಿ ಕಚೇರಿಯಲ್ಲಿ ಬಿಜೆಪಿ ಸಂಸ್ಥಾಪನಾ ದಿನಾಚರಣೆ

ಮೈಸೂರು, ಏ.6(ಎಂಟಿವೈ)– ಮೈಸೂರಿನ ಚಾಮರಾಜ ಮೊಹಲ್ಲಾದಲ್ಲಿರುವ ಬಿಜೆಪಿ ಕಚೇರಿಯಲ್ಲಿ ಬಿಜೆಪಿ ಸಂಸ್ಥಾಪನಾ ದಿನ ಆಚರಿಸಲಾಯಿತು.



ಕಚೇರಿ ಮುಂದೆ ಪಕ್ಷದ ಹಿರಿಯ ಕಾರ್ಯಕರ್ತ ಶ್ರೀನಿವಾಸ್ ಅವರಿಂದ ಧ್ವಜಾರೋಹಣ ನೆರವೇರಿಸಿದ ಬಳಿಕ ಕಚೇರಿ ಒಳಗೆ ಪಕ್ಷದ ಸಂಸ್ಥಾಪಕರಾದ ಶ್ಯಾಮ್ ಪ್ರಕಾಶ್ ಮುಖರ್ಜಿ, ಪಂಡಿತ್ ದೀನ್ ದಯಾಳ್ ಉಪಾಧ್ಯಾಯರ ಭಾವಚಿತ್ರಕ್ಕೆ ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ ಹಾಗೂ ಗ್ರಾಮಾಂತರ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್ ಪುಷ್ಪಾರ್ಚನೆ ನೆರವೇರಿಸಿದರು.

ಇದೇ ವೇಳೆ ಪಕ್ಷದ ಹಿರಿಯ ಕಾರ್ಯಕರ್ತ ಶ್ರೀನಿವಾಸ್ ಮಾತನಾಡಿ, ದೇಶ ಸಂಕಷ್ಟದಲ್ಲಿದ್ದಾಗ ಜನರಲ್ಲಿ ದೇಶಪ್ರೇಮ ಮೂಡಿಸಲು ಹಿರಿಯರು ಬಿಜೆಪಿಯನ್ನು ಕಟ್ಟಿ ಬೆಳೆಸಿದ್ದಾರೆ. ಈಗ ವಿಶ್ವದ ಅತೀ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಪಕ್ಷ ದೊಡ್ಡ ಮಟ್ಟಕ್ಕೆ ಬೆಳೆಯಲು ಲಕ್ಷಾಂತರ ಕಾರ್ಯಕರ್ತರು ಶ್ರಮಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ದೇಶವನ್ನು ವಿಶ್ವಮಟ್ಟಕ್ಕೆ ಕೊಂಡೊಯ್ದಿದ್ದಾರೆ. ಇದು ನಮಗೆ ಹೆಮ್ಮೆ ಎನ್ನಿಸುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ, ವಿಭಾಗ ಸಹ ಪ್ರಭಾರಿ ಮೈ.ವಿ.ರವಿಶಂಕರ್, ಪ್ರಧಾನ ಕಾರ್ಯದರ್ಶಿಯಾದ ವಾಣೀಶ್ ಕುಮಾರ್, ಸೋಮಸುಂದರ್, ಮಾಧ್ಯಮ ಸಹ ಸಂಚಾಲಕ ಪ್ರದೀಪ್ ಕುಮಾರ್, ಸಹ ವಕ್ತಾರ ವಸಂತ ಕುಮಾರ್, ಚೇತನ್, ಪರಮೇಶ್‌ಗೌಡ, ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ಜೋಗಿ ಮಂಜು, ಪುರುಷೋತ್ತಮ್, ಪ್ರದೀಪ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಚುನಾವಣೆ ವೇಳೆ ಕೊಂಡೊಯ್ಯುವ ಮದ್ಯದ ಪ್ರಮಾಣದ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿ

ಮುಖ್ಯ ಚುನಾವಣಾಧಿಕಾರಿಗಳ ಕಚೇರಿಯಿಂದ ಅಬಕಾರಿ ಇಲಾಖೆ ಆಯುಕ್ತರಿಗೆ ಸೂಚನೆ

ಮೈಸೂರು, ಏ.6 (ಪಿಎಂ)– ಸಾರ್ವಜನಿಕರು ಸಾಗಿಸಬಹುದಾದ ಮದ್ಯದ ಪ್ರಮಾಣದ ಕುರಿತು ಸೂಕ್ತ ನಿರ್ದೇಶನ ಹೊರಡಿಸುವಂತೆ ಅಬಕಾರಿ ಇಲಾಖೆ ಆಯುಕ್ತರಿಗೆ ಮುಖ್ಯ ಚುನಾವಣಾಧಿಕಾರಿಗಳ ಕಚೇರಿಯಿಂದ ಪತ್ರ ಮುಖೇನ ಸೂಚನೆ ನೀಡಲಾಗಿದೆ.

ಮೈಸೂರು ಸಿಟಿ ಪೆನ್ಷನರ್ಸ್ ಅಸೋಸಿಯೇಷನ್ ಅಧ್ಯಕ್ಷ ಕೆ.ಸಿ.ಬಿದ್ದಪ್ಪ ಅವರು, ಮುಖ್ಯ ಚುನಾವಣಾಧಿಕಾರಿಗಳ ಕಚೇರಿಗೆ ಈ ಸಂಬಂಧ ಇ–ಮೇಲ್ ಮಾಡಿದ್ದ ಹಿನ್ನೆಲೆಯಲ್ಲಿ ಈ ಸೂಚನೆ ನೀಡಲಾಗಿದೆ. ಇ–ಮೇಲ್ ಲಗತ್ತಿಸಿ, ಅದರಲ್ಲಿರುವ ಅಂಶಗಳನ್ನು ಪರಿಶೀಲಿಸಿ ಚುನಾವಣಾ ಸಂದರ್ಭದಲ್ಲಿ ಮದ್ಯ ಕೊಂಡೊಯ್ಯುವ ಕುರಿತು ಅಬಕಾರಿ ಇಲಾಖೆಯ ನಿಯಮಗಳಲ್ಲಿರುವ ಅವಕಾಶಗಳ ಬಗ್ಗೆ ಸಾರ್ವಜನಿಕರಿಗೆ ಪತ್ರಿಕಾ ಪ್ರಕಟಣೆ ಮೂಲಕ ತಿಳುವಳಿಕೆ ನೀಡಬೇಕು.




ಬಳಿಕ ಈ ಸಂಬಂಧ ಕ್ರಮ ವಹಿಸಿರುವ ಬಗ್ಗೆ ಅನುಪಾಲನಾ ವರದಿಯನ್ನು ಮುಖ್ಯ ಚುನಾವಣಾಧಿಕಾರಿಗಳ ಕಚೇರಿಗೆ ತುರ್ತಾಗಿ ಸಲ್ಲಿಸುವಂತೆ ಜಂಟಿ ಮುಖ್ಯ ಚುನಾವಣಾಧಿಕಾರಿಗಳು ಪತ್ರದಲ್ಲಿ ತಿಳಿಸಿದ್ದಾರೆ.

ಇ–ಮೇಲ್ ವಿವರ: ಅನೇಕರು ತಮ್ಮ ಹಳೆಯ ಮದ್ಯವನ್ನು ತಮ್ಮ ವಾಹನಗಳಲ್ಲಿ ಕೊಂಡೊಯ್ಯುತ್ತಾರೆ. ಈ ಮದ್ಯದ ಸಂಬಂಧ ಬಿಲ್‌ಗಳನ್ನು ಇಟ್ಟುಕೊಳ್ಳುವುದು ವಾಸ್ತವವಾಗಿ ಕಷ್ಟಸಾಧ್ಯ. ಜೊತೆಗೆ ನಾವು ವಿದೇಶದಿಂದ ಸುಂಕ ಮುಕ್ತ ಮಳಿಗೆಗಳಲ್ಲಿ ಮದ್ಯ ಖರೀದಿಸಿದಾಗ ಅದರ ಯಾವುದೇ ಬಿಲ್ ಹೊಂದಿರುವುದಿಲ್ಲ. ಆದ್ದರಿಂದ ಮದ್ಯಕ್ಕೆ ಸಂಬಂಧಿಸಿದಂತೆ ಪುರಾವೆಯಾಗಿ ಬಿಲ್ ನೀಡಬೇಕೆಂದು ಒತ್ತಾಯಿಸದಂತೆ ಎಲ್ಲಾ ಚೆಕ್‌ಪೋಸ್ಟ್‌ಗಳಲ್ಲಿನ ಪೊಲೀಸ್ ಸಿಬ್ಬಂದಿಗೆ ಸೂಚನೆ ನೀಡಬೇಕು ಹಾಗೂ ಅನುಮತಿಸಿದ ಪ್ರಮಾಣದಲ್ಲಿ ಜನತೆ ಮದ್ಯ ಕೊಂಡೊಯ್ಯಲು ಅವಕಾಶ ಮಾಡಿಕೊಡಬೇಕೆಂದು ಇ–ಮೇಲ್‌ನಲ್ಲಿ ಕೆ.ಸಿ.ಬಿದ್ದಪ್ಪ ಕೋರಿದ್ದಾರೆ. ಅಲ್ಲದೆ, ಸಾರ್ವಜನಿಕರು ತಮ್ಮ ಕುಟುಂಬಗಳೊಂದಿಗೆ ರಜಾ ದಿನಗಳಲ್ಲಿ ಊಟಿ ಮತ್ತು ವೈನಾಡಿಗೆ ಭೇಟಿ ನೀಡಲು ನೆರೆಯ ರಾಜ್ಯಗಳಿಗೆ ಪ್ರಯಾಣಿಸುವಾಗ ಇದು ಹೆಚ್ಚು ಪ್ರಸ್ತುತವಾಗುತ್ತದೆ ಎಂದೂ ಇ–ಮೇಲ್‌ನಲ್ಲಿ ಉಲ್ಲೇಖಿಸಲಾಗಿದೆ.

ಮಾಜಿ ರಕ್ಷಣಾ ಸಚಿವ ಎ.ಕೆ.ಆಂಟನಿ ಪುತ್ರ ಅನಿಲ್ ಆಂಟನಿ ಬಿಜೆಪಿ ಸೇರ್ಪಡೆ

ನವದೆಹಲಿ: ಹಿರಿಯ ಕಾಂಗ್ರೆಸ್ ನಾಯಕ ಮತ್ತು ಮಾಜಿ ರಕ್ಷಣಾ ಸಚಿವ ಎಕೆ ಆಂಟನಿ ಅವರ ಪುತ್ರ ಅನಿಲ್ ಆಂಟನಿ ಅವರು ಗುರುವಾರ ಬಿಜೆಪಿಗೆ ಸೇರ್ಪಡೆಯಾದರು.



ದೆಹಲಿಯ ಬಿಜೆಪಿ ಕೇಂದ್ರ ಕಚೇರಿಯಲ್ಲಿ ಕೇಂದ್ರ ಸಚಿವರಾದ ಪಿಯೂಷ್ ಗೋಯಲ್ ಮತ್ತು ವಿ.ಮುರಳೀಧರನ್ ಅವರ ಸಮ್ಮುಖದಲ್ಲಿ ಅನಿಲ್ ಆಂಟನಿ ಅವರು ಕೇಸರಿ ಪಕ್ಷಕ್ಕೆ ಸೇರಿದರು. ಕೇರಳದ ಕಾಂಗ್ರೆಸ್ ನಾಯಕರಾಗಿದ್ದ ಅನಿಲ್ ಆಂಟನಿ, 2002ರ ಗುಜರಾತ್ ಗಲಭೆಗಳು ಮತ್ತು ಪ್ರಧಾನಿ ಮೋದಿ ಕುರಿತು ಬಿಬಿಸಿ ಸಾಕ್ಷ್ಯಚಿತ್ರ ವಿವಾದದ ನಂತರ ಜನವರಿಯಲ್ಲಿ ಕಾಂಗ್ರೆಸ್ ತೊರೆದಿದ್ದರು. ಬಿಜೆಪಿ ಸೇರಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅನಿಲ್ ಆಂಟನಿ, ಜಗತ್ತಿನಲ್ಲಿ ಭಾರತವನ್ನು ಪ್ರಮುಖ ಸ್ಥಾನದಲ್ಲಿ ಇರಿಸುವ ಸ್ಪಷ್ಟ ದೃಷ್ಟಿಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಹೊಂದಿದ್ದಾರೆ ಎಂದು ಹೇಳಿದರು.

ಇದ್ರಿಶ್ ಪಾಷಾ ಹಂತಕರಿಗೆ ಕಠಿಣ ಶಿಕ್ಷೆ ವಿಧಿಸಲು ಆಗ್ರಹಿಸಿ ಪ್ರತಿಭಟನೆ

ಮೈಸೂರು,ಏ.6(ಪಿಎಂ)–ಕನಕಪುರ ತಾಲೂಕು ಸಾತನೂರು ಗೋ ಸಾಗಾಣಿಕೆ ಪ್ರಕರಣ ಸಂಬಂಧ ಇದ್ರಿಶ್ ಪಾಷಾ ಹತ್ಯೆಗೈದ ಎಲ್ಲಾ ಹಂತಕರಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿ ಭಾರತ ಕಮ್ಯುನಿಸ್ಟ್ ಪಕ್ಷದ (ಮಾರ್ಕ್ಸ್‌ವಾದಿ) ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.



ಮೈಸೂರಿನ ಗಾಂಧಿಚೌಕದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಇದ್ರಿಶ್ ಕುಟುಂಬಕ್ಕೆ ತಕ್ಷಣವೇ 25 ಲಕ್ಷ ರೂ. ಪರಿಹಾರ ನೀಡಬೇಕು. ಜೊತೆಗೆ ಅವರ ಮಕ್ಕಳಿಗೆ ಉನ್ನತ ಶಿಕ್ಷಣದವರೆಗೆ ಉಚಿತ ವಿದ್ಯಾಭ್ಯಾಸ ಕಲ್ಪಿಸಿ, ಕುಟುಂಬಕ್ಕೊಂದು ಸರ್ಕಾರಿ ಉದ್ಯೋಗ ನೀಡಬೇಕು ಎಂದು ಒತ್ತಾಯಿಸಿದರು. ಇದೇ ರೀತಿ ಮತೀಯ ದ್ವೇಷಕ್ಕೆ ಬಲಿಯಾಗಿರುವ ಗದಗ ಜಿಲ್ಲೆಯ ಸಮೀರ್, ದಕ್ಷಿಣ ಕನ್ನಡ ಜಿಲ್ಲೆಯ ಮಸೂದ್, ಸುರತ್ಕಲ್ ಫಾಜಿಲ್, ಕಾಟಿಪಳ್ಳದ ಜಲೀಲ್ ಅವರ ಕುಟುಂಬಕ್ಕೂ ತಲಾ 25 ಲಕ್ಷ ರೂ. ಪರಿಹಾರ ನೀಡಬೇಕು. ಜೊತೆಗೆ ಈ ಎಲ್ಲಾ ಕುಟುಂಬಗಳಿಗೂ ತಲಾ ಒಂದು ಸರ್ಕಾರಿ ಉದ್ಯೋಗ ನೀಡಬೇಕು ಎಂದು ಆಗ್ರಹಿಸಿದರು. ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆ 2020 ಅನ್ನು ಈ ಕೂಡಲೇ ಕೈಬಿಡಬೇಕು. ಬಡ ಮುಸಲ್ಮಾನರಿಗಾಗಿ ಇದ್ದ 2ಬಿ ಮೀಸಲಾತಿ ಸೌಲಭ್ಯ ರದ್ದುಪಡಿಸಿರುವುದನ್ನು ಹಿಂಪಡೆದು, ಪುನಃ ಅದೇ ಮೀಸಲಾತಿ ಸೌಲಭ್ಯ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಪಕ್ಷದ ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ಜಿಲ್ಲಾ ಸಮಿತಿ ಸದಸ್ಯರಾದ ಕೆ.ಬಸವರಾಜ್, ಲ.ಜಗನ್ನಾಥ್, ಸ್ಥಳೀಯ ಸಮಿತಿ ಕಾರ್ಯದರ್ಶಿ ರಾಜೇಂದ್ರ, ಪಿಯುಸಿಎಲ್ ಸಂಘಟನೆಯ ಪ್ರೊ.ಕಾಳಚನ್ನೇಗೌಡ, ಮುಖಂಡರಾದ ಬಸವಯ್ಯ ಬಲರಾಂ, ವರುಣಾ ನಾಗರಾಜ್, ಕಲೀಂ, ಯತೀಶ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಕೆಪಿಸಿಸಿ ಕಾರ್ಯದರ್ಶಿ ಹಾಗೂ ನಾಗವಾಲ ಗ್ರಾಪಂ ಅಧ್ಯಕ್ಷ ಸಿ.ನರೇಂದ್ರ ಅವರಿಗೆ ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡ ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ವೇಳೆ ಜಿಪಂ ಮಾಜಿ ಸ್ಥಾಯಿ ಸಮಿತಿ ಅಧ್ಯಕ್ಷ ಬೀರಿಹುಂಡಿ ಬಸವಣ್ಣ, ಗ್ರಾಪಂ ಸದಸ್ಯ ಸೀಗಳ್ಳಿ ಕುಮಾರ್, ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ಬಿಳಿಕೆರೆ ಸ್ವಾಮಿ, ಯಜಮಾನ್ ವಿಷಕಂಠ ನಾಯಕ, ಜವರನಾಯಕ, ಪಾಪನಾಯಕ ಇದ್ದರು.

ನೀತಿಸಂಹಿತೆ ಉಲ್ಲಂಘನೆಗೆ ತಕ್ಷಣ ಪ್ರಕರಣ ದಾಖಲಿಸಿ

● ಮೈಸೂರು ಜಿಲ್ಲಾ ಮಾದರಿ ನೀತಿ ಸಂಹಿತೆ ನೋಡಲ್ ಅಧಿಕಾರಿ ಕೆ.ಎಂ.ಗಾಯಿತ್ರಿ ಸೂಚನೆ

ಮೈಸೂರು,ಏ.6–ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಮಾಡುವವರ ವಿರುದ್ಧ ತಕ್ಷಣ ಕಾನೂನು ಕ್ರಮ ಕೈಗೊಂಡು, ಪ್ರಕರಣ ದಾಖಲು ಮಾಡಬೇಕೆಂದು ಸ್ಥಿರ ಕಣ್ಗಾವಲು ತಂಡ ಹಾಗೂ ಕ್ಷಿಪ್ರ ಕ್ರಿಯಾ ತಂಡದ ಅಧಿಕಾರಿಗಳಿಗೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಜಿಲ್ಲಾ ಮಾದರಿ ನೀತಿ ಸಂಹಿತೆ ನೋಡಲ್ ಅಧಿಕಾರಿ ಕೆ.ಎಂ.ಗಾಯಿತ್ರಿ ತಿಳಿಸಿದರು.

ಹೆಚ್.ಡಿ.ಕೋಟೆ ತಾಲೂಕಿನ ಅಂಬೇಡ್ಕರ್ ಭವನದ ಸಭಾಂಗಣದಲ್ಲಿ ಗುರುವಾರ ಚುನಾವಣೆ ಸಂಬಂಧಿಸಿದಂತೆ ಸ್ಥಿರ ಕಣ್ಗಾವಲು ತಂಡ (SST) ಹಾಗೂ ಕ್ಷಿಪ್ರ ಕ್ರಿಯಾ ತಂಡ (FST)ಗಳಿಗೆ ನಡೆದ ಚುನಾವಣಾ ತರಬೇತಿ ಕಾರ್ಯಕ್ರಮದಲ್ಲಿ ಅವರು ಚುನಾವಣಾ ಕರ್ತವ್ಯಕ್ಕೆ ನಿಯೋಜನೆಗೊಂಡಿರುವ ಅಧಿಕಾರಿಗಳು ಮಾನಸಿಕವಾಗಿ ಸಿದ್ಧರಾಗಿ, ಎಲ್ಲರೊಂದಿಗೆ ಕಾರ್ಯನಿರ್ವಹಿಸಿದಾಗ ಮಾತ್ರ ಚುನಾವಣೆ ಸಮಯದಲ್ಲಿ ನಡೆಯುವ ಅಕ್ರಮ ಚಟುವಟಿಕೆಗಳನ್ನು ತಡೆಯಬಹುದು. ಚುನಾವಣೆಗೆ ನೇಮಕ ಆಗಿರುವ ಅಧಿಕಾರಿಗಳಿಂದ ಕರ್ತವ್ಯಲೋಪ ಕಂಡು ಬಂದಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದರು.

ಕ್ಷಿಪ್ರ ಕ್ರಿಯಾ ತಂಡ (FST)ದವರು ಆಯಾಯ ಮತಗಟ್ಟೆ ವ್ಯಾಪ್ತಿಯಲ್ಲಿ ಬೂತ್ ಲೆವೆಲ್ ಅಧಿಕಾರಿಗಳಾದ ಶಿಕ್ಷಕರು, ಅಂಗನವಾಡಿ ಕಾರ್ಯಕರ್ತೆಯರ ಮಾಹಿತಿಯನ್ನು ಸಂಗ್ರಹಿಸಿಕೊಂಡು ಮತದಾರರ ಜಾಗೃತಿ ತಂಡ ರಚಿಸಿಕೊಂಡರೆ ನಿಮ್ಮ ಕರ್ತವ್ಯ ನಿರ್ವಹಿಸಲು ಸಹಕಾರಿಯಾಗಲಿದೆ ಎಂದು ಹೇಳಿದರು.



ಕೆ.ಎಂ.ಗಾಯಿತ್ರಿ

ಚುನಾವಣೆ ಅವಧಿಯಲ್ಲಿ ದಾಖಲೆ ಇಲ್ಲದೆ 50 ಸಾವಿರಕ್ಕಿಂತ ಹೆಚ್ಚಿನ ಹಣವನ್ನು ಸಾಗಿಸುವಂತಿಲ್ಲ. ಒಂದು ವೇಳೆ ಹೆಚ್ಚು ಹಣ ಸಾಗಿಸುವ ವ್ಯಕ್ತಿಗಳಿಂದ ಹಣ ಮುಟ್ಟುಗೋಲು ಹಾಕಿಕೊಳ್ಳುವಾಗ ಅಧಿಕಾರಿಗಳು ಉದ್ವೇಗಕ್ಕೆ ಒಳಗಾಗದೆ ಸಾವಧಾನವಾಗಿ ಮಾತನಾಡಬೇಕು. ಅಭ್ಯರ್ಥಿಗಳು 40 ಲಕ್ಷದವರೆಗೂ ಚುನಾವಣಾ ಖರ್ಚು ಮಾಡಬಹುದಾಗಿದ್ದು, ಅಭ್ಯರ್ಥಿಗಳ ವೆಚ್ಚದ ಬಗ್ಗೆಯೂ ನಿಗಾ ವಹಿಸಬೇಕು ಎಂದರು.

ಮತಗಟ್ಟೆ ಕೇಂದ್ರಗಳಲ್ಲಿ ವಯಸ್ಸಾದವರು ಬಿಸಿಲಲ್ಲಿ ನಿಲ್ಲಲು ಸಾಧ್ಯವಿಲ್ಲ, ಅಂಥವರಿಗೆ ಕೂರಲು ಕಾಯ್ದಿರಿಸುವಿಕೆ ಕೊಠಡಿ ಇರಬೇಕು. ಶೌಚಾಲಯ ಇದ್ದರೂ ತಾತ್ಕಾಲಿಕವಾಗಿ ಮತ್ತೊಂದು ಶೌಚಾಲಯ ನಿರ್ಮಿಸಬೇಕು. ಕುಡಿಯುವ ನೀರಿನ ವ್ಯವಸ್ಥೆ ಇರಬೇಕು. ಚುನಾವಣಾ ಅಕ್ರಮಗಳು ಕಂಡು ಬಂದರೆ ಸಿವಿಜಿಲ್ ಆ್ಯಪ್ ಮೂಲಕ ಸಾರ್ವಜನಿಕರು ದೂರುಗಳನ್ನು ಸಲ್ಲಿಸಬಹುದಾಗಿದೆ ಎಂದರು.

ಪ್ರಾಚ್ಯವಸ್ತು ಸಂಗ್ರಹಾಲಯದ ಆಯುಕ್ತ ದೇವರಾಜ್ ಮಾತನಾಡಿ, ಚುನಾವಣಾ ನೀತಿ ಸಂಹಿತೆ ಕುರಿತು ಮಾಹಿತಿ ನೀಡಿ, ಪ್ರತಿಯೊಬ್ಬ ಮತದಾರರು ಅದರೆ ಬಗ್ಗೆ ಜಾಗೃತಿ ಮೂಡಿಸಬೇಕು ಎಂದರು. ಈ ಸಂದರ್ಭದಲ್ಲಿ ಚುನಾವಣಾಧಿಕಾರಿ ಕುಮುದ, ಹೆಚ್.ಡಿ.ಕೋಟೆ ತಹಶೀಲ್ದಾರ್ ಮಹೇಶ್, ಸರಗೂರು ತಹಶೀಲ್ದಾರ್ ಆಲಂ, ಹೆಚ್.ಡಿ.ಕೋಟೆ ತಾಪಂ ಇಓ ಜೆರಾಲ್ಡ್ ರಾಜೇಶ್, ಸರಗೂರು ಇಓ ಸುಷ್ಮಾ.ಕೆ, ಜಿಲ್ಲಾ ಪಂಚಾಯಿತಿ ಸಹಾಯಕ ಯೋಜನಾಧಿಕಾರಿ ಎ.ಎನ್.ಸುಬ್ರಹ್ಮಣ್ಯ ಶರ್ಮ ಸೇರಿದಂತೆ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : (ಮನೆಗೆ ಬಂದು ಪರೀಕ್ಷೆ ಮಾಡಿ) "ರಾಯರೇ, ದೇವರಿದ್ದಾನೆ ಧೈರ್ಯವಾಗಿರಿ. ನಾಳೆ ಬೆಳಿಗ್ಗೆ ಬಂದು ನಿಮ್ಮನ್ನು ನೋಡ್ತೇನೆ"

ರಾಯರು : "ನೀವೇನೋ ನೋಡ್ತೀರಿ ಡಾಕ್ಟರ್. ಆದರೆ ನಾನು ನಿಮ್ಮನ್ನು ನೋಡೋ ಬಗ್ಗೆ ಗ್ಯಾರಂಟಿ ಕೊಡಿ"

ಮೈಸೂರು ಮಿತ್ರ

ಶುಕ್ರವಾರ, 7 ಏಪ್ರಿಲ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಬೋಧನೆಯೆಂದರೆ ಬಾಗಿಲು ತಟ್ಟುವ ಮಾರ್ಗ ಮಾತ್ರ

–ಜಗ್ಗಿ ವಾಸುದೇವ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬರಿಗೈಯಿಂದ ಮೊಳ ಹಾಕಿದ ಹಾಗೆ

ನಿಮ್ಮ ಪತ್ರಗಳು

ಟ್ರಂಪ್ ಬಂಧನ ಸ್ವಾಗತಾರ್ಹ

ಮಾನ್ಯರೆ,



ಅಮೇರಿಕಾದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ನೀಲಿಚಿತ್ರ ನಟಿಗೆ ಹಣ ವರ್ಗಾವಣೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಆ ದೇಶದ ಪೊಲೀಸರು ಬಂಧಿಸಿರುವುದು ಸ್ವಾಗತಾರ್ಹವಾಗಿದೆ. ಇದೊಂದು ವಿರಳ ಪ್ರಕರಣವಾಗಿದ್ದು, ದೇಶದ ಕಾನೂನು ಎಲ್ಲರಿಗೂ ಒಂದೇ ಎಂಬ ಪರಮ ಸತ್ಯವನ್ನು ಸಾಕಾರಗೊಳಿಸಿರುವ ಅಮೇರಿಕದ ನ್ಯಾಯಾಂಗ ಇಲಾಖೆ, ಯಾವುದೇ ಮುಲಾಜಿಲ್ಲದೇ ಆ ದೇಶದ ಅತ್ಯಂತ ಪ್ರಭಾವಿ ವ್ಯಕ್ತಿಗಳಲ್ಲಿ ಒಬ್ಬರಾಗಿರುವ ಟ್ರಂಪ್ ಅವರನ್ನು ಬಂಧಿಸಿದೆ. ಅಧಿಕಾರದಲ್ಲಿದ್ದಾಗ ಟ್ರಂಪ್ ಅವರು ಭಾರತ ವಿರೋಧಿ ಧೋರಣೆ ತಳೆದಿದ್ದರು. ಭಾರತದ ಟೆಕ್ಕಿಗಳ ವೀಸಾ ವಿಸ್ತರಣೆಗೆ ಸಂಬಂಧಿಸಿದಂತೆ, ಗೊಂದಲ ಸೃಷ್ಟಿಸಿದ್ದರು.

ಇನ್ನು ಕೋವಿಡ್ ಸೋಂಕಿನ ನಿರ್ವಹಣೆಯಲ್ಲಂತೂ ಅವರು ನೀಡಿದ್ದ ಬಾಲಿಶ ಹೇಳಿಕೆಗಳು ಇಡೀ ವಿಶ್ವದ ಮುಂದೆ ಅವರನ್ನು ನಗೆಪಾಟಲಿಗೆ ಈಡು ಮಾಡಿತ್ತು. ಅವರ ಅಧಿಕಾರಾವಧಿಯಲ್ಲಿ ಕೋವಿಡ್ ಸೋಂಕಿನಿಂದ ಸತ್ತವರ ಸಂಖ್ಯೆ ತೀವ್ರ ಏರಿಕೆಯ ಗತಿಯಲ್ಲಿ ಸಾಗಿತ್ತು. ಇದಕ್ಕೆ ಅವರು ನೇರ ಕಾರಣವಲ್ಲವಾದರೂ, ಸೋಂಕಿನ ನಿರ್ವಹಣೆಯಲ್ಲಿ ಅವರು ಸೋತಿದ್ದರು. ಭಾರತ, ಇಟಲಿ, ಸೇರಿದಂತೆ ಕೆಲವು ದೇಶಗಳು ಕೋವಿಡ್ ಸೋಂಕನ್ನು ಸಮರ್ಥ ರೀತಿಯಲ್ಲಿ ಎದುರಿಸಿದ್ದವು. ಬಹುಶಃ ಇದಕ್ಕಾಗಿಯೇ ಅವರು ಎರಡನೇ ಬಾರಿಗೆ ಅಧ್ಯಕ್ಷೀಯ ಚುನಾವಣೆಯಲ್ಲಿ ಗೆಲ್ಲಲು ಸಾಧ್ಯವಾಗಲಿಲ್ಲ. ಅದೇನೆ ಇರಲಿ, ಕಾನೂನಿನ ಪರಮೋಚ್ಛತೆಯನ್ನು ಎತ್ತಿ ಹಿಡಿದ ಆ ದೇಶದ ನ್ಯಾಯಾಂಗಕ್ಕೆ ಅಭಿನಂದನೆಗಳು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಮಹಿಳೆಯರಿಗೆ ಇನ್ನೂ ಸಿಗದ ಬಸ್ ಪಾಸ್ ಸೌಲಭ್ಯ

ಮಾನ್ಯರೆ,

ಪ್ರಸ್ತುತ ಸಾಲಿನ ಬಜೆಟ್‌ನಲ್ಲಿ ಕಳೆದ ಫೆಬ್ರವರಿ 19ರಂದು 23–24ನೇ ಸಾಲಿನ ರಾಜ್ಯ ಬಜೆಟ್ ಮಂಡನೆ ಮಾಡಿದ್ದ ರಾಜ್ಯದ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ ಅವರು ಮಹಿಳೆಯರ ಸಬಲೀಕರಣದ ಉದ್ದೇಶದಿಂದ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಮೀಸಲಿರಿಸಲಾಗಿತ್ತು.

ಇದರಿಂದ "ಗೃಹಿಣಿ ಶಕ್ತಿ" ಯೋಜನೆಯ ಕಾರ್ಯರೂಪದಡಿಯಲ್ಲಿ ರಾಜ್ಯದಲ್ಲಿ 30 ಲಕ್ಷಕ್ಕೂ ಹೆಚ್ಚು ಮಹಿಳೆಯರು ದುಡಿಯಲು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗಲು ಹಣವ್ಯಯ ಮಾಡುತ್ತಾರೆ. ಇದನ್ನು ಗಮನಿಸಿದ ಸರ್ಕಾರ ದುಡಿಯುವ ಮಹಿಳೆಯರಿಗೆ ಉಚಿತ ಬಸ್ ಪಾಸ್ ಸೌಲಭ್ಯವನ್ನು 2023ರ ಏಪ್ರಿಲ್ 1 ತಾರೀಖು ಜಾರಿಗೊಳಿಸುವ ಭರವಸೆಯ ನೀಡಿದರು. ಆದರೆ ಏಪ್ರಿಲ್ 5 ಆದರೂ ಇನ್ನೂ ಕೂಡ ಜಾರಿಗೆ ಬರಲಿಲ್ಲ. ಇದರಿಂದ ರಾಜ್ಯದಲ್ಲಿ ದುಡಿಯುವ ಮಹಿಳೆಯರು ಗಲಿಬಿಲಿಗೊಂಡಿದ್ದಾರೆ. ಆದ್ದರಿಂದ ಕೊಟ್ಟ ಮಾತನ್ನು ಜಾರಿಗೊಳಿಸಲು ಸರ್ಕಾರ ವಿಫಲವಾಯಿತೆ...?

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ಖಾಸಗಿ ಚಾನಲ್‌ಗಳಿಗೆ ಕಡಿವಾಣ ಅಗತ್ಯ

ಮಾನ್ಯರೆ,

ಮುಂದಿನ ವಿಧಾನಸಭಾ ಚುನಾವಣೆ ಫಲಿತಾಂಶ ಹೊರಬೀಳುವುದು ಮೇ 13 ರಂದು. ಆದರೆ ಕೆಲವು ಖಾಸಗಿ ಟಿವಿ ಚಾನಲ್‌ಗಳು ಪೈಪೋಟಿಗೆ ಬಿದ್ದವರಂತೆ ಈಗಾಗಲೇ ಕ್ಷೇತ್ರವಾರು, ಜಿಲ್ಲಾವಾರು, ಪ್ರಾಂತ್ಯವಾರು ಫಲಿತಾಂಶಗಳನ್ನು ಪ್ರಕಟಿಸುತ್ತಿರುವುದು ನೋಡಿದರೆ ಇದು ಚುನಾವಣೆಗೆ ಸ್ಪರ್ಧೆ ಮಾಡಲು ಬಯಸುವ ಅಭ್ಯರ್ಥಿಗಳು ಮಾನಸಿಕ ಒತ್ತಡಕ್ಕೆ ಒಳಗಾಗುತ್ತಾರೆ.

ಯಾವುದೇ ಪಕ್ಷವೂ ಇನ್ನೂ ಪೂರ್ಣವಾಗಿ ಅಭ್ಯರ್ಥಿಗಳನ್ನೇ ಪ್ರಕಟಿಸಿಲ್ಲ. ಆದರೂ ನಮ್ಮ ಖಾಸಗಿ ಚಾನಲ್‌ಗಳು ಫಲಿತಾಂಶವನ್ನು ಪ್ರಕಟಿಸುತ್ತಿರುವುದು ಯಾರೂ ಸಹ ನಂಬುವಂತಹದ್ದಲ್ಲ. ಮತದಾರರು ಇದನ್ನು ಕೇವಲ ಟೈಮ್ ಪಾಸ್ ಅಥವಾ ಮನರಂಜನೆಗಾಗಿ ನೋಡುತ್ತಿದ್ದಾರೆ ಅಷ್ಟೆ,

ಎಲ್ಲಕ್ಕಿಂತಲೂ ತಮಾಷೆಯ ಸಂಗತಿ ಎಂದರೆ, ಖಾಸಗಿ ಚಾನಲ್‌ವೊಂದರಲ್ಲಿ ಮುಂದಿನ ಮುಖ್ಯಮಂತ್ರಿಯಾಗಿ ಯಾರು ಪ್ರಮಾಣ ವಚನ ಸ್ವೀಕರಿಸುತ್ತಾರೆ ಎನ್ನುವ ಮಟ್ಟಿಗೆ ಹೋಗಿದ್ದಾರೆ. ಇವೆಲ್ಲವೂ ತೀರ ಅತಿಯಾಯಿತು. ಇದಕ್ಕೆಲ್ಲಾ ಕೇಂದ್ರ ಚುನಾವಣಾ ಆಯೋಗ ಕಡಿವಾಣ ಹಾಕಲು ಸಾಧ್ಯವಿಲ್ಲವೆ?

–ಬೂಕನಕೆರೆ ವಿಜೇಂದ್ರ, ಮೈಸೂರು

ರಾಜಕೀಯ ನಿರೀಕ್ಷೆಗಳು ಸುಳ್ಳಾಗದಿರಲಿ

ಮಾನ್ಯರೆ,

ಭಾರತದ ರಾಜಕೀಯದ ಸನ್ನಿವೇಶದಲ್ಲಿ ಒಂದು ಬಗೆಯ ನಿರಾಶಾದಾಯಕ ಧೋರಣೆಗಳು ಬೆಳೆಯುತ್ತಿರುವುದು ಒಂದು ರೀತಿಯಲ್ಲಿ ಕಳವಳಕಾರಿಯಾಗಿದೆ. ಈ ನಿಟ್ಟಿನಲ್ಲಿ ನಿರಾಶವಾದಿ ರಾಜಕಾರಣಕ್ಕೆ ಕೊಡುಗೆಯನ್ನು ನೀಡುತ್ತಿರುವ ವ್ಯಕ್ತಿಗಳ ಪರಿಸ್ಥಿತಿಗಳನ್ನು ಮುಖ್ಯವಾಗಿ ಪರಿಗಣಿಸುವುದು ಹಿಂದಿನ ದಿನಗಳಲ್ಲಿ ಹೇಳುವುದಾದರೆ ಭಾರತೀಯ ರಾಜಕೀಯವು ಆಶಾವಾದಿ ಸ್ವರೂಪಗಳಿಗಿಂತ ನಿರಾಶವಾದಿ ರೂಪಗಳಲ್ಲಿಯೇ ಅಭಿವ್ಯಕ್ತಗೊಳ್ಳುತ್ತಿದೆ. ಇದು ಒಂದು ಸಮರ್ಥ ಕ್ರಿಯಾಶೀಲ ಪ್ರಜಾತಂತ್ರವು ಪಾರದರ್ಶಕತೆಯನ್ನು ಉತ್ತೇಜಿಸುತ್ತದೆ ಮತ್ತು ಪರ್ಯಾಲೋಚನೆ ಮತ್ತು ಪ್ರಾಮಾಣಿಕ ಸಮಾಲೋಚನೆಗಳ ಮೂಲಕ ತೆಗೆದುಕೊಂಡ ನಿರ್ಧಾರಗಳ ಮೂಲಕ ಪ್ರಜಾತಂತ್ರದಿಂದ ಸ್ಥಾನಗಳನ್ನು ಉಳಿಸಿಕೊಳ್ಳಬೇಕೆಂದು ಬಯಸುತ್ತಾರೆ. ತಮ್ಮ ರಾಜಕೀಯ ನಡವಳಿಕೆಗಳಲ್ಲಿ ರಾಜಕೀಯ ನಾಯಕರು ಮತ್ತು ಪಕ್ಷಗಳು ಇವೆರಡೂ ಘನತೆಯಿಂದ ನಡೆದುಕೊಳ್ಳಬೇಕೆಂದು ಜನರು ನಿರೀಕ್ಷಿಸುತ್ತಾರೆ. ಇದರಿಂದ ಮಾತ್ರ ತಮ್ಮನ್ನು ಹಾಗೂ ಪ್ರಜಾಪ್ರಭುತ್ವವನ್ನು ಸಹ ರಕ್ಷಿಸಿಕೊಳ್ಳಲು ಸಾಧ್ಯ ಎಂದು ಅವರು ಭಾವಿಸುತ್ತಾರೆ.


–ಮಮತ, ಬಸವಾಪುರ. ಚಾ. ನಗರ

ಕೆಂಡಗಣ್ಣಸ್ವಾಮಿ ಗದ್ದಿಗೆ ಧಾರ್ಮಿಕ ಕೇಂದ್ರವಾಗಲಿ

ಮಾನ್ಯರೆ,

ಹೆಚ್.ಡಿ. ಕೋಟೆ ತಾಲೂಕಿನ ಕೆಂಡಗಣ್ಣಸ್ವಾಮಿ ಗದ್ದಿಗೆ ತನ್ನದೇ ಆದ ಪಾವಿತ್ರ್ಯತೆಯನ್ನು ಹೊಂದಿದೆ. ಪ್ರತಿ ದಿನ ಇಲ್ಲಿಗೆ ಸಾವಿರಾರು ಮಂದಿ ಭಕ್ತರು ಭೇಟಿ ನೀಡುತ್ತಾರೆ. ಮಲೈ ಮಹದೇಶ್ವರ ಬೆಟ್ಟದ ರೀತಿಯಲ್ಲಿ ಸಂಬಂಧಪಟ್ಟವರು ಸೂಕ್ತ ಬಸ್ ವ್ಯವಸ್ಥೆ, ಶುದ್ಧ ಕುಡಿಯುವ ನೀರು, ಭಕ್ತಾದಿಗಳಿಗೆ ಶೌಚಾಲಯ, ಪ್ರಸಾದ ವ್ಯವಸ್ಥೆ ಬಗ್ಗೆ ಗಮನಹರಿಸಬೇಕೆಂದು ಮನವಿ.

– ಜೆ.ಪಿ. ರಾಜೇಶ್, ವಿ.ವಿ. ಮೊಹಲ್ಲಾ, ಮೈಸೂರು.




ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ಆದದ್ದೆಲ್ಲಾ ಒಳ್ಳೆಯದಕ್ಕೆ...!

ನಮ್ಮ ಜೀವನಪೂರ್ತಿ ನಾವಂದುಕೊಂಡಂತೆ ಎಲ್ಲವೂ ನಡೆಯುವುದಿಲ್ಲ. ಎಷ್ಟೇ ಯೋಚಿಸಿ, ಯೋಜನೆ ಹಾಕಿಕೊಂಡು ಕೆಲಸಕ್ಕೆ ಕೈಹಾಕಿದರೂ ಅದು ಹಾದಿ ತಪ್ಪಬಹುದು. ನಾವಂದುಕೊಂಡದ್ದಕ್ಕಿಂತ ಭಿನ್ನ ಫಲಿತಾಂಶ ಬರಬಹುದು. ಹಾಗಾದಾಗ ನಾವು ಒತ್ತಡಕ್ಕೆ ಒಳಗಾಗುತ್ತೇವೆ. ಕೆಲವು ಸಲ ಜೀವನವೇ ಸಾಕೆನಿಸುವಂತಹ ಬೇಸರವೂ ಆಗಬಹುದು. ಆದರೆ ಅನೇಕ ಸಲ ನಾವಂದುಕೊಂಡಿದ್ದು ಆಗದಿದ್ದಾಗಲೂ ನಮಗೆ ಅನುಕೂಲವೇ ಆಗಿರುತ್ತದೆ. ಈ ಬಗ್ಗೆ ನಮ್ಮೆಲ್ಲರ ಜೀವನದಲ್ಲೂ ನಡೆದಿರುವ ಹಲವಾರು ಘಟನೆಗಳನ್ನು ಮೆಲುಕು ಹಾಕಬಹುದು. ನಾವು ಹೋಗಬೇಕೆಂದಿದ್ದ ಬಸ್ಸು ನಮಗೆ ತಪ್ಪಿಹೋಗಿರುತ್ತದೆ. ಇದರಿಂದ ನಮಗೆ ಬಹಳ ಬೇಸರವಾಗುವುದು ಸಹಜ. ಆದರೆ ಅದೇ ಬಸ್ಸು ಅಪಘಾತಕ್ಕೀಡಾಯಿತು ಎಂದು ಕೇಳಿದಾಗ ನಮಗೆ, ನಮ್ಮ ಪಾಲಿಗೆ ದೇವರಿದ್ದಾನೆ. ಅದರಿಂದಲೇ ಹೀಗೆ ಬಸ್ಸು ತಪ್ಪಿತು ಎಂದು ಸಮಾಧಾನಪಟ್ಟುಕೊಳ್ಳುತ್ತೇವೆ. ಅದೇ ರೀತಿ ವಾಹನ ಚಾಲನೆಯ ಸಮಯದಲ್ಲಿ ಹೊರಡುವ ಸಮಯದಲ್ಲಿ ಸ್ವಲ್ಪ ವ್ಯತ್ಯಾಸವಾಗಿದ್ದರಿಂದ ಅದೇ ಮಾರ್ಗದಲ್ಲಿ ಯಾವುದೋ ಭೀಕರ ಅಪಘಾತವಾಗಿರುವ ಸುದ್ದಿ ಕೇಳಿದಾಗ ನಮ್ಮ ಅದೃಷ್ಟಕ್ಕೆ ಸಮಾಧಾನ ಪಟ್ಟುಕೊಳ್ಳುತ್ತೇವೆ.

> ನಾವು ಎಲ್ಲದರಲ್ಲೂ ನಮಗೆ ಒಳಿತಾಗಬೇಕು ಎಂದೇ ಬಯಸುತ್ತೇವೆ. ಅದು ಸಹಜ ಗುಣವೂ ಹೌದು. ಹೀಗಾಗಿ ಏನು ನಡೆದರೂ ಅದು ನಮ್ಮ ಪಾಲಿಗೆ ಒಳ್ಳೆಯದೇ ಆಗಿರಬೇಕು ಎಂದು ಆಶಿಸುತ್ತೇವೆ. ನಡೆದ ಘಟನೆ ಸಣ್ಣದಾದರೂ ನಾವು ಮರುಗುತ್ತೇವೆ, ದುಃಖ ಪಡುತ್ತೇವೆ. ಆದರೆ ಎಲ್ಲ ಘಟನೆಗಳು ನಮ್ಮ ನಿಯಂತ್ರಣದಲ್ಲಿ ಇರುವುದಿಲ್ಲ. ಅಲ್ಲದೇ ನಾವು ಏನೋ ಕೆಟ್ಟದ್ದು ಆಗಿಬಿಡಬಹುದು ಎಂದೂ ಯೋಚಿಸುವುದು ಇಲ್ಲ. ಆದರೆ ಕೆಲವು ಸಲ ನಡೆದ ಕಹಿ ಘಟನೆಗಳು ನಾವಂದುಕೊಂಡಿದ್ದು ಸರಿಯಲ್ಲ, ಹೀಗಾದ್ದರಿಂದ ನಮಗೆ ಒಳ್ಳೆಯದೇ ಆಯಿತು ಎಂದು ಮನವರಿಕೆ ಆಗುವ ಬೆಳವಣಿಗೆಗಳು ಗತಿಸಬಹುದು. ಹೀಗಾಗಿ ನಾವು ಪುರಂದರದಾಸರ ಪದ "ಆದದ್ದೆಲ್ಲಾ ಒಳಿತೇ ಆಯಿತು, ನಮ್ಮ ಶ್ರೀಧರನ ಸೇವೆ ಮಾಡಲು ಸಾಧನ ಸಂಪತ್ತಾಯಿತು" ಎಂಬುದನ್ನು ನೆನಪಿಸಿಕೊಳ್ಳಬೇಕು.



ಇತ್ತೀಚೆಗೆ ಓದಿದ ಒಂದು ನೈಜ ಘಟನೆ ಇಂತಹ ಪ್ರಸಂಗಗಳಿಗೆ ಅರ್ಥಪೂರ್ಣ ನಿದರ್ಶನ. ಅದು ವಿಶ್ವಪ್ರಸಿದ್ಧ ಟೈಟಾನಿಕ್ ಹಡಗಿನ ಕಥೆ. (ಈ ಬಗ್ಗೆ ಒಂದು ಚಲನಚಿತ್ರವೂ ನಿರ್ಮಾಣವಾಗಿ ವಿಶ್ವ ದಾಖಲೆ ಬರೆದಿದ್ದನ್ನು ನೆನಪಿಸಿಕೊಳ್ಳಬಹುದು). ಆ ಹಡಗಿನಲ್ಲಿದ್ದ ಬಹುತೇಕ ಮಂದಿ ಪ್ರಾಣ ಕಳೆದುಕೊಂಡಿದ್ದನ್ನೂ ನಾವು ಕೇಳಿದ್ದೇವೆ. ಅದೇ ರೀತಿ ಆ ಹಡಗಿನಲ್ಲಿ ತೆರಳಬೇಕಾಗಿದ್ದವರು ಕಾರಣಾಂತರಗಳಿಂದ ಪ್ರಯಾಣದಿಂದ ಮಿಸ್ ಆಗಿ ಪ್ರಾಣ ಉಳಿಸಿಕೊಂಡಿದ್ದರು.

ಟೈಟಾನಿಕ್ ದುರ್ಘಟನೆ ನಡೆದಿದ್ದು 1912ರಲ್ಲಿ. ಅದು ಆ ಹಡಗಿನ ಮೊದಲ ಹಾಗೂ ಕೊನೆಯ ಯಾತ್ರೆಯಾಗಿದ್ದು ವಿಪರ್ಯಾಸ. ಈ ಹಡಗು ಮುಳುಗಿದ್ದು ಹಿಮಗಡ್ಡೆಗೆ (ಐಸ್ ಬರ್ಗ್) ಡಿಕ್ಕಿ ಹೊಡೆದು. ಈ ಹಿಮಗಡ್ಡೆಗಳು ಒಂದು ರೀತಿಯ ವಿಸ್ಮಯ. ಅವು ಹೊರಗೆ ಎಷ್ಟು ಗೋಚರವಾಗುವುದೋ ಅದಕ್ಕಿಂತ ನೂರಾರು ಪಟ್ಟು ನೀರಿನೊಳಗೆ ಆವರಿಸಿಕೊಂಡಿರುತ್ತದೆ. ಅದರ ಆಳ ಅಗಲ ಅಷ್ಟು ಸುಲಭವಾಗಿ ಗೋಚರವಾಗುವುದಿಲ್ಲ. ಅಲ್ಲದೆ ಇವು ಸಮುದ್ರದ ನೀರಿನಲ್ಲಿ ತೇಲುತ್ತಿರುತ್ತವೆ. ಮೇಲೆ ಕಾಣುವುದು ಈ ಮಂಜುಗಡ್ಡೆಯ ತುದಿ ಮಾತ್ರ. ಇವು ಆಕಾರ ಹಾಗೂ ವ್ಯಾಪ್ತಿಯಲ್ಲಿ ಬದಲಾಗುತ್ತಿರುತ್ತವೆ. ಸಾಮಾನ್ಯವಾಗಿ ಅಂಟಾರ್ಟಿಕ್ ಸಮುದ್ರದಲ್ಲಿ ಇವು ಹೆಚ್ಚಾಗಿ ಕಂಡುಬರುವಂತಹುದು. ಗಾತ್ರದಲ್ಲಿ ಕಿಲೋ ಮೀಟರುಗಟ್ಟಲೆ ಇರಬಹುದು. ಟೈಟಾನಿಕ್ ಯಾತ್ರೆ ಆರಂಭವಾದದ್ದು 1912ರ ಏಪ್ರಿಲ್ 10ರ ಬುಧವಾರದಂದು. ಈ ಹಡಗಿನ ಪ್ರವಾಸಕ್ಕಾಗಿ ಸಾಕಷ್ಟು ಮುಂಚಿತವಾಗಿಯೇ ಟಿಕೆಟ್ ಕಾಯ್ದಿರಿಸಬೇಕಾಗಿತ್ತು. ಅದರಲ್ಲಿ ಸಂಚರಿಸಲು ಇಚ್ಛಿಸಿದ ಒಬ್ಬ ವ್ಯಕ್ತಿಯ ಹೆಸರು ಸ್ಕಾಟ್. ಆತನೊಬ್ಬ ರೈತ. ಅವನು ತನ್ನ ಇಡೀ ಕುಟುಂಬದೊಂದಿಗೆ ಈ ಟೈಟಾನಿಕ್ ಹಡಗಿನಲ್ಲಿ ಪ್ರವಾಸ ಮಾಡಲು ಇಚ್ಛಿಸಿದ. ಇದಕ್ಕಾಗಿ ಆವರೆವಿಗೆ ತಾನು ಗಳಿಸಿ, ಉಳಿಸಿದ್ದ ಹಣವನ್ನೆಲ್ಲಾ ಒಟ್ಟುಗೂಡಿಸಿ ಏಳು ಟಿಕೆಟ್‌ಗಳನ್ನು ಮುಂಗಡ ಕಾಯ್ದಿರಿಸಿದ್ದ. ಆದರೆ ಹಡಗು ಹೊರಡುವ ಏಳು ದಿನಗಳ ಮೊದಲು ಅವನು ಸಾಕಿದ್ದ ನಾಯಿ ಅವನ ಐದು ಮಕ್ಕಳ ಪೈಕಿ ಒಬ್ಬ ಮಗನಿಗೆ ಕಚ್ಚಿಬಿಟ್ಟಿತು. ಅದನ್ನು ಕಂಡ ಅವನ ಹೆಂಡತಿ ಮಗುವನ್ನು ಈ ಸ್ಥಿತಿಯಲ್ಲಿ ಬಿಟ್ಟು ನಾನು ಬರಲಾರೆ, ನೀನು ಉಳಿದ ನಾಲ್ಕು ಮಕ್ಕಳೊಡನೆ ಪ್ರವಾಸಕ್ಕೆ ಹೋಗಿ ಬಾ ಎಂದಳು. ಇದನ್ನು ಕೇಳಿ ಸ್ಕಾಟ್ ಮನಸ್ಸಿನಲ್ಲಿ ಹೊಯ್ದಾಟ ಪ್ರಾರಂಭವಾಯಿತು. ಮಗುವನ್ನು ಈ ಸ್ಥಿತಿಯಲ್ಲಿ ಬಿಟ್ಟು ಹೇಗೆ ಹೋಗುವುದು ಎಂಬ ಸಂದಿಗ್ಧ ಪರಿಸ್ಥಿತಿ ಅವನದ್ದಾಯಿತು. ಆದರೆ, ಮನಸ್ಸಿನಲ್ಲಿ ತನ್ನ ಉಳಿತಾಯದ ಇಡೀ ಹಣವನ್ನು ಟಿಕೆಟ್‌ಗಾಗಿ ಈಗಾಗಲೇ ನೀಡಲಾಗಿದೆ, ಅಲ್ಲದೆ ಆ ಹಣ ಯಾವುದೇ ಕಾರಣಕ್ಕೂ ವಾಪಸ್ಸು ಮಾಡಲಾಗುವುದಿಲ್ಲ ಎಂದು ಮೊದಲೇ ತಿಳಿಸಲಾಗಿದೆ. ಕೊನೆಗೆ ಅವನು ಬಹಳ ಯೋಚಿಸಿ, ಮಗು ಹಾಗೂ ಹೆಂಡತಿಯನ್ನು ಬಿಟ್ಟು ಹೋಗುವುದು ಸೂಕ್ತವಲ್ಲ ಎಂದು ನಿರ್ಧರಿಸಿದ. ನಿರ್ಧರಿತ ದಿನದಂದು ಆ ಹಡಗು ಇಂಗ್ಲೆಂಡಿನಿಂದ ಅಮೇರಿಕಾಕ್ಕೆ ಹೊರಟಿತು. ಆ ದಿನದಂದು ಅವನು ಸಮುದ್ರದ ದಂಡೆಯಲ್ಲಿ ತನ್ನ ಉಳಿದ ನಾಲ್ಕು ಮಕ್ಕಳೊಡನೆ ಟೈಟಾನ್ ಹಡಗು ಹೊರಟಿದ್ದನ್ನು ಕಂಡ, ತನ್ನ ಕನಸು ನನಸಾಗದ್ದಕ್ಕೆ ಅವನ ಕಣ್ಣಿನಲ್ಲಿ ನೀರು ಬರುತ್ತಿತ್ತು, ಅವನ ಆಸೆ ಹಾಗೂ ಹಣ ಎರಡೂ ನೀರಿನಲ್ಲಿ ಹೋಮ ಮಾಡಿದಂತೆ ಆಗಿಬಿಟ್ಟಿತ್ತು. ಅವನು ಅಳುತ್ತಾ, ಅಳುತ್ತಾ ಭಾರವಾದ ಮನಸ್ಸಿನಿಂದ ಮನೆಗೆ ಹಿಂದಿರುಗಿದ. ಇದಾದ ಐದನೇ ದಿನ, ಅಂದರೆ ಏಪ್ರಿಲ್ 15ರಂದು ಪ್ರಪಂಚಕ್ಕೆ ದುರಂತ ಸುದ್ದಿ ತಿಳಿಯಿತು, ಅದು ಟೈಟಾನಿಕ್ ಹಿಮಗಡ್ಡೆಗೆ ಡಿಕ್ಕಿ ಹೊಡೆದು ಮುಳುಗಿ ಹೋದ ಸುದ್ದಿ. ಇದನ್ನು ಕೇಳಿದ ಸ್ಕಾಟ್ ತಮ್ಮ ಅದೃಷ್ಟವನ್ನು ನೆನೆದು ಗದ್ಗದಿತನಾದ. ಕಳೆದ ಕೆಲವು ದಿನಗಳಿಂದ ತನ್ನ ನಾಯಿಗೆ ಹಿಡಿಶಾಪ ಹಾಕುತ್ತಿದ್ದವ, ಈಗ ಅದನ್ನು ಮುದ್ದಾಡ ತೊಡಗಿದ. ಆ ನಾಯಿಯಿಂದಾಗಿ ತನ್ನ ಇಡೀ ಕುಟುಂಬ ಉಳಿಯಿತು ಎಂದು ಆನಂದಪಟ್ಟ. ಇದಕ್ಕೇ ಹೇಳುವುದು ಆದದ್ದೆಲ್ಲಾ ಒಳಿತೇ ಆಯಿತು ಎಂದು.

ಈ ಸಂದರ್ಭದಲ್ಲಿ ಹಿಂದೆ ಓದಿದ ಮತ್ತೊಂದು ಕಥೆ ನೆನಪಾಗುತ್ತದೆ. ಒಮ್ಮೆ ಒಬ್ಬ ರಾಜ ಹಾಗೂ ಮಂತ್ರಿ ಇಬ್ಬರೂ ಕಾಡಿನಲ್ಲಿ ಸಂಚಾರ ಮಾಡುತ್ತಿದ್ದರು. ಆ ಸಮಯದಲ್ಲಿ ರಾಜನಿಗೆ ಒಂದು ಕಲ್ಲು ತಾಕಿ ಕೈಗೆ ದೊಡ್ಡದಾದ ಪೆಟ್ಟಾಯಿತು, ರಕ್ತ ಸುರಿಯಲಾರಂಭಿಸಿತು. ಇದನ್ನು ಕಂಡ ಮಂತ್ರಿ ಆದದ್ದೆಲ್ಲಾ ಒಳಿತೇ ಆಯಿತು ಎಂದುಬಿಟ್ಟ. ಇದನ್ನು ಕೇಳಿದ ರಾಜನಿಗೆ ಕೋಪ ಬಂದಿತು. ತನಗೆ ಪೆಟ್ಟು ಬಿದ್ದು, ರಕ್ತ ಸುರಿಯುತ್ತಿದ್ದರೂ ಮಂತ್ರಿ, ಆದದ್ದು ಒಳಿತಾಯಿತು ಎಂದಿದ್ದಕ್ಕೆ ಮಂತ್ರಿಯನ್ನು ನಡೆದು ಹೋಗುತ್ತಿದ್ದ ಹಾದಿಯ ಪಕ್ಕದ ಒಂದು ಪಾಳು ಬಾವಿಗೆ ತಳ್ಳಿಬಿಟ್ಟ. ಅಷ್ಟರಲ್ಲಿ ಅಲ್ಲಿಗೆ ಕೆಲವು ಅಪಾಯಕಾರಿ ಜನ ಬಂದರು. ಅವರು ನರಬಲಿ ಕೊಡಲು ಸೂಕ್ತ ಮನುಷ್ಯನ ಹುಡುಕುತ್ತಿದ್ದರು. ಅವರು ರಾಜನನ್ನು ಕಂಡು, ತಮ್ಮ ಕೆಲಸ ಆಯಿತು ಎನ್ನುತ್ತಿರುವಂತೆಯೇ ಅವರ ಮುಖಂಡ ರಾಜನನ್ನು ಸೂಕ್ಷ್ಮವಾಗಿ ಪರಿಶೀಲಿಸಿದ. ರಾಜನಿಗೆ ಗಾಯವಾಗಿ ಒಂದು ಅಂಗ ಊನವಾಗಿ, ರಕ್ತ ಸುರಿಯುತ್ತಿರುವುದನ್ನು ಕಂಡು, ಇವನ ದೇಹ ಮುಕ್ಕಾಗಿರುವುದರಿಂದ ಇವನನ್ನು ಬಲಿ ಕೊಡಲಾಗದು ಎಂದು ಹೇಳಿ ಅವನ ಅಲ್ಲೇ ಬಿಟ್ಟು ಹೊರಟುಹೋದರು. ರಾಜನಿಗೆ ಆಶ್ಚರ್ಯ, ತಕ್ಷಣ ಮಂತ್ರಿಯ ನೆನಪಾಗಿ ಬಾವಿಯಿಂದ ಅವನು ಹೊರಬರಲು ಸಹಾಯ ಮಾಡಿದ. ಮಂತ್ರಿಗೆ ವಿಷಯ ತಿಳಿಸಿ, ಮಂತ್ರಿ ನೀವು ನನ್ನನ್ನು ಬಾವಿಗೆ ತಳ್ಳಿದ್ದೂ ನನಗೆ ಒಳಿತೇ ಆಯಿತು. ಇಲ್ಲದಿದ್ದರೆ ಅವರು ನಿಮ್ಮನ್ನು ಬಿಟ್ಟು ನನ್ನನ್ನು ಬಲಿಗಾಗಿ ಹೊತ್ತೊಯ್ಯುತ್ತಿದ್ದರು ಎಂದ. ಇದು ಸಹ ಆದದ್ದೆಲ್ಲಾ ಒಳಿತೇ ಆಯಿತಲ್ವಾ...

ಹೀಗೆ ನಮಗೆ ಕೆಲವು ಬೆಳವಣಿಗೆಗಳು ಆ ಕ್ಷಣಕ್ಕೆ ಬೇಸರ ಹಾಗೂ ದುಃಖ ತರುತ್ತವೆ. ಆದರೆ ನಂತರ ಅದರಿಂದ ಏನೋ ಒಳ್ಳೆಯದಾಗುವ ಸಂಭವ ಹೆಚ್ಚಿರುತ್ತದೆ. ನಾವು ಎಲ್ಲದರಲ್ಲೂ ನಮಗೆ ಒಳಿತಾಗಬೇಕು ಎಂದೇ ಬಯಸುತ್ತೇವೆ. ಅದು ಸಹಜ ಗುಣವೂ ಹೌದು. ಹೀಗಾಗಿ ಏನು ನಡೆದರೂ ಅದು ನಮ್ಮ ಪಾಲಿಗೆ ಒಳ್ಳೆಯದೇ ಆಗಿರಬೇಕು ಎಂದು ಆಶಿಸುತ್ತೇವೆ. ನಡೆದ ಘಟನೆ ಸಣ್ಣದಾದರೂ ನಾವು ಮರುಗುತ್ತೇವೆ, ದುಃಖ ಪಡುತ್ತೇವೆ. ಆದರೆ ಎಲ್ಲ ಘಟನೆಗಳು ನಮ್ಮ ನಿಯಂತ್ರಣದಲ್ಲಿ ಇರುವುದಿಲ್ಲ. ಅಲ್ಲದೇ ನಾವು ಏನೋ ಕೆಟ್ಟದ್ದು ಆಗಿಬಿಡಬಹುದು ಎಂದೂ ಯೋಚಿಸುವುದು ಇಲ್ಲ. ಆದರೆ ಕೆಲವು ಸಲ ನಡೆದ ಕಹಿ ಘಟನೆಗಳು ನಾವಂದುಕೊಂಡಿದ್ದು ಸರಿಯಲ್ಲ, ಹೀಗಾದ್ದರಿಂದ ನಮಗೆ ಒಳ್ಳೆಯದೇ ಆಯಿತು ಎಂದು ಮನವರಿಕೆ ಆಗುವ ಬೆಳವಣಿಗೆಗಳು ಗತಿಸಬಹುದು. ಹೀಗಾಗಿ ನಾವು ಪುರಂದರದಾಸರ ಪದ "ಆದದ್ದೆಲ್ಲಾ ಒಳಿತೇ ಆಯಿತು, ನಮ್ಮ ಶ್ರೀಧರನ ಸೇವೆ ಮಾಡಲು ಸಾಧನ ಸಂಪತ್ತಾಯಿತು" ಎಂಬುದನ್ನು ನೆನಪಿಸಿಕೊಳ್ಳಬೇಕು. ಮತ್ತೊಂದು ಧ್ಯಾನ ಸ್ತೋತ್ರ "ಬಂದದ್ದೆಲ್ಲಾ ಬರಲಿ ಗೋವಿಂದನ ದಯೆ ಇರಲಿ" ಎಂಬುದು ಸಹಾ ನಮಗೆ ನಾವು ಸಮಾಧಾನ ಹಾಗೂ ಧೈರ್ಯ ತಂದುಕೊಳ್ಳುವ ಸ್ಲೋಗನ್.

ನಡೆದ ಘಟನೆಗಳ ಬಗ್ಗೆ ಹೆಚ್ಚು ಚಿಂತಿಸಬಾರದು, ಅದರಿಂದ ನಮಗೆ ಏನೋ ಒಳ್ಳೆಯದೂ ಆಗಬಹುದು. ಹಾಗಾಗಿ ಅದರ ಬಗ್ಗೆ ತಕ್ಷಣ ಪ್ರತಿಕ್ರಿಯಿಸಲೂಬಾರದು. ಅದರಿಂದ ಯಾವುದೋ ಒಂದು ರೀತಿ ನಮಗೆ ಮುಂದೆ ಅನುಕೂಲವಾಗಿ ಕಂಡುಬರಬಹುದು ಎಂಬ ಬಗ್ಗೆ ನಂಬಿಕೆ ಇಡಬೇಕು ಎಂಬುದನ್ನು ಸೂಚಿಸುತ್ತದೆ.

ಅನೇಕ ಜನ, ಐಎಎಸ್‌ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುತ್ತಾರೆ. ಪರೀಕ್ಷೆಯಲ್ಲಿ ಚೆನ್ನಾಗಿ ಮಾಡಿದ್ದು, ಉತ್ತಮ ರ‍್ಯಾಂಕಿನೊಡನೆ ಪಾಸಾಗುತ್ತೇವೆ ಎಂದುಕೊಂಡಿರುತ್ತಾರೆ. ಆದರೆ ಫಲಿತಾಂಶ ಬಂದಾಗ ಹಾಗಾಗಿರುವುದಿಲ್ಲ. ಅವರು ಉತ್ತೀರ್ಣರೂ ಆಗಿರುವುದಿಲ್ಲ. ಹೀಗೆ ನಪಾಸಾದವರು ಚಿಂತಿಸದೇ ಮತ್ತೆ ಮತ್ತೆ ಪರೀಕ್ಷೆ ಬರೆಯುತ್ತಾರೆ. ಮುಂದಿನ ಒಂದೆರೆಡು ಪ್ರಯತ್ನದಲ್ಲಿ ಅವರು ಉತ್ತಮ ರ‍್ಯಾಂಕ್ ಪಡೆದು ಉನ್ನತ ಹುದ್ದೆಗೆ ನೇಮಕವಾದದ್ದನ್ನು ಕೇಳಿದ್ದೇವೆ. ಈ ಮಾತುಗಳು ಕೇವಲ ಸಮಾಧಾನದ ಮಾತುಗಳಾಗಿರದೆ ಹಲವು ಸಲ ನಮ್ಮ ಗಮನಕ್ಕೂ ಬಂದಿರುತ್ತದೆ. ನಮಗೆ ಸಂಬಂಧಿಸಿದ ವಿಚಾರಗಳಿಂದಲೂ ಮನದಟ್ಟಾಗಿರುತ್ತದೆ. ಆದ್ದರಿಂದ ಸತತ ಪ್ರಯತ್ನ ಹಾಗೂ ಏನಾದರೂ ಹಿಡಿದಿದ್ದನ್ನು ಸಾಧಿಸುತ್ತೇನೆ, ತಾತ್ಕಾಲಿಕ ಹಿನ್ನಡೆ ಒಳಿತನ್ನೇ ಮಾಡಿತು ಎಂಬ ಮನೋಭಾವವನ್ನು ನಾವು ಬೆಳೆಸಿಕೊಂಡಾಗ ಇಂತಹ ಸಂದರ್ಭಗಳನ್ನು ನಾವು ಯಶಸ್ವಿಯಾಗಿ ಎದುರಿಸಬಹುದು. ಆದ್ದರಿಂದ ಯಾವುದಕ್ಕೂ ತಕ್ಷಣವೇ ದುಡುಕಿನ ನಿರ್ಧಾರ ಮಾಡದಿರುವುದು ಉತ್ತಮ.



ಮೈಸೂರು ಅರಮನೆ ಆವರಣದಲ್ಲಿ ಗುರುವಾರ ಮತದಾನ ಜಾಗೃತಿ ಅಭಿಯಾನದಲ್ಲಿ ಪಾಲ್ಗೊಂಡಿದ್ದ ಮಾಜಿ ಕ್ರಿಕೆಟ್ ತಾರೆ ಜಾವಗಲ್ ಶ್ರೀನಾಥ್ ಅವರೊಂದಿಗೆ ಉತ್ಸಾಹಿ ಯುವ ಮತದಾರರು ಸೆಲ್ಫಿ ಕ್ಲಿಕ್ಕಿಸಿಕೊಂಡು ಸಂಭ್ರಮಪಡುತ್ತಿರುವುದು.

ಹಾಡಿನಲ್ಲಿ ಮಹಾರಾಷ್ಟ್ರ ಸರ್ಕಾರ ಟೀಕಿಸಿದ ಮರಾಠಿ ರ‍್ಯಾಪರ್ ವಿರುದ್ಧ ಕೇಸ್ ದಾಖಲು

ಥಾಣೆ, ಏ.6– ಏಕನಾಥ್ ಶಿಂಧೆ ನೇತೃತ್ವದ ಮಹಾರಾಷ್ಟ್ರ ಸರ್ಕಾರವನ್ನು ಟೀಕಿಸಿದ ಆರೋಪದ ಮೇಲೆ ಮಹಾರಾಷ್ಟ್ರದ ಥಾಣೆ ಜಿಲ್ಲೆಯ ಪೊಲೀಸರು ಮರಾಠಿ ರ‍್ಯಾಪರ್ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ. ಇತ್ತೀಚೆಗೆ ಯೂಟ್ಯೂಬ್‌ನಲ್ಲಿ ಅಪ್‌ಲೋಡ್ ಮಾಡಿದ ಹಾಡಿನಲ್ಲಿ ಪನ್ನಾಸ್ ಖೋಕೆ(ಐವತ್ತು ಪೆಟ್ಟಿಗೆಗಳು) ಮತ್ತು ಚೋರ್(ಕಳ್ಳರು) ಎಂಬ ಪದಗಳನ್ನು ಬಳಸಿದ ಔರಂಗಾಬಾದ್ ಮೂಲದ ರ‍್ಯಾಪರ್ ರಾಜ್ ಮುಂಗಸೆ ಅವರ ವಿರುದ್ಧ ಶಿವಸೇನೆ ಕಾರ್ಯಕರ್ತ ಅಂಬರನಾಥ್ ಅವರು ದೂರು ನೀಡಿದ್ದು, ದೂರಿನ ಆಧಾರದಲ್ಲಿ ಕೇಸ್ ದಾಖಲಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಗುರುವಾರ ತಿಳಿಸಿದ್ದಾರೆ.

ಮುಂಗಸೆ ವಿರುದ್ಧ ಮಾನನಷ್ಟ, ಶಾಂತಿ ಭಂಗಕ್ಕೆ ಪ್ರಚೋದಿಸುವುದು, ಉದ್ದೇಶಪೂರ್ವಕ ಅವಮಾನ ಮತ್ತು ವರ್ಗಗಳ ನಡುವೆ ದ್ವೇಷ ಸೃಷ್ಟಿಸುವ ಹೇಳಿಕೆ ಅಡಿಯಲ್ಲಿ ಶಿವಾಜಿನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಹೇಳಿದ್ದಾರೆ.

ಆಕ್ಸ್‌ಫಾಮ್ ಇಂಡಿಯಾ ವಿರುದ್ಧ ಸಿಬಿಐ ತನಿಖೆಗೆ ಗೃಹ ಸಚಿವಾಲಯ ಶಿಫಾರಸು

ನವದೆಹಲಿ,ಏ.6–ವಿದೇಶಿ ದೇಣಿಗೆ(ನಿಯಂತ್ರಣ) ಕಾಯಿದೆ, 2010 ಅನ್ನು ಉಲ್ಲಂಘಿಸಿದ ಆರೋಪ ಎದುರಿಸುತ್ತಿರುವ ಎನ್‌ಜಿಒ ಆಕ್ಸ್‌ಫಾಮ್ ಇಂಡಿಯಾದ ವ್ಯವಹಾರಗಳ ಕುರಿತು ಸಿಬಿಐ ತನಿಖೆಗೆ ಕೇಂದ್ರ ಗೃಹ ಸಚಿವಾಲಯ ಗುರುವಾರ ಶಿಫಾರಸು ಮಾಡಿದೆ ಎಂದು ಮೂಲಗಳು ತಿಳಿಸಿವೆ. ಎಫ್‌ಸಿಆರ್‌ಎ ಅಡಿಯಲ್ಲಿ ನೋಂದಾಯಿಸಿದ ನಂತರವೂ ಆಕ್ಸ್‌ಫಾಮ್ ಇಂಡಿಯಾ ವಿದೇಶಿ ದೇಣಿಗೆಯನ್ನು ವಿವಿಧ ಘಟಕಗಳಿಗೆ ವರ್ಗಾಯಿಸುವುದನ್ನು ಮುಂದುವರೆಸಿದೆ ಎಂದು ಕೇಂದ್ರ ಗೃಹ ಸಚಿವಾಲಯ ಹೇಳಿದೆ. ಆದಾಯ ತೆರಿಗೆ ಇಲಾಖೆ ನಡೆಸಿದ ಸಮೀಕ್ಷೆಯಲ್ಲಿ, ಆಕ್ಸ್‌ಫಾಮ್ ಇಂಡಿಯಾ ಇತರ ಎಫ್‌ಸಿಆರ್‌ಎ–ನೋಂದಾಯಿತ ಸಂಘಗಳಿಗೆ ಅಥವಾ ಲಾಭದಾಯಕ ಮಾರ್ಗದ ಮೂಲಕ ಹಣವನ್ನು ರೂಟ್ ಮಾಡಿ, ಎಫ್‌ಸಿಆರ್‌ಎಯ ನಿಬಂಧನೆಗಳನ್ನು ತಪ್ಪಿಸಲು ಯೋಜಿಸುತ್ತಿರುವುದು ಅದರ ಹಲವು ಇಮೇಲ್‌ಗಳಲ್ಲಿ ಕಂಡು ಬಂದಿವೆ ಎಂದು ಮೂಲಗಳು ತಿಳಿಸಿವೆ.

ಸಾಮಾಜಿಕ ಕಾರ್ಯಗಳನ್ನು ಕೈಗೊಳ್ಳಲು ನೋಂದಾಯಿಸಿಕೊಂಡಿರುವ ಆಕ್ಸ್‌ಫಾಮ್ ಇಂಡಿಯಾ, ತನ್ನ ಸಹವರ್ತಿಗಳು ಮತ್ತು ಉದ್ಯೋಗಿಗಳ ಮೂಲಕ ನೀತಿ ಸಂಶೋಧನಾ ಕೇಂದ್ರಕ್ಕೆ(CPR) ಕಮಿಷನ್ ರೂಪದಲ್ಲಿ ಹಣವನ್ನು ರವಾನಿಸಿದೆ ಎಂದು ಮೂಲಗಳು ಹೇಳಿವೆ.

ಆಕ್ಸ್‌ಫಾಮ್ ಇಂಡಿಯಾ ಒಂದು ಎನ್‌ಜಿಒ ಸಂಸ್ಥೆಯಾಗಿದ್ದು, ಇದು ಮಕ್ಕಳ ಶಿಕ್ಷಣ, ಮಹಿಳಾ ಸಬಲೀಕರಣ, ಅಸಮಾನತೆಯ ಬಗ್ಗೆ ಧ್ವನಿ ಎತ್ತುವ ಕಾರ್ಯವನ್ನು ತನ್ನ ವರದಿಯ ಮೂಲಕ ಮಾಡುತ್ತದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com



‘ಘೋಸ್ಟ್’ನಲ್ಲಿ ಅನುಪಮ್ ಖೇರ್ ಅವರೊಂದಿಗೆ ಎನ್.ಸಂದೇಶ್, ಜಯರಾಮ್, ಶಿವರಾಜ್ ಕುಮಾರ್, ಶ್ರೀನಿ

ಕನ್ನಡದ ‘ಘೋಸ್ಟ್’ನಲ್ಲಿ ಬಾಲಿವುಡ್ ಅನುಪಮ್ ಖೇರ್

ಬಹಳ ದಿನಗಳ ನಂತರ ನಟ ಶಿವರಾಜ್‌ಕುಮಾರ್ ಥ್ರಿಲ್ಲರ್ ಚಿತ್ರವೊಂದರಲ್ಲಿ ಕಾಣಿಸಿಕೊಂಡಿದ್ದಾರೆ. ಶ್ರೀನಿ ಅವರ ನಿರ್ದೇಶನವಿರುವ ‘ಘೋಸ್ಟ್’ ಚಿತ್ರದ ಮೂಲಕ ಬಾಲಿವುಡ್ ಹಿರಿಯ ನಟ ಅನುಪಮ್ ಖೇರ್ ಕನ್ನಡ ಚಿತ್ರರಂಗಕ್ಕೆ ಕಾಲಿಟ್ಟಿದ್ದಾರೆ. ಸಂದೇಶ್ ಪ್ರೊಡಕ್ಷನ್ಸ್ ಮೂಲಕ ಸಂದೇಶ್ ನಾಗರಾಜ್ (ಮಾಜಿ ಎಂಎಲ್‌ಸಿ) ಅವರು ನಿರ್ಮಿಸುತ್ತಿರುವ ಈ ಚಿತ್ರದ ಚಿತ್ರೀಕರಣ ಬೆಂಗಳೂರಿನ ಶಿಬರಾವಿ ಕಂಟ್ರಿ ಯಾರ್ಡ್‌ನಲ್ಲಿ ನಡೆಯಿತು. ನಾಯಕ ನಟ ಶಿವರಾಜಕುಮಾರ್, ಅನುಪಮ್ ಖೇರ್, ಮಲಯಾಳಂ ನಟ ಜಯರಾಮ್, ವಿಜಯಲಕ್ಷ್ಮೀಸಿಂಗ್ ಮುಂತಾದವರು ಈ ಚಿತ್ರೀಕರಣದಲ್ಲಿ ಭಾಗಿಯಾಗಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕ ಶ್ರೀನಿ, ನಾನು ಪ್ರತೀ ಸಿನಿಮಾ ಮಾಡಿದಾಗಲೂ, ಯಾಕೆ ನೀವು ಬೇರೆಯವರನ್ನು ಹಾಕಿಕೊಂಡು ಚಿತ್ರ ಮಾಡುವುದಿಲ್ಲ ಎಂದು ಕೇಳುತ್ತಿದ್ದರು. ಈಗ ಶಿವರಾಜ್‌ಕುಮಾರ್ ಅವರಿಗಾಗಿಯೇ ಒಂದು ಸ್ಕ್ರಿಪ್ ಮಾಡಿಕೊಂಡು ಅವರಿಗೆ ಕಥೆ ಹೇಳಿದೆ. ಕಥೆಕೇಳಿ ಅವರು ಕೂಡ ಬಹಳ ಇಷ್ಟಪಟ್ಟರು. ಸಿನಿಮಾ ಹೀಗೆಯೇ ಮೂಡಿಬರಬೇಕೆಂದು ಸಾಕಷ್ಟು ಹೋಂವರ್ಕ್ ಮಾಡಿಕೊಂಡು, ಚಿತ್ರೀಕರಣ ಶುರು ಮಾಡಿದೆವು. ಮೊದಲು ಇಷ್ಟು ದೊಡ್ಡ ಸಿನಿಮಾ ಆಗುತ್ತದೆ ಅಂದು ಕೊಂಡಿರಲಿಲ್ಲ. ಸಂದೇಶ್ ನಾಗರಾಜ್ ಅವರು ನಿರ್ಮಾಣದ ಜವಾಬ್ದಾರಿ ವಹಿಸಿಕೊಂಡಾಗ ದೊಡ್ಡದಾಯ್ತು. ಇದು ಹಾರರ್ ಸಿನಿಮಾ ಅಲ್ಲ, ಆಕ್ಷನ್ ಥ್ರಿಲ್ಲರ್. ಎರಡು ದಿನಗಳಲ್ಲಿ ನಡೆಯುವ ಕಥೆ. ಚಿತ್ರದಲ್ಲಿ ಶಿವಣ್ಣ ಅವರ ಪಾತ್ರಕ್ಕೆ ಬೇರೆಬೇರೆ ಗೆಟಪ್‌ಗಳಿದ್ದು, ಮೂರು ಶೇಡ್‌ಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಈಗಾಗಲೇ ಶೇ.90ರಷ್ಟು ಚಿತ್ರೀಕರಣ ಮುಗಿದಿದ್ದು, 12 ದಿನಗಳ ಚಿತ್ರೀಕರಣವಷ್ಟೇ ಬಾಕಿ ಇದೆ. ಏಪ್ರಿಲ್‌ನಲ್ಲಿ ಕೊನೆಯ ಹಂತದ ಚಿತ್ರೀಕರಣ ಮುಗಿಸಿ, ಆಗಸ್ಟ್‌ನಲ್ಲಿ ರಿಲೀಸ್ ಮಾಡುವ ಯೋಚನೆಯಿದೆ ಎಂದರು. ನಂತರ ನಿರ್ಮಾಪಕ ಸಂದೇಶ್ ಎನ್. ಮಾತನಾಡುತ್ತಾ, ಈ ಚಿತ್ರವನ್ನು ನಮ್ಮ ತಂದೆ ಸಂದೇಶ್ ನಾಗರಾಜ್ ಅವರು ಬಿಗ್‌ಬಜೆಟ್‌ನಲ್ಲಿ ನಿರ್ಮಿಸುತ್ತಿದ್ದಾರೆ. ಇಡೀ ಚಿತ್ರತಂಡದ ಸಹಕಾರದಿಂದ ‘ಘೋಸ್ಟ್’ ಚಿತ್ರವು ಚೆನ್ನಾಗಿಯೇ ಮೂಡಿಬರುತ್ತಿದೆ ಎಂದು ಹೇಳಿದರು.

ನಟ ಅನುಪಮ್ ಖೇರ್ ಮಾತನಾಡಿ, ಕನ್ನಡ ಚಿತ್ರದಲ್ಲಿ ನಟಿಸುತ್ತಿರುವುದಕ್ಕೆ ಬಹಳ ಖುಷಿಯಿದೆ. ಕೋವಿಡ್ ನಂತರದಲ್ಲಿ ಪ್ರಾದೇಶಿಕ ಸಿನಿಮಾಗಳು ಪ್ಯಾನ್ ಇಂಡಿಯಾ ಮಟ್ಟದಲ್ಲಿ ನಿರ್ಮಾಣವಾಗುತ್ತಿವೆ. ಇದು ಬರೀ ಕನ್ನಡ ಚಿತ್ರರಂಗಕ್ಕಷ್ಟೇ ಅಲ್ಲ, ಇಡೀ ಭಾರತೀಯ ಚಿತ್ರರಂಗಕ್ಕೆ ಒಂದು ಅದ್ಭುತವಾದ ಕಾಲ. ಈ ಚಿತ್ರದಲ್ಲಿ ನೀವೇ ನಟಿಸಬೇಕು ಎಂದು ನಿರ್ದೇಶಕ ಶ್ರೀನಿ ಹೇಳಿದರು. ಚಿತ್ರದಲ್ಲಿ ನನ್ನ ಪಾತ್ರ ಬಹಳ ಚಿಕ್ಕದಾಗಿರುತ್ತದೆ. ಘೋಸ್ಟ್ 2ರಲ್ಲಿ ನನ್ನ ಪಾತ್ರ ದೊಡ್ಡದಾಗಿರುತ್ತದೆ ಎಂದರು, ನಾಯಕ ಶಿವರಾಜಕುಮಾರ್ ಮಾತನಾಡುತ್ತಾ ಶ್ರೀನಿ ಒಳ್ಳೆಯ ಕಥೆಯನ್ನೇ ಮಾಡಿಕೊಂಡಿದ್ದಾರೆ. ಚಿತ್ರದಲ್ಲಿ ಒಂದು ಪಾತ್ರವನ್ನು ಜಯರಾಂ ಅವರು ಮಾಡಿದರೆ ಚೆನ್ನಾಗಿರುತ್ತದೆ ಎಂದೆನಿಸಿತು. ಅನುಪಮ್ ಖೇರ್, ಜಯರಾಂ ಅವರಂತಹ ನಟರ ಜೊತೆಗೆ ನಟಿಸುತ್ತಿರುವುದು ನನ್ನ ಪುಣ್ಯ. ಚಿತ್ರ ಬಹಳ ಅದ್ಧೂರಿಯಾಗಿ ಮೂಡಿಬರುತ್ತಿದೆ. ಮಹೇಂದ್ರಸಿಂಹ ಅವರ ಛಾಯಾಗ್ರಹಣದಲ್ಲಿ ಪ್ರತಿ ದೃಶ್ಯಗಳೂ ಪೇಂಟಿಂಗ್‌ನಂತೆ ಮೂಡಿಬಂದಿವೆ. ಚಿತ್ರದಲ್ಲಿ ಒಂದೊಳ್ಳೆಯ ವಿಷಯವನ್ನು ಶ್ರೀನಿ ತೆಗೆದುಕೊಂಡಿದ್ದಾರೆ ಎಂದರು.

ಮಲಯಾಳಂ ನಟ ಜಯರಾಮ್ ಮಾತನಾಡಿ, ನನ್ನ ಮೊದಲ ಕನ್ನಡ ಚಿತ್ರವಿದು. ಈಹಿಂದೆ ಹಾಡುಗಳ ಚಿತ್ರೀಕರಣಕ್ಕೆಂದು ಬೆಂಗಳೂರು ಮತ್ತು ಮೈಸೂರಿಗೆ ಬರುತ್ತಿದ್ದೆ. ಹಾಗಾಗಿ ಸ್ವಲ್ಪಸ್ವಲ್ಪ ಕನ್ನಡ ಗೊತ್ತು. ಈ ಚಿತ್ರದ ಶತದಿನೋತ್ಸವ ಸಮಾರಂಭದ ಹೊತ್ತಿಗೆ ಕನ್ನಡ ಕಲಿತಿರುತ್ತೇನೆ. ಕನ್ನಡದಲ್ಲಿ ಒಂದು ಚಿತ್ರದಲ್ಲಿ ನಟಿಸುವ ಆಸೆಯಿತ್ತು. ಶಿವಣ್ಣ ಸಿಕ್ಕಾಗ ಹೇಳಿದ್ದೆ. ಈಗ ಅವರ ಜೊತೆಗೇ ನಟಿಸುವ ಅವಕಾಶ ಸಿಕ್ಕಿದೆ ಎಂದರು.



ಈವಾರ ತೆರೆಗೆ ಆಕ್ಷನ್ ಥ್ರಿಲ್ಲರ್ ‘ವೀರಂ’

ಶಶಿಧರ್ ಸ್ಟುಡಿಯೋಸ್ ಪ್ರೊಡಕ್ಷನ್ ಮೂಲಕ ಕೆ.ಎಂ. ಶಶಿಧರ್ ಅವರು ನಿರ್ಮಿಸಿರುವ ಫ್ಯಾಮಿಲಿ ಎಮೋಷನ್ ಜೊತೆಗೆ ಲವ್, ಆಕ್ಷನ್, ಥ್ರಿಲ್ಲರ್ ಡ್ರಾಮಾ ಕಥಾಹಂದರ ಹೊಂದಿರುವ ಚಿತ್ರ ‘ವೀರಂ’ ಈ ವಾರ ರಾಜ್ಯಾದ್ಯಂತ ತೆರೆಕಾಣುತ್ತಿದೆ. ಟ್ರೈಲರ್, ಹಾಡುಗಳ ಮೂಲಕ ದೊಡ್ಡ ಮಟ್ಟದ ಕುತೂಹಲ ಹುಟ್ಟು ಹಾಕಿರುವ ಈ ಚಿತ್ರಕ್ಕೆ ಖದರ್ ಕುಮಾರ್ ಕಥೆ, ಚಿತ್ರಕಥೆ ಬರೆದು ಆಯಕ್ಷನ್ ಕಟ್ ಹೇಳಿದ್ದಾರೆ. ಒಂದು ಕುಟುಂಬಕ್ಕೆ ತೊಂದರೆ ಬಂದಾಗ ಎಲ್ಲರೂ ಹೇಗೆ ಜೊತೆಗೆ ನಿಲ್ತಾರೆ ಎನ್ನುವುದು ಚಿತ್ರದ ಕಥೆ. ಈ ಚಿತ್ರದಲ್ಲಿ ಪ್ರಜ್ವಲ್ ದೇವರಾಜ್ ಹಾಗೂ ನಟಿ ಶೃತಿ, ಅಕ್ಕ ತಮ್ಮನಾಗಿ ಅಲ್ಲದೆ ಶ್ರೀನಗರ ಕಿಟ್ಟಿ ಅಣ್ಣನಾಗಿಯೂ ಕಾಣಿಸಿಕೊಂಡಿದ್ದಾರೆ. ರಚಿತಾರಾಮ್, ಶಿಷ್ಯ ದೀಪಕ್, ಬಲ ರಾಜವಾಡಿ, ಅಚ್ಯುತ್‌ಕುಮಾರ್, ಸ್ವಾತಿ, ಮೈಕೋ ನಾಗರಾಜ್, ಪ್ರಶಾಂತ್ ನಟನಾ, ಹನುಮಂತೇಗೌಡ ಅಲ್ಲದೆ ನಿರ್ದೇಶಕರಾದ ಜೋಸೈಮನ್, ವಿ.ನಾಗೇಂದ್ರಪ್ರಸಾದ್ ಉಳಿದ ತಾರಾಬಳಗದಲ್ಲಿದ್ದಾರೆ. ಚಿತ್ರಕ್ಕೆ ಯು/ಎ ಸರ್ಟಿಫಿಕೇಟ್ ಸಿಕ್ಕಿದ್ದು, ಅನೂಪ್ ಸೀಳನ್ ಅವರ ಸಂಗೀತ, ಲವಿತ್ ಅವರ ಕ್ಯಾಮೆರಾ ವರ್ಕ್ ಈ ಚಿತ್ರಕ್ಕಿದೆ.

ಈ ವಾರ ತೆರೆಗೆ ಸರ್ಕಾರಿ ಶಾಲೆಗಳನ್ನು ಉಳಿಸುವ ‘ಪ್ರವೀಣಾ’



ಸರ್ಕಾರಿ ಶಾಲೆಗಳ ದುಸ್ಥಿತಿ ಅವುಗಳನ್ನು ಉಳಿಸುವ ಪ್ರಯತ್ನ ಹಾಗೂ ಖಾಸಗಿ ಶಾಲೆಗಳ ಮಾಫಿಯಾ ಕಥೆಯನ್ನು ಒಳಗೊಂಡ ಸಾಕಷ್ಟು ಸಿನಿಮಾಗಳು ಬಂದಿವೆ. ಇದೀಗ ಇಂಥದೇ ಅಂಶವನ್ನು ಇಟ್ಟುಕೊಂಡು ನಿರ್ಮಾಣವಾದ ಚಿತ್ರ ‘ಪ್ರವೀಣಾ’. ಏಪ್ರಿಲ್ 7ರಂದು ರಾಜ್ಯಾದ್ಯಂತ ತೆರೆ ಕಾಣಲಿದೆ

ಈ ಚಿತ್ರದ ಟ್ರೇಲರ್ ಹಾಗೂ ಹಾಡುಗಳ ಪ್ರದರ್ಶನ ಇತ್ತೀಚೆಗೆ ನಡೆಯಿತು. ಈ ಸಂದರ್ಭದಲ್ಲಿ ಚಿತ್ರಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿರುವ ಮಹೇಶ್ ಸಿಂಧುವಳ್ಳಿ ಮಾತನಾಡುತ್ತಾ, ನಾನು ಈ ಹಿಂದೆ ‘10ನೇ ತರಗತಿ’ ಎಂಬ ಸಿನಿಮಾ ನಿರ್ದೇಶಿಸಿದ್ದೆ. ಇದು 2ನೇ ಚಿತ್ರ. ‘ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಸರಗೂಡು’ ಸಿನಿಮಾ ನೋಡುವಾಗ ಈ ಲೈನ್ ಹೊಳೆಯಿತು. ನನ್ನ ಲೈಫ್‌ನಲ್ಲಿ ನಡೆದ ಒಂದಿಷ್ಟು ಘಟನೆಗಳನ್ನು ಇಟ್ಟುಕೊಂಡು ಈ ಚಿತ್ರ ಮಾಡಿದ್ದೇವೆ ಎಂದು ಹೇಳಿದರು.

ಹಿರಿಯ ನಟ ಮಂಡ್ಯ ರಮೇಶ್ ಮಾತನಾಡಿ, ‘ಇದೊಂದು ಸದಭಿರುಚಿ ಸಿನಿಮಾ ಎನ್ನಬಹುದು. ಕಥೆ ಚೆನ್ನಾಗಿದ್ದು, ಗ್ರಾಮ ಪಂಚಾಯತಿ ಸದಸ್ಯನ ಪಾತ್ರ ಮಾಡಿದ್ದೇನೆ. ಪಾತ್ರ ವಿಶೇಷವಾಗಿದೆ. ಜೊತೆಗೆ ಕಥೆಯ ಎಳೆ ತುಂಬಾ ಚೆನ್ನಾಗಿದೆ. ಈ ಚಿತ್ರಕ್ಕೆ ಮಂಡ್ಯ, ಮೈಸೂರು ಸುತ್ತ ಮುತ್ತ ಶೂಟಿಂಗ್ ಮಾಡಿದ್ದೇವೆ ಎಂದರು.

ನಂತರ ಚಿತ್ರದ ನಿರ್ಮಾಪಕ ಜಗದೀಶ್ ಕೆ.ಆರ್ . ಮಾತನಾಡುತ್ತಾ ‘ನಾನು ಮೂಲತಃ ರಂಗಭೂಮಿ ಕಲಾವಿದ ಹಾಗೂ ರೈತ. ಈ ಹಿಂದೆ ‘ಹತ್ತನೇ ತರಗತಿ’ ಚಿತ್ರದಲ್ಲಿ ಅಭಿನಯಿಸಿದ್ದೆ. ನಿರ್ದೇಶಕರು ಬಂದು ಈ ಕಥೆ ಹೇಳಿದಾಗ ಇಷ್ಟವಾಯ್ತು. ನಾವೇ ಏಕೆ ನಿರ್ಮಾಣ ಮಾಡಬಾರದು ಎಂದು ಫ್ಯಾಮಿಲಿ, ಗೆಳೆಯರ ಸಹಕಾರದಿಂದ ಈ ಸಿನಿಮಾ ನಿರ್ಮಿಸಿದ್ದೇವೆ. ‘ಪ್ರವೀಣಾ’ ಚಿತ್ರದಲ್ಲಿ ಮನರಂಜನೆಯ ಜೊತೆಗೆ ಸರ್ಕಾರಿ ಶಾಲೆಗಳ ದುಸ್ಥಿತಿ ಹಾಗೂ ಖಾಸಗಿ ಶಾಲೆಗಳ ದಬ್ಬಾಳಿಕೆಯನ್ನು ಹೇಳುವ ಪ್ರಯತ್ನ ಮಾಡಿದ್ದೇವೆ’ ಎಂದರು.

ಚಿತ್ರದಲ್ಲಿ ಸರ್ಕಾರಿ ಶಾಲೆಯ ವಿದ್ಯಾರ್ಥಿಯ ಪಾತ್ರ ಮಾಡಿರುವ ಶಶಿ ಮಾತನಾಡಿ, ‘ಇದರಲ್ಲಿ ನಾನು ಸರ್ಕಾರಿ ಶಾಲೆಯ ಹುಡುಗ ಖಾಸಗಿ ಶಾಲೆಗೆ ಹೋದಾಗ ಎನೆಲ್ಲಾ ಕಷ್ಟ ಅನುಭವಿಸುತ್ತಾನೆ ಎಂಬುದನ್ನು ಹೇಳುವ ಪಾತ್ರ ಮಾಡಿದ್ದೇನೆ’ ಎಂದರು. ಮುಖ್ಯ ಪಾತ್ರದಲ್ಲಿ ಐಶ್ವರ್ಯ ನಟಿಸಿದ್ದಾರೆ. ರಂಗಭೂಮಿ ನಟಿ ವನಿತಾ ರಾಜೇಶ್ ಚಿತ್ರದಲ್ಲಿ ಪ್ರವೀಣನ ತಾಯಿಯ ಪಾತ್ರ ಮಾಡಿದ್ದು, ‘ಒಬ್ಬ ತಾಯಿ ಹಳ್ಳಿಯಲ್ಲಿ ಗಂಡ ಇಲ್ಲದೆ ಮಗನನ್ನು ಹೇಗೆ ಬೆಳೆಸುತ್ತಾಳೆ ಎಂಬುದನ್ನು ನನ್ನ ಪಾತ್ರದ ಮೂಲಕ ತೋರಿಸಲಾಗಿದೆ. ಇದು ಸರ್ಕಾರಿ ಶಾಲೆ ಖಾಸಗಿ ಶಾಲೆ ನಡುವಿನ ವ್ಯತ್ಯಾಸ ತೋರಿಸುವ ಸಿನಿಮಾ’ ಎಂದರು. ನಿನಗಾಗಿ ವಿರು ಅವರ ಸಾಹಿತ್ಯ ಹಾಗೂ ಸಂಗೀತ ನಿರ್ದೇಶನವಿರುವ ಈ ಚಿತ್ರಕ್ಕೆ ಸುರೇಶ್ ಡಿ.ಹೆಚ್. ಅವರ ಸಂಕಲನ, ಮನೋಜ್ ಸಿ.ಎನ್ ಅವರ ಛಾಯಾಗ್ರಹಣವಿದೆ. ಚಿತ್ರದ ತಾರಾಗಣದಲ್ಲಿ ಮಂಡ್ಯ ರಮೇಶ್, ಮಾಸ್ಟರ್ ರೋಹಿತ್, ಶಶಿ ಗೌಡ, ಐಶ್ವರ್ಯ ಗೌಡ, ಮನು, ಗಗನ್ ಲಾಡ್, ಪುನೀತ್, ದಿಶಾ, ಸ್ನೇಹ, ನಾಗರತ್ನ ಮುಂತಾದವರಿದ್ದಾರೆ.

ರಾಮ್ ಜಿ ಜೊತೆ ಕೈಜೋಡಿಸಿದ ಬನಿಜಯ್ ಏಷ್ಯಾ

ಗಗನ್ ಎಂಟರ್ ಪ್ರೈಸಸ್ ಮೂಲಕ ಕೆ.ಎಸ್.ರಾಮ್ ಜೀ ಅವರು ಪುಟ್ಟಗೌರಿ ಮದುವೆ, ಗೀತಾ, ನಾಗಿಣಿ–2, ರಾಮಾಚಾರಿ ಸೇರಿದಂತೆ ಹಲವಾರು ಧಾರಾವಾಹಿಗಳನ್ನು ನಿರ್ಮಿಸಿದ್ದಾರೆ. ಈಗಾಗಲೇ ವಿಶ್ವದ ಹಲವಾರು ಕಂಪನಿಗಳ ಜೊತೆ ಸಹಭಾಗಿತ್ವ ಹೊಂದಿರುವ ಬನಿಜಯ್ ಏಷ್ಯಾ ಕಂಪನಿ, ಈಗ ರಾಮ್ ಜಿ ಅವರ ಸಂಸ್ಥೆಯ ಜೊತೆ ಕೈಜೋಡಿಸಿದೆ. ಈ ಕಂಪನಿಗಳ ಸಹಭಾಗಿತ್ವದ ಮೊದಲ ಹೆಜ್ಜೆಯಾಗಿ "ರಾಣಿ" ನಿರ್ಮಾಣವಾಗುತ್ತಿದ್ದು, ಸ್ಟಾರ್ ಸುವರ್ಣ ವಾಹಿನಿಯಲ್ಲಿ ಪ್ರಸಾರವಾಗುತ್ತದೆ. ನಮ್ಮ ಗಗನ್ ಎಂಟರ್ ಪ್ರೈಸಸ್ ಮೂಲಕ ಈವರೆಗೆ ಸ್ವಮೇಕ್ ಧಾರಾವಾಹಿಗಳೆ ಹೊರಬರುತ್ತಿದೆ.

ಈಗ ಬನಿಜಯ್ ಏಷ್ಯಾ ಕಂಪನಿ ನಮ್ಮ ಸಂಸ್ಥೆ ಜೊತೆ ಕೈಜೋಡಿಸಿದೆ. ಮುಂದೆ ನೂರು ಕೋಟಿಗೂ ಅಧಿಕ ವೆಚ್ಚದಲ್ಲಿ ವೆಬ್ ಸೀರೀಸ್ ಅಲ್ಲದೆ ಸಿನಿಮಾ ಮಾಡುವ ಯೋಜನೆ ಕೂಡ ಇದೆ ಎಂದರು ಕೆ.ಎಸ್.ರಾಮ್ ಜಿ.

ಪೆಂಟಗನ್ ತೆರೆಗೆ


ಐದು ಬೇರೆ ಬೇರೆ ಜಾನರ್ ಕಥೆಗಳನ್ನು ಇಟ್ಟುಕೊಂಡು ಮಾಡಿರುವ ಅಂಥಾಲಜಿ ಸಿನಿಮಾ ಪೆಂಟಗನ್ ಈ ಶುಕ್ರವಾರ ರಾಜ್ಯಾದ್ಯಂತ ತೆರೆಕಾಣುತ್ತಿದೆ. ಈ ಚಿತ್ರವನ್ನು ಗುರು ದೇಶಪಾಂಡೆ ಅವರು ನಿರ್ಮಿಸಿದ್ದು, ಚಿತ್ರದ 5 ಕಥೆಗಳಿಗೆ ಆಕಾಶ್ ಶ್ರೀವತ್ಸ, ಚಂದ್ರಮೋಹನ್, ರಾಘು ಶಿವಮೊಗ್ಗ, ಕಿರಣ್ ಕುಮಾರ್ ಹಾಗೂ ಗುರು ದೇಶಪಾಂಡೆ ಆಯಕ್ಷನ್–ಕಟ್ ಹೇಳಿದ್ದಾರೆ. ಚಿತ್ರದಲ್ಲಿ ಬರುವ ಡೆತ್ ಥೀಮ್ 5 ಕಥೆಗಳಲ್ಲೂ ಕಾಮನ್ ಆಗಿದ್ದು, ಈ ಐದೂ ಕತೆಗಳ ಕೊನೆಯಲ್ಲಿ ಕಾಗೆಯೊಂದು ಕತೆಗಳಿಗೆ ಲಿಂಕ್ ಮಾಡುತ್ತ ಹೋಗುತ್ತದೆ. ಮಣಿಕಾಂತ್ ಕದ್ರಿ ಅವರ ಸಂಗೀತ, ಕಿರಣ್ ಹಂಪಾಪುರ, ಅಭಿಲಾಶ್ ಕಲ್ಲತ್ತಿ, ಗುರುಪ್ರಸಾದ್ ಅವರ ಛಾಯಾಗ್ರಹಣವಿದೆ.



ಸಿನಿಪದಬಂಧ–468

ಉಮ್ಮತ್ತೂರು ಇಂದುಶೇಖರ್

ಮೊ.9880820462




ಹೆಸರು

ವಿಳಾಸ

ದೂರವಾಣಿ ಸಂಖ್ಯೆ

ವಿಜೇತರು: ಆರ್. ವಾಣಿಶ್ರೀ, W/O ಜೆ.ಮಾದೇಶ, M-14/B, 6ನೇ ಕ್ರಾಸ್, 4ನೇ ಮುಖ್ಯರಸ್ತೆ, ತಿಲಕ್‌ನಗರ, ಮೈಸೂರು-570001

ಸಿನಿ ಪದಬಂಧ 467ರ ಸರಿ ಉತ್ತರ



ಎಡದಿಂದ ಬಲಕ್ಕೆ

1.	ಚೆಲುವಿನ ಚಿತ್ತಾರದ ಬಾಲೆಗೆ ಬಹಳ ಬೆಲೆ !	3
2.	ಕ್ರೇಜಿಸ್ಟಾರ್ ಅಭಿನಯದ ಅರ್ಜುನನ ಮಗ	4
4.	ಆತ್ಮರಕ್ಷಣೆ ಮಾಡಿಕೊಳ್ಳುವ ಜಪಾನಿ ಕಲೆ	3
9.	ಸಿನಿಮಾಗಳಲ್ಲಿ ಮುಂದೆ ಏನಾಗುತ್ತದೆ.. ಎನ್ನುವ ಕಾತರತೆ ಹೀಗೆನ್ನಿ !	3
10.	ಉಪೇಂದ್ರನ ಚಿತ್ರಗಳ ರೀಲ್‌ನಲ್ಲಿ ಕಂಡ ವಾಸ್ತವ	3
12.	ದಾನವನೊಂದಿಗೆ ಬಂದ ನರ	3
13.	ಅಂಬಿಯ ಬಿರುದಿನಲ್ಲಿ ನಕ್ಷತ್ರವಿದೆ	5
14.	ಕರುಣಾಮಯಿ ಚಿತ್ರದ ನಿರ್ದೇಶಕ	5
16.	ನೆರಳಾಗಿ ಕಾಡಿದ ಉಪಪತ್ನಿ	3
17.	ಅರೇಬಿಯಾದ ಪುರಾಣ ಪಕ್ಷಿ ಮೇಲೆ...ಮೇಲೆ...	3
18.	ಕೆ.ಎಸ್.ಎಲ್.ಸ್ವಾಮಿಗೆ ಭಯವಿದೆ	3
19.	ದುನಿಯಾ ಚಿತ್ರದ ಯೋಗೀಶ್	4
20.	ಅಕ್ಬರ್, ಆಂಥೋನಿ ಜೊತೆ ಬಂದವನು	3

ಮೇಲಿನಿಂದ ಕೆಳಕ್ಕೆ

1.	ಎನ್.ಲಕ್ಷ್ಮಿ ನಾರಾಯಣ್ ನಿರ್ದೇಶನದ ಟಪಾಲ್ ಕಚೇರಿ	10
3.	ಅನಸೂಯ, ಅರುಂಧತಿ ಹಿಂದೆ ಇರುವ ಪತಿವ್ರತೆ	4
5.	"ನೀ ಹಿಂಗನೋಡಬ್ಯಾಡ ನನ್ನ...", ಗೀತೆಯ ಗಾಯಕ	8
6.	ಅಂಬರೀಶ್,ಗೀತಾ,ಭವ್ಯ ಅಭಿನಯದ ಚಿತ್ರ	10
7.	ಗಣೇಶ್ ಚಿತ್ರ ತಂಪು	2
8.	ವೈ.ಆರ್.ಸ್ವಾಮಿ ಚಿತ್ರದಲ್ಲಿ ಮಣಿಗಳ ಮೌಲ್ಯ	8
15.	ಡಕೋಟಾ _ _ _ _	4
16.	ಸಹೋದರರ ಸವಾಲ್ ಚಿತ್ರದ ಸಂಗೀತ ನಿರ್ದೇಶಕ	2

‘ಸಿನಿಬಂಧ’ ವಿಭಾಗ, ‘ಮೈಸೂರು ಮಿತ್ರ’ ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಮಾಜರ್ ಹೆಣ್ಣಿನ ಮೇಲೆ ನಡೆಯೋ ದೌರ್ಜನ್ಯದ ಸುತ್ತ

ಚಿತ್ರರಂಗದಲ್ಲಿ ಸಾಹಿತಿಯಾಗಿ ಗುರುತಿಸಿಕೊಂಡಿರುವ ಲೋಕಲ್ ಲೋಕಿ ಅವರ ನಿರ್ದೇಶನದ ಪ್ರಥಮಚಿತ್ರ ‘ಮಾಜರ್’. ಹೆಣ್ಣಿನ ಮೇಲೆ ನಿತ್ಯ ನಡೆಯುತ್ತಿರುವ ಅನ್ಯಾಯ, ಅತ್ಯಾಚಾರ ಇವುಗಳನ್ನು ಮಟ್ಟಹಾಕಲು ದೇಶದಲ್ಲಿ ಕಠಿಣ ಕಾನೂನು ಜಾರಿಯಾಗಬೇಕು ಎನ್ನುವುದೇ ‘ಮಾಜರ್’ ಚಿತ್ರದ ಕಥಾಹಂದರ. ಇತ್ತೀಚೆಗೆ ಈ ಚಿತ್ರದ ಹಾಡುಗಳನ್ನು ಸಚಿವ ಕೆ.ಗೋಪಾಲಯ್ಯ ಅವರು ಬಿಡುಗಡೆಗೊಳಿಸಿ ಚಿತ್ರತಂಡಕ್ಕೆ ಶುಭ ಕೋರಿದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ನಟ ಶ್ರೀನಗರ ಕಿಟ್ಟಿ ಮಾತನಾಡಿ, ಈಗ ಹೊಸಬರ ಚಿತ್ರಗಳು ಸೌಂಡ್ ಮಾಡುತ್ತಿವೆ. ಅದರಂತೆ ಈ ಚಿತ್ರವೂ ಯಶಸ್ವಿಯಾಗಲಿ ಎಂದು ಹಾರೈಸಿದರು. ನಂತರ ನಿರ್ಮಾಪಕ ಮುರುಗನಂದನ್ ಮಾತನಾಡುತ್ತಾ, ನನಗೆ ಚಿಕ್ಕವಯಸಿನಿಂದ ಕನ್ನಡದಲ್ಲಿ ಸದಭಿರುಚಿಯ ಚಿತ್ರವೊಂದನ್ನು ನಿರ್ಮಾಣ ಮಾಡಬೇಕೆಂಬ ಆಸೆಯಿತ್ತು. ಅದೇ ಸಮಯದಲ್ಲಿ ಲೋಕಿ ಅವರು ಹೇಳಿದ ಕಥೆ ಇಷ್ಟವಾಯಿತು. ಹಾಗಾಗಿ ಉತ್ತಮ ಸಂದೇಶವಿರುವ ಈ ಚಿತ್ರದ ನಿರ್ಮಾಣಕ್ಕೆ ಕೈಹಾಕಿದೆ ಎಂದರು. ನಂತರ ನಿರ್ದೇಶಕ ಲೋಕಿ ಮಾತನಾಡಿ, ಹಿಂದಿನ ಕಾಲದಿಂದ ನಮ್ಮ ಹೆಣ್ಣಿನ ಮೇಲೆ ನಡೆದುಕೊಂಡು ಬಂದಿರುವ ಅತ್ಯಾಚಾರ, ದೌರ್ಜನ್ಯವನ್ನು ಹೇಳುವ ಮೂಲಕ ಅಂಥಾ ಅತ್ಯಾಚಾರಿಗಳಿಗೆ ಯಾವ ರೀತಿ ಶಿಕ್ಷೆ ಕೊಡಬಹುದು, ಅಂಥವರನ್ನು ಯಾವುದೇ ಮುಲಾಜಿಲ್ಲದೆ ಕಠಿಣವಾಗಿ ದಂಡಿಸಬೇಕು ಎಂದು ‘ಮಾಜರ್’ ಚಿತ್ರದ ಮೂಲಕ ಹೇಳಿದ್ದೇವೆ, ಇದರ ಜತೆಗೊಂದು ಕ್ಯೂಟ್ ಲವ್‌ಸ್ಟೋರಿ ಕೂಡ ಚಿತ್ರದಲ್ಲಿದೆ.

ಮೈಸೂರು ಮಿತ್ರ

ಮಂಡ್ಯದ 3 ಕ್ಷೇತ್ರಗಳ ಕಾಂಗ್ರೆಸ್ ಟಿಕೆಟ್ ಘೋಷಣೆ

● ಮಂಡ್ಯಕ್ಕೆ ಪಿ.ರವಿಕುಮಾರ್, ಕೆ.ಆರ್.ಪೇಟೆಗೆ ಬಿ.ಎಲ್.ದೇವರಾಜು ಅಭ್ಯರ್ಥಿ, ಮೇಲುಕೋಟೆಯಲ್ಲಿ ದರ್ಶನ್‌ಗೆ ಬೆಂಬಲ ● ಟಿಕೆಟ್ ವಂಚಿತರಿಂದ ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ

ಮಂಡ್ಯ, ಏ.6– ಮೇ 10ರಂದು ನಡೆಯುವ ರಾಜ್ಯ ವಿಧಾನಸಭಾ ಚುನಾವಣೆಗೆ ಗುರುವಾರ ಕೆಪಿಸಿಸಿ 2ನೇ ಪಟ್ಟಿ ಘೋಷಿಸಿದ್ದು, ಜಿಲ್ಲೆಯ ಮಂಡ್ಯ ಕ್ಷೇತ್ರಕ್ಕೆ ಗಣಿಗ ಪಿ.ರವಿಕುಮಾರ್‌ಗೌಡ, ಕೆ.ಆರ್.ಪೇಟೆ ಕ್ಷೇತ್ರಕ್ಕೆ ಇತ್ತೀಚೆಗೆ ಜೆಡಿಎಸ್ ತೊರೆದು 'ಕೈ' ಹಿಡಿದಿದ್ದ ಬಿ.ಎಲ್.ದೇವರಾಜು ಅವರಿಗೆ ಟಿಕೆಟ್ ಘೋಷಿಸಿದ್ದರೆ, ಮೇಲುಕೋಟೆ ಕ್ಷೇತ್ರಕ್ಕೆ ಅಭ್ಯರ್ಥಿ ಘೋಷಿಸದೇ ರೈತಸಂಘದ ಅಭ್ಯರ್ಥಿ ದರ್ಶನ್ ಪುಟ್ಟಣ್ಣಯ್ಯ ಅವರನ್ನು ಬೆಂಬಲಿಸಲು ತೀರ್ಮಾನಿಸಿದೆ.

15 ಮಂದಿ ಆಕಾಂಕ್ಷಿಗಳ ನಡುವೆ ರವಿಗೆ ಒಲಿದ ಅದೃಷ್ಟ!

ಇಡೀ ಜಿಲ್ಲೆಯಲ್ಲೇ ಕಾಂಗ್ರೆಸ್ ಟಿಕೆಟ್‌ಗೆ ಭಾರೀ ಪೈಪೋಟಿ ಏರ್ಪಟ್ಟಿದ್ದು, ಮಂಡ್ಯ ವಿಧಾನಸಭಾ ಕ್ಷೇತ್ರದಲ್ಲಿ. ಏಕೆಂದರೆ ಕೇಂದ್ರ ಸ್ಥಾನ ಮಂಡ್ಯದಿಂದ ಸ್ಪರ್ಧಿಸಲು ಬರೋಬ್ಬರಿ 16 ಮಂದಿ ಆಕಾಂಕ್ಷಿತರು ಅರ್ಜಿ ಸಲ್ಲಿಸಿದ್ದರು.



ಈ ಸಂಬಂಧ ಭಾರೀ ಬಂಡಾಯ ಎದುರಾಗಿತ್ತು. ಎಲ್ಲಾ ಬಂಡಾಯ ಶಮನ ಮಾಡಲು ಉಪಾಯ ಮಾಡಿದ ರಾಜ್ಯ 'ಕೈ' ಪಡೆ 2018ರ ಪರಾಜಿತ ಅಭ್ಯರ್ಥಿ ಗಣಿಗ ಪಿ.ರವಿಕುಮಾರ್‌ಗೌಡಗೆ ಮತ್ತೆ ಮಣೆ ಹಾಕಿದೆ.

ಅರ್ಜಿ ಸಲ್ಲಿಸಿದ್ದವರ ಪೈಕಿ ಟಿಕೆಟ್‌ಗಾಗಿ ಭಾರೀ ಪೈಪೋಟಿ ನಡೆಸಿದವರು ಹಾಲಿ ಅಭ್ಯರ್ಥಿ ಗಣಿಗ ರವಿಕುಮಾರ್, ಮಾಜಿ ಸಚಿವ ಎಂ.ಎಸ್.ಆತ್ಮಾನಂದ, ಜೆಡಿಎಸ್ ತೊರೆದು ಕಾಂಗ್ರೆಸ್‌ಗೆ ಬಂದಿದ್ದ ಕೀಲಾರ ರಾಧಾಕೃಷ್ಣ, ಖ್ಯಾತ ವೈದ್ಯ ಡಾ.ಕೃಷ್ಣ. ಈ ನಾಲ್ವರ ನಡುವೆ ಟಿಕೆಟ್ ಪಡೆಯಲು ತೀವ್ರ ಸ್ಪರ್ಧೆ ಏರ್ಪಟ್ಟಿತ್ತು. ಅಲ್ಲದೇ ಮಾಜಿ ಶಾಸಕ ಹೆಚ್.ಬಿ. ರಾಮು, ಹಿರಿಯ ಮುಖಂಡರಾದ ಸಿದ್ದಾರೂಢ ಸತೀಶ್‌ಗೌಡ, ಅಮರಾವತಿ ಚಂದ್ರಶೇಖರ್, ಹನಕೆರೆ ಶಿವರಾಮು, ಹಾಲಹಳ್ಳಿ ರಾಮಲಿಂಗಯ್ಯ, ಎಂ.ಎಸ್. ಚಿದಂಬರ್ ಸೇರಿದಂತೆ ಒಟ್ಟು 16 ಮಂದಿ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿದ್ದರು.

ಒಂದು ಹಂತದಲ್ಲಿ ಜೆಡಿಎಸ್ ತೊರೆದು ಕಾಂಗ್ರೆಸ್‌ಗೆ ಬಂದಿದ್ದ ಕೀಲಾರ ರಾಧಾಕೃಷ್ಣಗೆ ಟಿಕೆಟ್ ಫೈನಲ್ ಆಗಿದೆ ಎಂಬ ವದಂತಿ ಕಾಂಗ್ರೆಸ್ ವಲಯದಲ್ಲೇ ಹಬ್ಬಿತ್ತು. ಇದಕ್ಕೆ ಗಣಿಗ ರವಿ ಸಹಮತ ವಿದೆ ಎಂಬ ಮಾತುಗಳು ಸಹ ಕೇಳಿ ಬಂದಿತ್ತು. ಈ ನಡುವೆ ಆತ್ಮಾನಂದ, ಅಮರಾವತಿ ಚಂದ್ರಶೇಖರ್, ಹೆಚ್.ಬಿ. ರಾಮು ಸೇರಿದಂತೆ ಹಲವು ಕೈ ಟಿಕೆಟ್ ಆಕಾಂಕ್ಷಿಗಳು ವಲಸಿಗ ರಾಧಾಕೃಷ್ಣಗೆ ಕೊಟ್ಟರೆ ಬಂಡಾಯ ಏಳುವುದಾಗಿ ಡಿಕೆಶಿಯಿಂದ ಖರ್ಗೆವರೆಗೂ ಭೇಟಿ ಮಾಡಿ, ಮನವಿ ಸಲ್ಲಿಸಿ ಬಂದಿದ್ದರು. ಮೂಲ ಕಾಂಗ್ರೆಸ್ಸಿಗರಿಗೆ ಟಿಕೆಟ್ ಕೊಡುವಂತೆ ಒತ್ತಾಯ ಮಾಡಿದ್ದರು.

ಎಲ್ಲವನ್ನು ಅಳೆದು ತೂಗಿ ಲೆಕ್ಕಾಚಾರ ಹಾಕಿದ ಹೈಕಮಾಂಡ್, ಕಳೆದ ಬಾರಿ ಪರಾಜಿತ ಅಭ್ಯರ್ಥಿ ಹಾಗೂ ಮೂಲ ಕಾಂಗ್ರೆಸ್ಸಿಗ ಗಣಿಗ ರವಿಕುಮಾರ್‌ಗೆ ಟಿಕೆಟ್ ನೀಡಿದರೆ ಉಳಿದ 15 ಮಂದಿಯನ್ನು ತಣ್ಣಗಾಗಿಸಬಹುದೆಂದು ಲೆಕ್ಕಾಚಾರ ಹಾಕಿ, ಕಡೆಗೆ ರವಿಕುಮಾರ್‌ಗೆ ಮಣೆ ಹಾಕಿದೆ. ಈ ಮೂಲಕ ಎಲ್ಲರೂ ಒಗ್ಗಟ್ಟಿನಿಂದ ಚುನಾವಣೆ ಎದುರಿಸುವಂತೆ ಸೂಚನೆ ನೀಡಿದ್ದು, ಟಿಕೆಟ್ ಸಿಗುವ ಆಸೆಯಲ್ಲಿದ್ದ ಪ್ರಬಲ ಆಕಾಂಕ್ಷಿ ರಾಧಾಕೃಷ್ಣಗೆ ಭಾರೀ ಹಿನ್ನಡೆಯಾಗಿದ್ದು, ಪಕ್ಷದಲ್ಲೇ ಇರುತ್ತಾರೋ ಅಥವಾ ಪಕ್ಷ ತೊರೆಯುತ್ತಾರೋ ಎನ್ನುವುದನ್ನು ಕಾದು ನೋಡಬೇಕಿದೆ.

ಕೆ.ಆರ್.ಪೇಟೆ: ದೇವೇಗೌಡರ ಮಾನಸಪುತ್ರ ಬಿಎಲ್‌ಡಿಗೆ ಟಿಕೆಟ್

ಕೆ.ಆರ್.ಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಸಚಿವ ಕೆ.ಸಿ. ನಾರಾಯಣಗೌಡ ಬಿಜೆಪಿ ತೊರೆದು ಕಾಂಗ್ರೆಸ್‌ಗೆ ಬಂದೇ ಬಿಟ್ಟರು ಎಂಬ ಮಾತು ಕೇಳಿ ಬಂದ ಕೆಲವೇ ದಿನಗಳಲ್ಲಿ ಕ್ಷೇತ್ರದ ಕಾಂಗ್ರೆಸ್ ಚಿತ್ರಣ ಬದಲಾಗಿ ಜೆಡಿಎಸ್ ವಿರುದ್ಧ ಬಂಡಾಯ ಸಾರಿದ್ದ ಬಿ.ಎಲ್.ದೇವರಾಜುರನ್ನು ಕಾಂಗ್ರೆಸ್‌ಗೆ ಕರೆ ತರಲಾಗಿತ್ತು. ಇದೀಗ ಅವರಿಗೆ ಟಿಕೆಟ್ ಘೋಷಣೆ ಮಾಡಲಾಗಿದೆ.



ಮೂಲತಃ ಜನತಾ ಪರಿವಾರದ ಬಿ.ಎಲ್.ದೇವರಾಜು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಮಾನಸಪುತ್ರರೆಂದೇ ಬಿಂಬಿತವಾದವರು. 1996ರಲ್ಲಿ ನಡೆದ ಕೆಆರ್.ಪೇಟೆ ಉಪ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿದ್ದ ಅವರು ಪರಾಭವಗೊಂಡಿದ್ದರು. ಬಳಿಕ ಮತ್ತೆ ಅವರಿಗೆ ಪಕ್ಷದಲ್ಲಿ ಟಿಕೆಟ್ ದೊರೆತಿರಲಿಲ್ಲ. ಆದರೆ 2019ರಲ್ಲಿ ಕೆ.ಸಿ.ನಾರಾಯಣಗೌಡ ಜೆಡಿಎಸ್ ತೊರೆದು ಬಿಜೆಪಿಗೆ ಹೋದಾಗ ನಡೆದ ಉಪ ಚುನಾವಣೆಯಲ್ಲಿ 23 ವರ್ಷಗಳ ನಂತರ ಮತ್ತೆ ಜೆಡಿಎಸ್ ಟಿಕೆಟ್ ಕೊಡಲಾಯಿತು. ಆದರೆ ದೇವರಾಜು ಆ ಚುನಾವಣೆಯಲ್ಲಿ ಸೋಲುಂಡರು.

ಈ ಬಾರಿಯ ಚುನಾವಣೆಯಲ್ಲಿ ಬಿ.ಎಲ್.ದೇವರಾಜುಗೆ ಟಿಕೆಟ್ ನಿರಾಕರಿಸಿ ಮನ್‌ಮುಲ್ ನಿರ್ದೇಶಕ ಹೆಚ್.ಟಿ. ಮಂಜುಗೆ ಜೆಡಿಎಸ್ ಮಣೆ ಹಾಕಿತ್ತು. ಇದರಿಂದ ಬಂಡಾಯವೆದ್ದಿದ್ದ ದೇವರಾಜು, ಮೂರ್‍ನಾಲ್ಕು ಬಾರಿ ಬೆಂಬಲಿಗರ ಸಭೆ ಮಾಡಿ, ಬಂಡಾಯ ಸಾರುವ ಮುನ್ಸೂಚನೆ ನೀಡಿದ್ದರು. ಇದಕ್ಕೆ ದಳಪತಿಗಳು ಸೊಪ್ಪು ಹಾಕಿರಲಿಲ್ಲ. ಪರಿಸ್ಥಿತಿ ಹೀಗಿರುವಾಗ ನಾರಾಯಣಗೌಡ ಕಾಂಗ್ರೆಸ್ ಸೇರುವ ವದಂತಿ ಮಧ್ಯೆ, ಕೆ.ಆರ್.ಪೇಟೆ ಪ್ರಮುಖ ಕಾಂಗ್ರೆಸ್ಸಿಗರಾದ ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ಪ್ರಕಾಶ್ ಹಾಗೂ ಮತ್ತೋರ್ವ ಟಿಕೆಟ್ ಆಕಾಂಕ್ಷಿ ವಿಜಯ್ ರಾಮೇಗೌಡ ನಾರಾಯಣಗೌಡ ಪಕ್ಷ ಸೇರ್ಪಡೆಗೆ ಭಾರೀ ವಿರೋಧ ವ್ಯಕ್ತಪಡಿಸಿದರು.

ಆ ವೇಳೆಗೆ ನಾರಾಯಣಗೌಡ ಕಾಂಗ್ರೆಸ್ ಸೇರಲು ಕೊಂಚ ಹಿಂದೇಟು ಹಾಕಿದಾಗ ಕೆ.ಆರ್.ಪೇಟೆ ಕಾಂಗ್ರೆಸ್ಸಿಗರು ದೇವರಾಜು ಕರೆತಂದರೆ ನಮ್ಮ ಆಕ್ಷೇಪವಿಲ್ಲ ಎಂದ ಕಾರಣ, ರಾಜ್ಯ ಹಾಗೂ ಸ್ಥಳೀಯ ಕಾಂಗ್ರೆಸ್ಸಿಗರು ಹಿರಿಯ ಮುತ್ಸದ್ದಿ ಬಿ.ಎಲ್.ದೇವರಾಜುಗೆ ಮಣೆ ಹಾಕಿದರು. ದೇವರಾಜು ಟಿಕೆಟ್ ಖಾತ್ರಿ ಮಾಡಿಕೊಂಡು ಕಾಂಗ್ರೆಸ್ ಸೇರ್ಪಡೆಯಾದ ಪರಿಣಾಮ ದೇವರಾಜು ಅವರಿಗೆ ಟಿಕೆಟ್ ಘೋಷಿಸಲಾಗಿದೆ.



ಭಾರೀ ವಿರೋಧದ ನಡುವೆಯೂ ಮೇಲುಕೋಟೆ ಕ್ಷೇತ್ರಕ್ಕೆ ಕಾಂಗ್ರೆಸ್ ಅಭ್ಯರ್ಥಿ ಘೋಷಣೆ ಮಾಡದ ರಾಜ್ಯ ಕೈ ನಾಯಕರು, ರೈತ ಸಂಘದ ಅಭ್ಯರ್ಥಿ, ಮಾಜಿ ಶಾಸಕ ದಿ.ಕೆ.ಎಸ್. ಪುಟ್ಟಣ್ಣಯ್ಯ ಪುತ್ರ ದರ್ಶನ್ ಪುಟ್ಟಣ್ಣಯ್ಯಗೆ ಮತ್ತೆ ಬೆಂಬಲ ಸೂಚಿಸಿದ್ದಾರೆ.

ದರ್ಶನ್‌ಗೆ ಮತ್ತೆ 'ಕೈ' ಬಲ

ಕಳೆದ 2018ರ ಚುನಾವಣೆಯಲ್ಲಿ ಹಾಲಿ ಶಾಸಕರಾಗಿದ್ದ ಕೆ.ಎಸ್.ಪುಟ್ಟಣ್ಣಯ್ಯ ವಿಧಿವಶರಾದ ವೇಳೆ ದರ್ಶನ್ ಕಣಕ್ಕಿಳಿದಾಗ ಕಾಂಗ್ರೆಸ್ ಅಭ್ಯರ್ಥಿ ಹಾಕದೇ ಬೆಂಬಲ ಸೂಚಿಸಿತ್ತು. ಈಗಲೂ ಸಹ ಅಭ್ಯರ್ಥಿ ಕಣಕ್ಕಿಳಿಸದೇ ದರ್ಶನ್‌ಗೆ ಬಹಿರಂಗವಾಗಿ ಬೆಂಬಲ ಸೂಚಿಸಿದೆ.

ಮೇಲುಕೋಟೆ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಸಂಘಟನೆ ಕೊರತೆ ಇದ್ದರೂ, ತನ್ನದೇ ಆದ ಮತ ಬ್ಯಾಂಕ್ ಹೊಂದಿದೆ. ಈ ನಿಟ್ಟಿನಲ್ಲಿ ಟಿಕೆಟ್‌ಗಾಗಿ ಡಾ.ರವೀಂದ್ರ, ತ್ಯಾಗರಾಜು, ಸಚಿನ್ ಮಿಗಾ ಸೇರಿದಂತೆ 5 ಮಂದಿ ಕೆಪಿಸಿಸಿಗೆ ಅರ್ಜಿ ಸಲ್ಲಿಸಿದ್ದರು. ಅದರಲ್ಲೂ ಡಾ.ರವೀಂದ್ರ, ತ್ಯಾಗರಾಜು ದರ್ಶನ್‌ಗೆ ಬೆಂಬಲ ಕೊಡದೇ ಅಧಿಕೃತವಾಗಿ ಪಕ್ಷದ ಅಭ್ಯರ್ಥಿ ಕಣಕ್ಕಿಳಿಸುವಂತೆ ಕೋರಿದ್ದರು. ಆದರೆ ಇದಕ್ಕೆ ಮನ್ನಣೆ ನೀಡದ ರಾಜ್ಯ ಕೈಪಡೆ ಪುಟ್ಟಣ್ಣಯ್ಯ ಪುತ್ರ ದರ್ಶನ್‌ಗೆ ಮಣೆ ಹಾಕಿದೆ.

ಈ ಮೂಲಕ ರಾಜ್ಯ ಕಾಂಗ್ರೆಸ್ಸಿಗರೇ ಮೇಲುಕೋಟೆಯಲ್ಲಿ ಕಾಂಗ್ರೆಸ್ ಪಕ್ಷ ಸಂಘಟನೆಗೆ ಅಡ್ಡಗಾಲಾಗಿದ್ದು, ಅಲ್ಲಿನ ಕಾರ್ಯಕರ್ತರನ್ನು ಅತಂತ್ರ ಮಾಡಿದ್ದಾರೆ. ಆದರೆ ಪ್ರಬಲ ಟಿಕೆಟ್ ಆಕಾಂಕ್ಷಿಗಳು ಯಾವ ನಿರ್ಧಾರ ಕೈಗೊಳ್ಳುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ.

ಇನ್ನೂ ನಿಗೂಢ ಮದ್ದೂರು

ಕಾಂಗ್ರೆಸ್‌ನ 2ನೇ ಪಟ್ಟಿಯಲ್ಲಿ ಮದ್ದೂರು ವಿಧಾನಸಭಾ ಕ್ಷೇತ್ರದ ಟಿಕೆಟ್ ಘೋಷಣೆಯಾಗಿಲ್ಲ. ಎಸ್.ಎಂ.ಕೃಷ್ಣ ಸಂಬಂಧಿ ಎಂ.ಎಸ್.ಗುರುಚರಣ್ ಹಾಗೂ ಉದ್ಯಮಿ ಕದಲೂರು ಉದಯ್ ನಡುವೆ ಟಿಕೆಟ್‌ಗಾಗಿ ಭಾರೀ ಪೈಪೋಟಿ ಏರ್ಪಟ್ಟಿದ್ದು, ಕಾಂಗ್ರೆಸ್ ಮದ್ದೂರು ಕ್ಷೇತ್ರದ ಟಿಕೆಟ್ ಘೋಷಿಸದೇ ಪೆಂಡಿಂಗ್ ಇಟ್ಟಿದೆ.



ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ತಮ್ಮನ ಮಗನಾದ ಗುರುಚರಣ್‌ಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ 2 ವರ್ಷಗಳ ಹಿಂದೆಯೇ ನೀನೇ ಮದ್ದೂರು ಕ್ಷೇತ್ರದ ಅಭ್ಯರ್ಥಿ ಎಂದು ಬಹಿರಂಗವಾಗಿ ಘೋಷಿಸಿದ್ದರು. ಆದರೆ ಗುರುಚರಣ್ ಸಂಘಟನೆಯಲ್ಲಿ ತೊಡಗಿರಲಿಲ್ಲ. ಇದು ಡಿಕೆಶಿ ಅಸಮಾಧಾನಕ್ಕೂ ಕಾರಣವಾಗಿತ್ತು. ಆದರೆ ಪಕ್ಷೇತರವಾಗಿ ಸ್ಪರ್ಧಿಸುವುದಾಗಿ ಘೋಷಿಸಿ, ಕ್ಷೇತ್ರದಾದ್ಯಂತ ಓಡಾಡುತ್ತಿದ್ದ ಉದಯ್ ಕಾಂಗ್ರೆಸ್ ಕದ ತಟ್ಟುತ್ತಿದ್ದರೂ, ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡಿರಲಿಲ್ಲ. ಒತ್ತಡದ ಮೇರೆಗೆ ಡಿಕೆಶಿ ಉದಯ್‌ರನ್ನು ಇತ್ತೀಚೆಗೆ ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡಿದ್ದರು.

ಆದರೆ ಸಮ್ಮಿಶ್ರ ಸರ್ಕಾರ ಉರುಳಲು ಪ್ರಮುಖ ಕಾರಣರಾಗಿದ್ದ ಉದಯ್‌ಗೆ ಟಿಕೆಟ್ ಕೊಡಬಾರದೆಂದು ಡಿಕೆಶಿ ವಾದಿಸಿದ್ದರು. ಆದರೆ ಸ್ಥಳೀಯರ ಒತ್ತಡ ಹಾಗೂ ಗುರುಚರಣ್ ಸಮ್ಮತಿ ಮೇರೆಗೆ ಒಪ್ಪಿಗೆ ಸೂಚಿಸಿದ್ದ ಡಿಕೆಶಿ, ಇದೀಗ ಮಾಜಿ ಸಿಎಂ ಎಸ್.ಎಂ.ಕೃಷ್ಣ ತಮ್ಮ ಕುಟುಂಬಕ್ಕೆ ಕಾಂಗ್ರೆಸ್ ಟಿಕೆಟ್ ಮೀಸಲಿಡಬೇಕೆಂಬ ಸೂಚನೆ ನೀಡಿರುವುದರಿಂದ ಡಿಕೆಶಿ ಮತ್ತೆ ಉದಯ್‌ಗೆ ಟಿಕೆಟ್ ನೀಡಲು ಹಿಂದೇಟು ಹಾಕಿದ್ದಾರೆ ಎನ್ನಲಾಗಿದೆ. ಒಂದು ವೇಳೆ ಗುರುಚರಣ್ ಸ್ಪರ್ಧಿಸಲು ಮನಸ್ಸು ತೋರದಿದ್ದರೆ ಎಸ್.ಎಂ.ಕೃಷ್ಣ ಮೊಮ್ಮಗ, ಕಾಫಿ ಡೇ ಮಾಲೀಕರಾಗಿದ್ದ ದಿ.ಸಿದ್ದಾರ್ಥ ಪುತ್ರ ಹಾಗೂ ಡಿಕೆಶಿ ಅಳಿಯ ಅಮಾರ್ಥ್ಯಗೆ ಮಣೆ ಹಾಕುವ ಸಾಧ್ಯತೆ ಇದೆ ಎಂದು ಸ್ಥಳೀಯ ಕಾಂಗ್ರೆಸ್ಸಿಗರು ಹೇಳುತ್ತಿದ್ದಾರೆ.



ಕೈ ತಪ್ಪಿದ ಟಿಕೆಟ್: ರಾಧಾಕೃಷ್ಣ ಬೆಂಬಲಿಗರಿಂದ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ

ಮಂಡ್ಯ: ಮಂಡ್ಯ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಕೈ ತಪ್ಪಿದ ಹಿನ್ನೆಲೆಯಲ್ಲಿ ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿದ್ದ ಕೀಲಾರ ರಾಧಾಕೃಷ್ಣ ಬೆಂಬಲಿಗರು ನಗರದ ಬಂದೀಗೌಡ ಬಡಾವಣೆಯಲ್ಲಿರುವ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದರು.

ರಾಧಾಕೃಷ್ಣಗೆ ಟಿಕೆಟ್ ಭರವಸೆ ನೀಡಿ ಪಕ್ಷಕ್ಕೆ ಕರೆತರಲಾಯಿತು. ಆದರೆ ಇದೀಗ ಟಿಕೆಟ್ ನೀಡದೇ ವಂಚಿಸಿದ್ದಾರೆ. ರಾಧಾಕೃಷ್ಣ ಕ್ಷೇತ್ರದಾದ್ಯಂತ ಪ್ರಚಾರ ನಡೆಸಿ, ಪಕ್ಷ ಸಂಘಟಿಸಿದ್ದರು. ಇದೀಗ ಯಾರದೋ ಮಾತಿಗೆ ಮಣೆ ಹಾಕಿ ಟಿಕೆಟ್ ಕೈ ತಪ್ಪಿಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಕಾಂಗ್ರೆಸ್ ಕಚೇರಿಗೆ ನುಗ್ಗಿ ಚೇರುಗಳನ್ನು ಒಡೆಯಲು ಯತ್ನಿಸಿದಾಗ ಅಲ್ಲೇ ಇದ್ದ ಸಿಬ್ಬಂದಿ ಹಾಗೂ ಕಾಂಗ್ರೆಸ್ ಕಾರ್ಯಕರ್ತರು ರಾಧಾಕೃಷ್ಣ ಬೆಂಬಲಿಗರನ್ನು ಸಮಾಧಾನಪಡಿಸಿ, ಅಲ್ಲಿಂದ ಹೊರ ಕಳುಹಿಸಿದರು.



ಮದ್ದೂರಿನ ಪುರಾಣ ಪ್ರಸಿದ್ಧ ಶ್ರೀಹೊಳೆ ಆಂಜನೇಯಸ್ವಾಮಿ ದೇಗುಲಕ್ಕೆ ಶಾಸಕ ಸಿ.ಎಸ್.ಪುಟ್ಟರಾಜು ಆಗಮಿಸಿ ವಿಶೇಷ ಪೂಜೆ ಸಲ್ಲಿಸಿದರು. ಪ್ರಧಾನ ಅರ್ಚಕ ಪ್ರದೀಪ್ ಆಚಾರ್ಯ ಇದ್ದರು.

ಚುನಾವಣಾ ಆಯೋಗಕ್ಕೆ ಶಾಸಕ ಎಂ.ಶ್ರೀನಿವಾಸ್ ದೂರು

ಮಂಡ್ಯ, ಏ.6– ಶಾಸಕ ಎಂ.ಶ್ರೀನಿವಾಸ್ ರಾಜಕೀಯ ನಿವೃತ್ತಿ ಪಡೆದಿದ್ದಾರೆ ಎಂದು ಕೆಲವು ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹರಿದಾಡುತ್ತಿದ್ದು, ಈ ಸಂಬಂಧ ಹಾಲಿ ಶಾಸಕ ಹಾಗೂ ಮಂಡ್ಯ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಎಂ.ಶ್ರೀನಿವಾಸ್ ಚುನಾವಣಾ ಆಯೋಗಕ್ಕೆ ಗುರುವಾರ ಸಂಜೆ ದೂರು ನೀಡಿದ್ದಾರೆ. ಜೆಡಿಎಸ್‌ನಿಂದ ನನ್ನನ್ನು ಅಧಿಕೃತವಾಗಿ ಅಭ್ಯರ್ಥಿ ಎಂದು ಘೋಷಿಸಿದ್ದರೂ, ಕೆಲ ವಿರೋಧಿಗಳು ನನ್ನ ವಿರುದ್ಧ ಷಡ್ಯಂತ್ರ ಮಾಡಿದ್ದು, ಕೆಲವು ಸಾಮಾಜಿಕ ಜಾಲತಾಣಗಳಲ್ಲಿ ನಾನು ರಾಜಕೀಯ ನಿವೃತ್ತಿ ಪಡೆದಿದ್ದೇನೆ ಎಂದು ಸುಳ್ಳು ಸುದ್ದಿ ಹಬ್ಬಿಸಿದ್ದಾರೆ. ಅಂತಹವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ, ಚುನಾವಣಾಧಿಕಾರಿ ಹಾಗೂ ಎಸ್ಪಿಗೆ ದೂರು ನೀಡಲಾಗಿದೆ ಎಂದು ಶಾಸಕರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಜೊತೆಗೆ ನಾನು ಚುನಾವಣೆಯಲ್ಲಿ ಸ್ಪರ್ಧಿಸುವುದು ಖಚಿತ. ನಾಮಪತ್ರ ಸಲ್ಲಿಕೆ ಕಾರ್ಯ ಆರಂಭವಾದ ಬಳಿಕ ನಾಮಪತ್ರ ಸಲ್ಲಿಸಲಿದ್ದು, ಚುನಾವಣೆಗೆ ತಯಾರಿ ನಡೆಸಿದ್ದೇನೆ ಎಂದರು.

ವಿದ್ಯುತ್ ವ್ಯತ್ಯಯ



ನಾಗಮಂಗಲ, ಏ.6– ತಾಲೂಕಿನ ಬೆಳ್ಳೂರು ಉಪ ವಿಭಾಗ ವ್ಯಾಪ್ತಿಯಲ್ಲಿ ಏ.7 ಮತ್ತು 8ರಂದು ಪಟ್ಟಣದ ಇಂದ್ರ ನಗರ, ಅಂಬಲ್ ಜೀರಹಳ್ಳಿ, ಭಕ್ತನಾದಪುರ, ಚೆನ್ನಯ್ಯನಕೊಪ್ಪಲು, ತೊರೆ ಸರ್ಕಲ್, ಕೋಟೆ ರಾಮನಕೊಪ್ಪಲು, ಲಕ್ಷ್ಮಿಪುರ, ವಡ್ಡರಹಳ್ಳಿ, ಬಾಣನಹಳ್ಳಿ, ಗಾಣಸಂದ್ರ, ಜಿ.ನಾಗತಿಹಳ್ಳಿ, ಬ್ಯಾಲದ ಕೆರೆ, ರಾಮನಂದ ನಗರ ಹಾಗೂ ಕುಂಬಾರ ಪಾಳ್ಯ ಗ್ರಾಮಗಳಲ್ಲಿ ಬೆಳಗ್ಗೆ 10ರಿಂದ ಸಂಜೆ 6ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ರಾಜ್ಯಮಟ್ಟದ ಯುಗಾದಿ ಕಾವ್ಯ ಮೇಳ

ಮೈಸೂರು, ಏ.6– ಸ್ಪಂದನಾ ಸಾಂಸ್ಕೃತಿಕ ಪರಿಷತ್ತು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ವಿಸ್ಮಯ ಪ್ರಕಾಶನದ ಸಂಯುಕ್ತ ಆಶ್ರಯದಲ್ಲಿ ವಿಜಯನಗರದ ಜಿಲ್ಲಾ ಸಾಹಿತ್ಯ ಭವನದಲ್ಲಿ ಏ.7 ರಂದು ಬೆಳಿಗ್ಗೆ 10 ಗಂಟೆಗೆ ರಾಜ್ಯ ಮಟ್ಟದ ಯುಗಾದಿ ಕಾವ್ಯ ಮೇಳ, ನಾಲ್ವಡಿ ಕೃಷ್ಣರಾಜ ಒಡೆಯರ್ ಸಮಾಜ ಮುಖಿ ಹಾಗೂ ಯುವ ಚೇತನ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ (ಸಿಪಿಕೆ) ಕಾವ್ಯ ಮೇಳ ಉದ್ಘಾಟಿಸಲಿದ್ದು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸುವರು. ಸ್ಪಂದನಾ ಸಾಂಸ್ಕೃತಿಕ ಪರಿಷತ್ತಿನ ಸಂಸ್ಥಾಪಕ ಅಧ್ಯಕ್ಷ ಟಿ. ಸತೀಶ್ ಜವರೇಗೌಡ ಆಶಯ ನುಡಿಗಳನ್ನಾಡುವರು. ಹಿರಿಯ ಕವಿಯಿತ್ರಿ ಡಾ. ಲತಾ ರಾಜಶೇಖರ್ 'ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ' ಪ್ರದಾನ ಮಾಡುವರು. ಮುಖ್ಯ ಅತಿಥಿಗಳಾಗಿ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಡಾ.ಎಂ.ಬಿ. ಮಂಜೇಗೌಡ, ಬಿಜೆಪಿ ಮಹಿಳಾ ಮೋರ್ಚಾ ಮಹಾನಗರ ಘಟಕದ ಅಧ್ಯಕ್ಷೆ ಹೇಮ ನಂದೀಶ್, ಹಿರಿಯ ಸಾಹಿತಿ ಬೆಂಗಳೂರಿನ ಸಿದ್ದಲಿಂಗಯ್ಯ ಬನ್ನಂಗಾಡಿ ಪಾಲ್ಗೊಳ್ಳುವರು.

ಹಿರಿಯ ಲೇಖಕಿ ಎಸ್.ಗುಣಸಾಗರಿ ನಾಗರಾಜು, ಪ್ರಾಧ್ಯಾಪಕ ಪ್ರೊ.ಬಿ.ಆರ್. ರಾಮಚಂದ್ರಯ್ಯ, ವಿಸ್ಮಯ ವಿಜೇತ ಮಾಸಪತ್ರಿಕೆ ಸಂಪಾದಕ ಎಸ್.ಕೆ. ಶಿವಕುಮಾರ್, ಸಮಾಜ ಸೇವಕಿ ಕೆ.ಆರ್. ಪ್ರಭಾವತಿ, ಸಾಂಸ್ಕೃತಿಕ ಸಂಘಟಕ ಕುವರ ಯಲ್ಲಪ್ಪ, ಹೆಡ್ ಕಾನ್ಸ್‌ಟೇಬಲ್ ಎಸ್.ಡಿ. ಲಕ್ಷ್ಮೀನರಸಿಂಹ ಅವರು 'ನಾಲ್ವಡಿ ಕೃಷ್ಣರಾಜ ಒಡೆಯರ್ ಸಮಾಜಮುಖಿ ಪ್ರಶಸ್ತಿ' ಸ್ವೀಕರಿಸುವರು. ಮಧ್ಯಾಹ್ನ 12 ಕ್ಕೆ ಮೊದಲ ಕವಿಗೋಷ್ಠಿಯ ಅಧ್ಯಕ್ಷತೆಯನ್ನು ಗುಂಡ್ಲುಪೇಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಡಾ.ಎ.ಆರ್. ಮದನಕುಮಾರ್ ವಹಿಸಲಿದ್ದು, ಕವಿಯಿತ್ರಿ ಎ. ಹೇಮಗಂಗಾ ಆಶಯ ನುಡಿಗಳನ್ನಾಡುವರು. ಎರಡನೆಯ ಕವಿಗೋಷ್ಠಿ ಮಧ್ಯಾಹ್ನ 2ಕ್ಕೆ ನಡೆಯಲಿದ್ದು ಮೈಸೂರು ವಿಶ್ವವಿದ್ಯಾನಿಲಯದ ಸಂಜೆ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಡಾ.ಸಿ.ಡಿ. ಪರಶುರಾಮ ಅಧ್ಯಕ್ಷತೆ ವಹಿಸುವರು. ಹಿರಿಯ ಬರಹಗಾರ್ತಿ ಉಷಾ ನರಸಿಂಹನ್ ಆಶಯ ನುಡಿಗಳನ್ನಾಡುವರು.

ಸಂಜೆ 4 ಗಂಟೆಗೆ ನಡೆಯಲಿರುವ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಕರ್ನಲ್ ಪ್ರೊ.ವೈ.ಎಸ್. ಸಿದ್ದೇಗೌಡ ವಹಿಸ ಲಿದ್ದು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ. ಪದ್ಮಶೇಖರ್ 'ಯುವ ಚೇತನ ಪ್ರಶಸ್ತಿ' ಪ್ರದಾನ ಮಾಡುವರು. ಮೈಸೂರು ಕಂದಾಯ ವಿಭಾಗದ ಪ್ರಾದೇಶಿಕ ಹೆಚ್ಚುವರಿ ಆಯುಕ್ತ ಪಿ. ಶಿವರಾಜು ಸಮಾರೋಪ ಭಾಷಣ ಮಾಡುವರು.

ಮೈಸೂರು ತಾಲೂಕು ಪಂಚಾಯಿತಿ ಸಹಾಯಕ ನಿರ್ದೇಶಕ ಕೆ.ಎಂ. ರಘುನಾಥ್, ಕವಯಿತ್ರಿ ಮತ್ತು ರಂಗಕರ್ಮಿ ಡಾ.ಬಿ.ಎಸ್. ದಿನಮಣಿ, ಬೆಂಗಳೂರಿನ ಹೂವಿನಹೊಳೆ ಪ್ರತಿಷ್ಠಾನದ ಅಧ್ಯಕ್ಷ ನಂದಿ ಜೆ. ಹೂವಿನಹೊಳೆ, ಮಂಡ್ಯದ ಮಡಿಲು ಸೇವಾ ಟ್ರಸ್ಟಿನ ರಾಜ್ಯ ಸಂಯೋಜಕ ಅರಸು ಮಡಿಲು, ಕೋಲಾರ ರೋಟರಿ ಕ್ಲಬ್ ಅಧ್ಯಕ್ಷ ಬಿ. ಶಿವಕುಮಾರ್, ಸಾಹಿತಿ ಮತ್ತು ಸಂಘಟಕ ಎಸ್. ಶಿಶಿರಂಜನ್ 'ಯುವ ಚೇತನ ಪ್ರಶಸ್ತಿ' ಸ್ವೀಕರಿಸುವರು.

ಮುಖ್ಯ ಅತಿಥಿಗಳಾಗಿ ಸಮಾಜ ಸೇವಕಿ ಪುಷ್ಪಾ ಅಯ್ಯಂಗಾರ್, ಜೈನ ಸಾಹಿತಿ ಹೆಚ್.ಪಿ ಮೋಹನ್ ಕುಮಾರ್, ರಾಜ್ಯ ಸರ್ಕಾರಿ ನೌಕರರ ಸಂಘದ ಉಪಾಧ್ಯಕ್ಷ ಎಂ.ಎಲ್. ವಿಶ್ವನಾಥ್, ಕಾರ್ಯದರ್ಶಿ ರೇವಣ್ಣ, ಶ್ರೀರಂಗಪಟ್ಟಣ ತಾಲೂಕು ಅಧ್ಯಕ್ಷ ಸಿ.ಜೆ. ಶ್ರೀನಿವಾಸ್, ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಸಂಘಟನಾ ಕಾರ್ಯದರ್ಶಿ ಪಿ. ಶಾಂತರಾಜು ಪಾಲ್ಗೊಳ್ಳುವರು.

ಉತ್ಕರ್ಷ ಯೋಗ, ಮೇಧಾ ಯೋಗ ಶಿಬಿರ

ಮೈಸೂರು, ಏ.6– ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಶ್ರೀ ರವಿಶಂಕರ್ ಗುರೂಜಿಯವರ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯಲ್ಲಿ ಏ.10ರಿಂದ 15 ರವರೆಗೆ ಉತ್ಕರ್ಷ ಯೋಗ, ಮೇಧಾ ಯೋಗ ಶಿಬಿರ ಆಯೋಜಿಸಲಾಗಿದೆ. ಮೇಧಾ ಯೋಗ (13 ರಿಂದ 17 ವರ್ಷದ ವರಿಗೆ) ಮತ್ತು ಉತ್ಕರ್ಷ ಯೋಗ (8 ರಿಂದ 13 ವರ್ಷದವರಿಗೆ). ಶಿಬಿರವು ಸಂಜೆ 3 ರಿಂದ 5 ಗಂಟೆಯವರೆಗೆ ನಡೆಯಲಿದೆ. ಮಾಹಿತಿಗೆ ಮೊ. 9845963387, 9886009208 ಸಂಪರ್ಕಿಸಬಹುದು.

ಶಿವಮ್ಮ ನಿಧನ



ಮೈಸೂರು, ಏ.6–ಮೈಸೂರಿನ ಇಲವಾಲ ಗ್ರಾಮದ ನಿವಾಸಿ ಶಿವಮ್ಮ(97) ಗುರುವಾರ ನಿಧನರಾದರು. ಮೃತರು ಮೂವರು ಪುತ್ರರು ಹಾಗೂ ಮೂವರು ಪುತ್ರಿಯರು ಸೇರದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಇಲವಾಲದಲ್ಲಿರುವ ಅವರ ಫಾರಂ ಹೌಸ್‌ನ ಜಮೀನಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳಿಂದ ರೇಡಿಯೋ ನಿಯಂತ್ರಿತ ವಿಮಾನ ವಿನ್ಯಾಸ

ಅಂತರರಾಷ್ಟ್ರೀಯ ಮಟ್ಟದ ಸಾಧನೆ ಹೆಗ್ಗಳಿಕೆ

ಮೈಸೂರು, ಏ.6– ವಿದ್ಯಾವರ್ಧಕ ಕಾಲೇಜಿನ ಐವರು ಅಂತಿಮ ವರ್ಷದ ಮೆಕ್ಯಾನಿಕಲ್ ಎಂಜಿನಿಯ ರಿಂಗ್ ವಿದ್ಯಾರ್ಥಿಗಳಾದ ಶ್ರೀನಂದನ ವೈ ಶಾಸ್ತ್ರಿ, ವಿವೇಕ್ ಚಂದ್ರಶೇಖರ್, ಸಾತ್ವಿಕ್ ಜೈನ್, ಸುಪ್ರೀತ್ ಎಸ್, ಮತ್ತು ಸುಖಿ ದರ್ಶನ್, ಎಸ್‌ಎಇ ಇಂಟರ್‌ನ್ಯಾಷನಲ್ ಏರೋಡಿಸೈನ್ ಈಸ್ಟ್ 2023 ರಲ್ಲಿ ಭಾಗವಹಿಸಿ, ಅಂತರರಾಷ್ಟ್ರೀಯ ಮಟ್ಟದ ರೇಡಿಯೋ ನಿಯಂತ್ರಿತ (RC) ವಿಮಾನ ವಿನ್ಯಾಸ, ನಿರ್ಮಾಣ ಮತ್ತು ಹಾರಾಟ ಸ್ಪರ್ಧೆಯಲ್ಲಿ 7 ನೇ ಸ್ಥಾನ ಗಳಿಸಿದ್ದಾರೆ.

ಮಾರ್ಚ್ 2023 ರಲ್ಲಿ ಅಮೇರಿಕಾದ ಫ್ಲೋರಿಡಾದ ಲೇಕ್‌ಲ್ಯಾಂಡ್‌ನಲ್ಲಿ ಆಯೋಜಿಸಲಾಗಿದ್ದ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಈ ತಂಡವು ವಿಶ್ವ ದರ್ಜೆಯ ಜಾರ್ಜಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಯುಎಸ್‌ಎ, ರೊಕ್ಲಾ ಯೂನಿವರ್ಸಿಟಿ ಆಫ್ ಟೆಕ್ನಾಲಜಿ ಪೋಲೆಂಡ್, ವಾರ್ಸಾ ವಿಶ್ವವಿದ್ಯಾಲಯ ಪೋಲೆಂಡ್, ಚೀನಾದ ನಾಂಜಿಂಗ್ ಏರೋನಾಟಿಕ್ಸ್ ಮತ್ತು ಆಸ್ಟ್ರೋನಾಟಿ ವಿಶ್ವವಿದ್ಯಾಲಯ, ಫೆಡರಲ್ ಯೂನಿವರ್ಸಿಟಿ ಆಫ್ ಜುಯಿಜ್ ಡಿ ಫೊರಾ ಬ್ರೆಜಿಲ್ ಮತ್ತು ಫ್ಲೋರಿಡಾ ಇಂಟರ್ನ್ಯಾಷನಲ್ ಯೂನಿವರ್ಸಿಟಿ ಯುಎಸ್‌ಎ, ಮತ್ತು ಫೈನಲ್‌ಗೆ ಆಯ್ಕೆಯಾದ 11 ತಂಡಗಳಲ್ಲಿ ಒಟ್ಟಾರೆ 7 ನೇ ಸ್ಥಾನವನ್ನು ಪಡೆದುಕೊಂಡಿದೆ.



ಸ್ಪರ್ಧೆಗೆ 50ಕ್ಕೂ ಹೆಚ್ಚು ತಂಡಗಳು ಹೆಸರು ನೋಂದಾಯಿಸಿದ್ದವು. ಹೆಸರಾಂತ ವಾಯುಯಾನ ಕಂಪನಿಗಳಾದ ಲಾಕ್‌ಹೀಡ್ ಮಾರ್ಟಿನ್, ಬೋಯಿಂಗ್, ಸಾಲಿಡ್ ವರ್ಕ್ಸ್‌ನ ತಜ್ಞರು ಮತ್ತು ಪ್ರಮುಖ ಎಂಜಿನಿಯರ್‌ಗಳು ವಿದ್ಯಾರ್ಥಿಗಳ ನೈಪುಣ್ಯವನ್ನು ನಿರ್ಣಯಿಸಿದರು.

ಸ್ಪರ್ಧೆಯ ಸಮಯದಲ್ಲಿ ವಿಮಾನ ಹಾರುವ ಕಾರ್ಯಕ್ಷಮತೆ, ಪೇಲೋಡ್ ಸಾಗಿಸುವ ಸಾಮರ್ಥ್ಯ, ತಾಂತ್ರಿಕತೆಯನ್ನು ತಿಳಿಸುವಂತಹ ಮಾನದಂಡಗಳು ಮೌಖಿಕ ಪ್ರಸ್ತುತಿ ಮತ್ತು ವಿನ್ಯಾಸ ವರದಿ ತಯಾರಿಕೆಯ ಮೂಲಕ ಆರ್‌ಸಿ ವಿಮಾನವನ್ನು ನಿರ್ಮಿಸುವ ಅಂಶಗಳು ಇತ್ಯಾದಿಗಳನ್ನು ವಿವಿಧ ಆಧಾರದ ಮೇಲೆ ಮೌಲ್ಯಮಾಪನ ಮಾಡಿದರು.

ಕಾಲೇಜಿನ ಪ್ರಿನ್ಸಿಪಾಲ್ ಡಾ.ಬಿ.ಸದಾಶಿವೇಗೌಡ, ವಿಭಾಗದ ಡಾ. ಜಿ.ವಿ. ನವೀನ್ ಪ್ರಭು, ವಿದ್ಯಾವರ್ಧಕ ಸಂಘದ ಆಡಳಿತ ಸದಸ್ಯರು ಪ್ರೇರಣೆ ನೀಡಿದ ಅಧ್ಯಾಪಕ ಸಲಹೆಗಾರ ಡಾ. ಆರ್.ಶಿವಶಂಕರ ಅವರಿಗೆ ಕೃತಜ್ಞತೆ ಸಲ್ಲಿಸಿದರು.

ಆಯುರ್ವೇದ ಮಂಡಳಿಗೆ ಡಾ.ಲೇಖನ್ ಪಂಡಿತ್ ನೇಮಕ

ಮೈಸೂರು, ಏ. 6– ಭಾರತೀಯ ಪಾರಂಪರಿಕ ವೈದ್ಯಕೀಯ ಪದ್ಧತಿ ಆಯುರ್ವೇದ ಸೇವೆಗಳಲ್ಲಿ ತೊಡಗಿಸಿಕೊಂಡಿರುವ ಮೈಸೂರಿನ ಗುಂಡೂರಾವ್ ನಗರ ನಿವಾಸಿ ಹಾಗೂ ಜೆಎಸ್‌ಎಸ್ ಕಾಲೇಜಿನ ವೈದ್ಯಕೀಯ ವಿದ್ಯಾರ್ಥಿನಿ ಡಾಕ್ಟರ್ ಲೇಖನ ಪಂಡಿತ್ ಅವರು ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೈದ್ಯ ಮಂಡಳಿಯ ನಾಮನಿರ್ದೇಶಕ ಸದಸ್ಯರಾಗಿ ನೇಮಕಗೊಂಡಿದ್ದಾರೆ.



ಆಯುರ್ವೇದ ವೈದ್ಯಕೀಯ ಪದ್ಧತಿಯಡಿ ಆರೋಗ್ಯ ಕ್ಷೇತ್ರದಲ್ಲಿ ಸೇವೆ ನೀಡುತ್ತಿರುವ. ಡಾ. ಲೇಖನ ಪಂಡಿತ ಅವರ ಸೇವೆ ಮತ್ತು ಅನುಭವ ಪರಿಗಣಿಸಿ ಸರ್ಕಾರ ಅವರನ್ನು ಮಂಡಳಿಯ ನಾಮ ನಿರ್ದೇಶಕ ಸದಸ್ಯರಾಗಿ ನೇಮಕ ಮಾಡಿದೆ. ಈ ನೇಮಕಾತಿಯಿಂದ ಆಯುರ್ವೇದ ಕ್ಷೇತ್ರದಲ್ಲಿ ಇನ್ನಷ್ಟು ಸೇವೆ ಸಲ್ಲಿಸಲು ಅವಕಾಶ ಸಿಕ್ಕಂತಾಗಿದೆ ಎಂದು ಲೇಖನ್ ಪಂಡಿತ್ ಹರ್ಷ ವ್ಯಕ್ತಪಡಿಸಿದ್ದಾರೆ.

ಸಾಮಾನ್ಯ ಪ್ರವೇಶ ಪರೀಕ್ಷೆಯ ವಿಶೇಷ ಕಾರ್ಯಾಗಾರಕ್ಕೆ ಚಾಲನೆ



ಮೈಸೂರು, ಏ.6– ನಗರದ ಶಾರದಾ ವಿಲಾಸ ಪದವಿ ಪೂರ್ವ ಕಾಲೇಜಿನ ವತಿಯಿಂದ ಮೇ ತಿಂಗಳಲ್ಲಿ ನಡೆಯುವ ಸಿ.ಇ.ಟಿ. (ಸಾಮಾನ್ಯ ಪ್ರವೇಶ ಪರೀಕ್ಷೆ) ಯ ವಿಶೇಷ ಕಾರ್ಯಾಗಾರವನ್ನು ಉದ್ಘಾಟಿಸಲಾಯಿತು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿ ಜ್ಯೋತಿ ಬೆಳಗಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಸಂಸ್ಥೆಯ ಶೈಕ್ಷಣಿಕ ಸಲಹೆಗಾರರಾದ ಕ್ಯಾಪ್ಟನ್ ಎಸ್.ಆರ್.ಚಾರ್, ವಿದ್ಯಾರ್ಥಿಗಳಲ್ಲಿ ಶಿಸ್ತು ಮತ್ತು ಸಮಯ ಪರಿಪಾಲನೆ ಬಹಳ ಮುಖ್ಯ ಸಮಯವನ್ನು ವ್ಯರ್ಥ ಮಾಡದೇ, ಶಿಸ್ತಿನಿಂದ ಅಭ್ಯಾಸ ಮಾಡಿದರೆ ವಿದ್ಯಾರ್ಥಿಯು ಗುರಿ ಮುಟ್ಟಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಕಲಿಕಾ ಸಾಮಗ್ರಿಗಳ ಮೂಲಕ ಉಪನ್ಯಾಸಕರು ನೀಡುವ ಮಾರ್ಗದರ್ಶನದೊಂದಿಗೆ ವಿದ್ಯಾರ್ಥಿಗಳು ತರಬೇತಿಯನ್ನು ಹೊಂದುವಂತಹದ್ದಾಗಿದೆ. ಆದ್ದರಿಂದ ಸಿ.ಇ.ಟಿ. ಜಾಲತಾಣಗಳಲ್ಲಿ ವಿದ್ಯಾರ್ಥಿಗಳಿಗೆ ಅನೇಕ ಉಪಯುಕ್ತ ಮಾಹಿತಿಗಳಿವೆ. ಅದನ್ನು ಬಳಸಿಕೊಂಡು, ಪರೀಕ್ಷೆಯನ್ನು ಧೈರ್ಯದಿಂದ ಎದುರಿಸಬೇಕೆಂದು ಕಿವಿಮಾತು ಹೇಳಿದರು. ವೇದಿಕೆಯಲ್ಲಿ ಸಂಸ್ಥೆಯ ಗೌರವ ಕಾರ್ಯದರ್ಶಿ ಎನ್.ಚಂದ್ರಶೇಖರ್ ಮಾತನಾಡಿ, ಸಂಸ್ಥೆಯಲ್ಲಿ ದೊರಕುವ ಶಿಕ್ಷಣ ಸೌಲಭ್ಯ ಗಳನ್ನು ಬಳಸಿಕೊಂಡು ಅತ್ಯುನ್ನತ ಸ್ಥಾನದಲ್ಲಿ ತೇರ್ಗಡೆ ಹೊಂದಬೇಕೆಂದು ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಇಂಟಿಗ್ರೇಟೆಡ್ ವಿಭಾಗದ ಸಂಯೋಜಕರಾದ ಪ್ರವೀಣ್ ಕುಮಾರ್ ಹೆಚ್.ಎಂ., ಉಪನ್ಯಾಸಕರಾದ ರಶ್ಮಿ ಎಂ.ಕೆ., ಕಾವ್ಯಶ್ರೀ ಆರ್ ರಾವ್, ಮನೋಜ್ ಕುಮಾರ್,ಮಡಿಕೆಹುಂಡಿ, ಲೋಕೇಶ್, ನಾಗಶ್ರೀ, ಸಚಿನ್, ಶಿವಶಂಕರ್ ಡಿ. ಉಪಸ್ಥಿತರಿದ್ದರು. ವಿದ್ಯಾರ್ಥಿನಿ ಕೋಮಲ ಸ್ವಾಗತಿಸಿದರೆ, ಉಪನ್ಯಾಸಕಿ ರಶ್ಮಿ ಎಂ.ಕೆ. ಕಾರ್ಯಕ್ರಮ ನಿರೂಪಿಸಿದರು. ಕಾವ್ಯಶ್ರೀ ಆರ್.ರಾವ್ ಪ್ರಾರ್ಥಿಸಿದರೆ, ಹೆಚ್.ಎಂ. ಪ್ರವೀಣ್ ಕುಮಾರ್ ವಂದಿಸಿದರು.

ನೇಮಕ



ಮೈಸೂರು, ಏ. 6– ಮೈಸೂರು ನಗರ (ಜಿಲ್ಲಾ) ಕಾಂಗ್ರೆಸ್ ಪ್ರಚಾರ ಸಮಿತಿಯ ಪ್ರಧಾನ ಕಾರ್ಯದರ್ಶಿಯನ್ನಾಗಿ ರೆಹಮತ್ ಉಲ್ಲಾ ಅವರನ್ನು ನೇಮಕ ಮಾಡಲಾಗಿದೆ.

ಬಿಕಾಂ ಪರೀಕ್ಷೆಯಲ್ಲಿ ವಿದ್ಯಾವರ್ಧಕ ಪದವಿ ಕಾಲೇಜಿನ ವಿದ್ಯಾರ್ಥಿಗಳ ಸಾಧನೆ


ಶಾಲಿನಿ ಎಂ.


ಎಸ್.ಪಿ. ಗೌತಮ್

ಮೈಸೂರು, ಏ.6– ಮೈಸೂರು ವಿಶ್ವವಿದ್ಯಾನಿಲಯದಿಂದ ಕಳೆದ ಸೆಪ್ಟೆಂಬರ್– ಅಕ್ಟೋಬರ್ 2022ರಲ್ಲಿ ನಡೆದ ಬಿ.ಕಾಂ ಪದವಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಎಂ. ಶಾಲಿನಿ, ಚಿನ್ನದ ಪದಕ, ನಗದು ಬಹುಮಾನ ಮತ್ತು ಎಸ್.ಪಿ. ಗೌತಮ್ ನಗದು ಬಹುಮಾನ ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ 103ನೇ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳು ಪದವಿ ಪ್ರಮಾಣ ಪತ್ರದ ಜೊತೆಗೆ ಚಿನ್ನದ ಪದಕ ಹಾಗೂ ನಗದು ಬಹುಮಾನಗಳನ್ನು ಪಡೆಯಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸಕ್ಕರೆ ಕಾಯಿಲೆ ಉಚಿತ ಆಯುರ್ವೇದ ತಪಾಸಣಾ ಶಿಬಿರ

ಮೈಸೂರು, ಏ.6– ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯ ಶತಾಯು ಆಯುರ್ವೇದಿಕ್ ಕ್ಲಿನಿಕ್ ಮತ್ತು ಮೆಡಿಕಲ್‌ನಲ್ಲಿ ಏ. 8ರಂದು ಬೆಳಗ್ಗೆ 10ರಿಂದ 2.30ರವರೆವಿಗೆ ಸಕ್ಕರೆಕಾಯಿಲೆ ಮತ್ತು ಅದರ ಜಟಿಲತೆಗಳ ಬಗ್ಗೆ ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಆಸಕ್ತರು ತಮ್ಮ ಹೆಸರನ್ನು ಮುಂಚಿತವಾಗಿ ಮೊ. 9341913583 ನೋಂದಾಯಿಸಿಕೊಳ್ಳಬೇಕೆಂದು ಕೋರಲಾಗಿದೆ.

ಆಯ್ಕೆ



ಮೈಸೂರು, ಏ. 6– ಕರ್ನಾಟಕ ಪ್ರದೇಶ ಕಾಂಗ್ರೆಸ್ ಪ್ರಚಾರ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಲಕ್ಷ್ಮಿಪುರಂ ನಿವಾಸಿ ವಿನಯ್ ಕಣಗಾಲ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಪ್ರಚಾರ ಸಮಿತಿಯ ಅಧ್ಯಕ್ಷ ರಘುರಾಜ್ ಅರಸ್ ಆದೇಶ ಹೊರಡಿಸಿದ್ದಾರೆ.



ವಿಧಾನಸಭಾ ಚುನಾವಣೆ–2023





ಜಿದ್ದಾಜಿದ್ದಿ ಕಣವಾಗಿರುವ ಹನೂರಿನಲ್ಲಿ ಗೆದ್ದು ಬೀಗುವವರ್ಯಾರು...?

ನಿಮ್ಮ ಕ್ಷೇತ್ರ
ನಮ್ಮ ಮಾಹಿತಿ

■ ಎಸ್.ಬಿ.ದೇವರಾಜ

ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಶ್ರೀ ಮಲೆ ಮಹದೇಶ್ವರ ಬೆಟ್ಟವನ್ನು ಒಳಗೊಂಡ ಚಾಮರಾಜನಗರ ಜಿಲ್ಲೆಯ ಹನೂರು ವಿಧಾನಸಭಾ ಕ್ಷೇತ್ರ ಆರಂಭದಿಂದಲೂ ಜಿದ್ದಾಜಿದ್ದಿಯ ಕಣ. ಭಾಷಾವಾರು ಪ್ರಾಂತ್ಯಗಳ ರಚನೆ ಬಳಿಕವೂ ಪಾಳ್ಯಂ ಕ್ಷೇತ್ರ ಹೆಸರಿನಲ್ಲೇ 2 ಚುನಾವಣೆ ನಡೆಸಿ, 1967ರಲ್ಲಿ ಹನೂರು ವಿಧಾನಸಭಾ ಕ್ಷೇತ್ರವೆಂದು ಹೆಸರಿಸಲಾಯಿತು. ಎರಡು ಕುಟುಂಬಗಳ ರಾಜಕೀಯ ಹಣಾಹಣಿ, ಬಂಡಾಯದ ಬಿಸಿ ಸೇರಿದಂತೆ ಹಲವು ಸಂಗತಿಗಳಿಗೆ ಈ ಕ್ಷೇತ್ರ ಸಾಕ್ಷಿಯಾಗಿದೆ.

ಹನೂರು ವಿಧಾನಸಭಾ ಕ್ಷೇತ್ರವಾಗಿ ಹೆಸರಿಸಿದ ಬಳಿಕ 1957ರಲ್ಲಿ ನಡೆದ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿದ್ದ ಜಿ.ವೆಂಕಟೇಗೌಡರು, ಕಾಂಗ್ರೆಸ್ ಅಭ್ಯರ್ಥಿ ಎಸ್.ಸಿ.ವಿರೂಪಾಕ್ಷಯ್ಯ ಅವರನ್ನು ಮಣಿಸಿ ಶಾಸಕರಾದರು. 1962ರಲ್ಲೂ ಪಕ್ಷೇತರರಾಗಿ ಸ್ಪರ್ಧಿಸಿದ್ದ ಜಿ.ವೆಂಕಟೇಗೌಡರು ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಹೆಚ್.ನಾಗಪ್ಪ ಅವರನ್ನು ಕೇವಲ 67 ಮತಗಳಿಂದ ಸೋಲಿಸಿ ಮತ್ತೆ ಶಾಸಕರಾಗಿ ಆಯ್ಕೆಯಾದರು. ಈ ಚುನಾವಣೆ ಎರಡು ಕುಟುಂಬಗಳ ನಡುವೆ ಸಾಂಪ್ರದಾಯಿಕ ರಾಜಕೀಯ ಕದನ ಹುಟ್ಟುಹಾಕಿತು ಎಂಬುದು ಸ್ಥಳೀಯರ ಮಾತು.

1967ರಲ್ಲಿ ಕಾಂಗ್ರೆಸ್‌ನ ಹೆಚ್.ನಾಗಪ್ಪ, ಮೂರನೇ ಬಾರಿ ಪಕ್ಷೇತರರಾಗಿ ಕಣಕ್ಕಿಳಿದಿದ್ದ ಜಿ.ವೆಂಕಟೇಗೌಡ ಅವರನ್ನು ಸೋಲಿಸಿ, ಶಾಸಕರಾದರು. 1972ರ ಚುನಾವಣೆಯಲ್ಲಿ ಜಿ.ವೆಂಕಟೇಗೌಡರು ಸ್ಪರ್ಧಿಸಲಿಲ್ಲ. ಆ ಚುನಾವಣೆಯಲ್ಲಿ ಸಂಸ್ಥಾ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಹೆಚ್.ನಾಗಪ್ಪ ಅವರನ್ನು ಕಾಂಗ್ರೆಸ್ ಅಭ್ಯರ್ಥಿ ಆರ್.ರಾಚೇಗೌಡರು ಸೋಲಿಸಿದರು. ಜಿ.ವೆಂಕಟೇಗೌಡರ ಸಹೋದರ ಜಿ.ರಾಜುಗೌಡರು 1978ರ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ ಅಭ್ಯರ್ಥಿಯಾಗಿ ಅಖಾಡಕ್ಕಿಳಿದರು. ಆ ಚುನಾವಣೆಯಲ್ಲಿ ಜನತಾ ಪಕ್ಷದ ಅಭ್ಯರ್ಥಿಯಾಗಿದ್ದ ಹೆಚ್.ನಾಗಪ್ಪ ಅವರನ್ನು ಸೋಲಿಸಿ, ಶಾಸಕರಾದರು.

ಆದರೆ 1983ರಲ್ಲಿ ಕೆ.ಪಿ.ಶಾಂತಮೂರ್ತಿಗೆ ಕಾಂಗ್ರೆಸ್ ಟಿಕೆಟ್ ನೀಡಿದ್ದರಿಂದ ಅವರ ವಿರುದ್ಧ ಜಿ.ರಾಜುಗೌಡ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿದು ಪರಾಭವಗೊಂಡರು. ಆಗ ಮಾಜಿ ಶಾಸಕ ರಾಚೇಗೌಡರೂ ಜನತಾ ಪಕ್ಷದಿಂದ ಸ್ಪರ್ಧಿಸಿ ಸೋತರು. 1985ರಲ್ಲೂ ಜಿ.ರಾಜುಗೌಡರಿಗೆ ಕಾಂಗ್ರೆಸ್ ಟಿಕೆಟ್ ಸಿಗಲಿಲ್ಲ. ಈ ಹಿನ್ನೆಲೆಯಲ್ಲಿ ಜಿ.ರಾಜುಗೌಡರು ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ 2ನೇ ಬಾರಿ ಶಾಸಕರಾಗಿ ಆಯ್ಕೆಯಾದರು. ಆ ಚುನಾವಣೆಯಲ್ಲಿ ಕಾಂಗ್ರೆಸ್‌ನ ಚಿಕ್ಕಮರೀಗೌಡ ಹಾಗೂ ಜನತಾ ಪಕ್ಷದ ಹೆಚ್.ನಾಗಪ್ಪ ಸೋತರು. 1989ರ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ ಜಿ.ರಾಜುಗೌಡ ಹಾಗೂ ಜನತಾದಳದ ಹೆಚ್.ನಾಗಪ್ಪ ನಡುವೆ ತೀವ್ರ ಹಣಾಹಣಿ ನಡೆದು, ಅಂತಿಮವಾಗಿ ರಾಜುಗೌಡ ಗೆಲುವು ದಾಖಲಿಸಿದರು. 1994ರಲ್ಲಿ ಮತ್ತೆ ಕಾಂಗ್ರೆಸ್‌ನ ಜಿ.ರಾಜೂಗೌಡ ಹಾಗೂ ಜನತಾದಳದ ಹೆಚ್.ನಾಗಪ್ಪ ನಡುವೆ ನಡೆದ ಜಿದ್ದಾಜಿದ್ದಿ ಹೋರಾಟದಲ್ಲಿ ನಾಗಪ್ಪ ಗೆಲುವು ಪಡೆದರು. ಆ ವೇಳೆ ಅವರಿಗೆ ಜೆ.ಹೆಚ್.ಪಟೇಲರ ಸಂಪುಟದಲ್ಲಿ ಸಚಿವರಾಗುವ ಅವಕಾಶವೂ ಸಿಕ್ಕಿತು. 1999ರಲ್ಲಿ ಮತ್ತೆ ಕಾಂಗ್ರೆಸ್‌ನ ಜಿ.ರಾಜೂಗೌಡ ಹಾಗೂ ಜೆಡಿಯು ಅಭ್ಯರ್ಥಿಯಾಗಿದ್ದ ಹೆಚ್.ನಾಗಪ್ಪ ನಡುವೆ ಭಾರೀ ಪೈಪೋಟಿ ಏರ್ಪಟ್ಟಿತ್ತು. ಆ ಚುನಾವಣೆಯಲ್ಲೂ ರಾಜುಗೌಡರು ಗೆದ್ದು ನಾಲ್ಕನೇ ಬಾರಿ ಶಾಸಕರಾಗಿ, ಎಸ್.ಎಂ.ಕೃಷ್ಣ ಸಂಪುಟದಲ್ಲಿ ಸಚಿವರಾದರು.

ವರ್ಷ	ಗೆದ್ದವರು	ಪಕ್ಷ	ಪಡೆದ ಮತ
1957	ಜಿ.ವೆಂಕಟೇಗೌಡ	ಪಕ್ಷೇತರ	....
1962	ಜಿ.ವೆಂಕಟೇಗೌಡ	ಪಕ್ಷೇತರ	....
1967	ಹೆಚ್.ನಾಗಪ್ಪ	ಕಾಂಗ್ರೆಸ್	22,939
1972	ಆರ್.ರಾಚೇಗೌಡ	ಕಾಂಗ್ರೆಸ್	25,887
1978	ಜಿ.ರಾಜುಗೌಡ	ಕಾಂಗ್ರೆಸ್	37,530
1983	ಕೆ.ಪಿ.ಶಾಂತಮೂರ್ತಿ	ಕಾಂಗ್ರೆಸ್	31,357
1985	ಜಿ.ರಾಜುಗೌಡ	ಪಕ್ಷೇತರ	36,975
1989	ಜಿ.ರಾಜುಗೌಡ	ಕಾಂಗ್ರೆಸ್	50,008
1994	ಹೆಚ್.ನಾಗಪ್ಪ	ಜ.ದಳ	65,851
1999	ಜಿ.ರಾಜುಗೌಡ	ಕಾಂಗ್ರೆಸ್	62,314
2004	ಪರಿಮಳಾ ನಾಗಪ್ಪ	ಜೆಡಿಎಸ್	61,626
2008	ಆರ್.ನರೇಂದ್ರ	ಕಾಂಗ್ರೆಸ್	59,523
2013	ಆರ್.ನರೇಂದ್ರ	ಕಾಂಗ್ರೆಸ್	55,684
2018	ಆರ್.ನರೇಂದ್ರ	ಕಾಂಗ್ರೆಸ್	60,444



ಈ ಬಾರಿಯೂ ತೀವ್ರ ಪೈಪೋಟಿ ಸಾಧ್ಯತೆ

ಕಳೆದ ಚುನಾವಣೆ(2018)ಯಲ್ಲಿ 60,444 ಮತಗಳೊಂದಿಗೆ ಎದುರಾಳಿ ಬಿಜೆಪಿಯ ಡಾ.ಪ್ರೀತನ್ ನಾಗಪ್ಪ (56,931) ವಿರುದ್ಧ 3,513 ಮತಗಳ ಅಂತರದಲ್ಲಿ ಗೆಲ್ಲುವ ಮೂಲಕ ಹ್ಯಾಟ್ರಿಕ್ ಸಾಧನೆ ಮಾಡಿದ್ದ ಆರ್.ನರೇಂದ್ರ, ಈ ಬಾರಿಯೂ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ. ಕಳೆದ ಚುನಾವಣೆಯಲ್ಲಿ ಪರಾಭವಗೊಂಡಿದ್ದ ಎಂ.ಆರ್.ಮಂಜುನಾಥ್ ಅವರಿಗೆ ಜೆಡಿಎಸ್ ಟಿಕೆಟ್ ಘೋಷಿಸಿದೆ. ಇವರಿಬ್ಬರೂ ಕ್ಷೇತ್ರದಲ್ಲಿ ಪ್ರಚಾರ ನಡೆಸುತ್ತಿದ್ದಾರೆ. ಆದರೆ ಬಿಜೆಪಿ ಅಭ್ಯರ್ಥಿ ಘೋಷಣೆ ಬಾಕಿ ಇದೆ. ಕಳೆದ ಬಾರಿ ಕಡಿಮೆ ಅಂತರದಲ್ಲಿ ಸೋತಿದ್ದ ಡಾ.ಪ್ರೀತನ್ ನಾಗಪ್ಪ, ಬಿಜೆಪಿ ಜಿಲ್ಲಾ ಘಟಕದ ಉಪಾಧ್ಯಕ್ಷ ಡಾ.ದತ್ತೇಶ್ ಕುಮಾರ್, ಜನಧ್ವನಿ ಟ್ರಸ್ಟ್‌ನ ಬಿ.ವೆಂಕಟೇಶ್ ಮತ್ತು ಯುವ ಮುಖಂಡ ನಿಶಾಂತ್ ಮತ್ತಿತರರು ಬಿಜೆಪಿ ಟಿಕೆಟ್‌ಗೆ ಪೈಪೋಟಿ ನಡೆಸಿದ್ದಾರೆ. ಅಂತಿಮವಾಗಿ ಬಿಜೆಪಿ ಅಭ್ಯರ್ಥಿಯನ್ನು ಘೋಷಿಸಿದ ಬಳಿಕ ಚುನಾವಣಾ ಕಣ ಮತ್ತಷ್ಟು ರಂಗೇರಲಿದೆ.

ಈಗಿನ ಮತದಾರರ ವಿವರ	
ಪುರುಷರು	1,08,672
ಮಹಿಳೆಯರು	1,05,909
ಇತರೆ	16
ಒಟ್ಟು	2,14,597

2018ರಲ್ಲಿ ಶೇ.81.61ರಷ್ಟು ಮತದಾನವಾಗಿತ್ತು.

ನಾಯಕದ್ವಯರ ನಿಧನ: ಕ್ಷೇತ್ರದಲ್ಲಿ ಪರಸ್ಪರ ಪೈಪೋಟಿ ರಾಜಕೀಯ ಮಾಡಿಕೊಂಡು ಬಂದಿದ್ದ ಈ ಇಬ್ಬರು ನಾಯಕರೂ ಬದುಕಿನ ಪಯಣ ಮುಗಿಸಿದರು. 2002ರ ಆಗಸ್ಟ್‌ನಲ್ಲಿ ಕಾಡುಗಳ್ಳ ವೀರಪ್ಪನ್ ಅಪಹರಿಸಿದ್ದ ಹೆಚ್.ನಾಗಪ್ಪ ಅವರು ಮೂರ್‍ನಾಲ್ಕು ತಿಂಗಳ ಬಳಿಕ ಅರಣ್ಯ ಪ್ರದೇಶದಲ್ಲಿ ಅನುಮಾನಾಸ್ಪದವಾಗಿ ಸಾವನ್ನಪ್ಪಿದರು. ಬಳಿಕ ಅನಾರೋಗ್ಯದಿಂದ ರಾಜುಗೌಡರೂ ನಿಧನರಾದರು.

ಮುಂದುವರೆದ ಹಣಾಹಣಿ: ಇವರಿಬ್ಬರ ನಿಧನದ ನಂತರವೂ ಹಣಾಹಣಿ ಮುಂದುವರೆಯಿತು. 2004ರ ಚುನಾವಣೆಯಲ್ಲಿ ಹೆಚ್.ನಾಗಪ್ಪ ಅವರ ಪತ್ನಿ ಪರಿಮಳಾ ಅವರು ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದರೆ ರಾಜುಗೌಡರ ಪುತ್ರ ಆರ್.ನರೇಂದ್ರ ಕಾಂಗ್ರೆಸ್‌ನಿಂದ ಕಣಕ್ಕಿಳಿದರು. ಆ ಚುನಾವಣೆಯಲ್ಲಿ ಪರಿಮಳಾ ನಾಗಪ್ಪ ಗೆಲುವು ಸಾಧಿಸಿ, ಶಾಸಕರಾದರು. ಬಳಿಕ ಜೆಡಿಎಸ್ ತೊರೆದ ಪರಿಮಳಾ ಅವರು, 2008ರ ಚುನಾವಣೆಯಲ್ಲಿ ಬಿಎಸ್ಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದರು. ಆ ವೇಳೆ ಕಾಂಗ್ರೆಸ್‌ನ ಆರ್.ನರೇಂದ್ರ ಗೆದ್ದು, ಮೊದಲ ಬಾರಿ ಶಾಸಕರಾದರು. 2013ರಲ್ಲಿ ಪರಿಮಳಾ ಅವರು ಮತ್ತೆ ಜೆಡಿಎಸ್‌ನಿಂದ ಸ್ಪರ್ಧಿಸಿದರಾದರೂ ಆಗಲೂ ಕಾಂಗ್ರೆಸ್‌ನ ಆರ್.ನರೇಂದ್ರ ಗೆದ್ದರು. ನಂತರದಲ್ಲಿ ಬಿಜೆಪಿ ಸೇರಿದ ಪರಿಮಳಾ ನಾಗಪ್ಪ, 2018ರ ಚುನಾವಣೆಯಲ್ಲಿ ತಮ್ಮ ಪುತ್ರ ಡಾ.ಪ್ರೀತನ್‌ಗೆ ಟಿಕೆಟ್ ಕೊಡಿಸಿದ್ದರು. ಆದರೆ ಕಾಂಗ್ರೆಸ್ ಅಭ್ಯರ್ಥಿ ಆರ್.ನರೇಂದ್ರ ಹ್ಯಾಟ್ರಿಕ್ ಗೆಲುವು ದಾಖಲಿಸುವಲ್ಲಿ ಯಶಸ್ವಿಯಾದರು.

ಗಮನಾರ್ಹ ಅಂಶಗಳು: ಕೊಳ್ಳೇಗಾಲ ತಾಲೂಕು ಪ್ರದೇಶ ಮದ್ರಾಸ್ ಪ್ರಾಂತ್ಯದಲ್ಲಿದ್ದ ಕಾರಣ 1952ರ ಮೊದಲ ಸಾರ್ವತ್ರಿಕ ಚುನಾವಣೆ ವೇಳೆ ಕೊಳ್ಳೇಗಾಲ ಹಾಗೂ ಹನೂರು ಕ್ಷೇತ್ರಗಳಿರಲಿಲ್ಲ. ಆಗ ಕೊಳ್ಳೇಗಾಲ ಕೊಯಮತ್ತೂರು ಜಿಲ್ಲೆಯ ಪಾಳ್ಯಂ ಕ್ಷೇತ್ರ ವ್ಯಾಪ್ತಿಯಲ್ಲಿತ್ತು. ಮೊದಲ ಚುನಾವಣೆಯಲ್ಲಿ ಪಾಳ್ಯಂ ಕ್ಷೇತ್ರದಿಂದ ಕಾಂಗ್ರೆಸ್‌ನ ಎಸ್.ಸಿ.ವಿರೂಪಾಕ್ಷಯ್ಯ ಗೆದ್ದು ಶಾಸಕರಾಗಿದ್ದರು. ಆದರೆ 1957ರಲ್ಲಿ ಪಕ್ಷೇತರ ಜಿ.ವೆಂಕಟೇಗೌಡರ ವಿರುದ್ಧ ಸೋತರು. 1962ರಲ್ಲಿ ಪಾಳ್ಯಂ ಬದಲಿಸಿ ಹನೂರು ಕ್ಷೇತ್ರವೆಂದು ಹೆಸರಿಸಲಾಯಿತು. ಜಿ.ವೆಂಕಟೇಗೌಡರು 2 ಬಾರಿ, ಅವರ ಸಹೋದರ ಜಿ.ರಾಜುಗೌಡ 4 ಬಾರಿ, ರಾಜುಗೌಡ ಪುತ್ರ ಆರ್.ನರೇಂದ್ರ 3 ಬಾರಿ ಶಾಸಕರಾಗಿದ್ದಾರೆ. ಹಾಗೆಯೇ ಹೆಚ್.ನಾಗಪ್ಪ 2 ಬಾರಿ, ಅವರ ಪತ್ನಿ ಪರಿಮಳಾ ನಾಗಪ್ಪ ಒಂದು ಬಾರಿ ಗೆಲುವು ಸಾಧಿಸಿದ್ದು, ಇವರ ಪುತ್ರ ಡಾ.ಪ್ರೀತನ್ ಕಳೆದ ಬಾರಿ ಸ್ಪರ್ಧಿಸಿ ಪರಾಜಿತರಾದರು. ಹೆಚ್.ನಾಗಪ್ಪ ಹಾಗೂ ಜಿ.ರಾಜೂಗೌಡ ಇಬ್ಬರೂ ಸಚಿವರಾಗಿ ಇಲಾಖೆ ಜವಾಬ್ದಾರಿ ಜೊತೆಗೆ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರಾಗಿಯೂ ಕೆಲಸ ಮಾಡಿದ್ದರು.

ಅರ್ಜಿ ಹಾಕದೆಯೇ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿಕೊಂಡ ಸಿದ್ದೇಗೌಡ!

ಮೈಸೂರು, ಏ.6(ಎಂಕೆ)– ರಾಜ್ಯ ವಿಧಾನಸಭೆ ಚುನಾವಣೆ ಹಿನ್ನೆಲೆ ಕಾಂಗ್ರೆಸ್ ಅಭ್ಯರ್ಥಿಗಳ 2ನೇ ಪಟ್ಟಿ ಬಿಡುಗಡೆಯಾಗಿದ್ದು, ಚಾಮುಂಡೇಶ್ವರಿ ಕ್ಷೇತ್ರದಿಂದ ಮೈಮುಲ್ ಮಾಜಿ ಅಧ್ಯಕ್ಷ ಸಿದ್ದೇಗೌಡ ಅವರಿಗೆ ಟಿಕೆಟ್ ದಕ್ಕಿರುವುದು ಅಚ್ಚರಿಯನ್ನುಂಟು ಮಾಡಿದೆ.

ಚಾಮುಂಡೇಶ್ವರಿ ಕ್ಷೇತ್ರದ ಟಿಕೆಟ್‌ಗಾಗಿ ಕೆಪಿಸಿಸಿ ಸದಸ್ಯ ಕೆ.ಮರಿಗೌಡ, ಜಿಪಂ ಮಾಜಿ ಸದಸ್ಯ ರಾಕೇಶ್ ಪಾಪಣ್ಣ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಬಿ.ಜೆ.ವಿಜಯ್‌ಕುಮಾರ್ ಇನ್ನಿತರರು ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿದ್ದರು. ಆದರೆ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸದ ಸಿದ್ದೇಗೌಡ ಅವರಿಗೆ ಟಿಕೆಟ್ ನೀಡಿರುವುದು ಕುತೂಹಲ ಉಂಟುಮಾಡಿದೆ.

ಬೀರಿಹುಂಡಿ ಬಸವಣ್ಣ, ಯರಗನಹಳ್ಳಿ ಮಾದೇಗೌಡ, ಕೆಂಪನಾಯ್ಕ ಅವರೊಂದಿಗೆ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿದ್ದ ಸಿದ್ದೇಗೌಡ, ಪಕ್ಷಕ್ಕೆ ಸೇರ್ಪಡೆಯಾಗುವ ವೇಳೆಗೆ ಕಾಂಗ್ರೆಸ್‌ನಲ್ಲಿ ಅರ್ಜಿ ಸ್ವೀಕರಿಸುವ ಸಮಯವೇ ಮುಗಿದು ಹೋಗಿತ್ತು. ಆದರೆ, ಪಕ್ಷ ಸೇರ್ಪಡೆಯ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ, ಈಗಾಗಲೇ ಅರ್ಜಿ ಸಲ್ಲಿಸಿರುವವರೊಂದಿಗೆ ಈಚೆಗೆ ಪಕ್ಷ ಸೇರಿದವರೂ ಟಿಕೆಟ್ ಆಕಾಂಕ್ಷಿಗಳಾಗಬಹುದು ಎಂದು ಹೇಳಿಕೆ ನೀಡಿದ್ದರು. ಅದರಂತೆ ಚಾಮುಂಡೇಶ್ವರಿ ಕ್ಷೇತ್ರದಿಂದ ಯಾರಿಗೆ ಟಿಕೆಟ್ ನೀಡಿದರೂ ಬೆಂಬಲಿಸಲಾಗುವುದು. ನಾನು ಕೂಡ ಆಕಾಂಕ್ಷಿಯಾಗಿದ್ದು, ಟಿಕೆಟ್ ನೀಡಿದರೆ ಸ್ಪರ್ಧಿಸುತ್ತೇನೆ ಎಂದು ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಸಭೆಯೊಂದರಲ್ಲಿ ಸಿದ್ದೇಗೌಡ ಹೇಳಿಕೊಂಡಿದ್ದರು.

1983 ರಿಂದಲೂ ಸಿದ್ದರಾಮಯ್ಯ ಅವರೊಂದಿಗಿದ್ದೇನೆ...

1983ರಿಂದಲೂ ಸಿದ್ದರಾಮಯ್ಯ ಅವರೊಂದಿಗಿದ್ದೇನೆ. 2008ರಲ್ಲೇ ಟಿಕೆಟ್ ಆಕಾಂಕ್ಷಿಯಾಗಿದ್ದೆ ಎಂದು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಿದ್ದೇಗೌಡ ಹೇಳಿದ್ದಾರೆ. ಚಾಮುಂಡೇಶ್ವರಿ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್ ದೊರೆತ ಬಳಿಕ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅವರು, ಮೊದಲಿಗೆ ಚುನಾವಣೆಗೆ ಸ್ಪರ್ಧಿಸಲು ಅವಕಾಶ ನೀಡಿದ ಕಾಂಗ್ರೆಸ್ ಪಕ್ಷದ ವರಿಷ್ಠರಿಗೆ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಎಲ್ಲಾ ಕಾಂಗ್ರೆಸ್ ನಾಯಕರು, ಪದಾಧಿಕಾರಿಗಳು, ಕಾರ್ಯಕರ್ತರಿಗೆ ಧನ್ಯವಾದ ತಿಳಿಸುತ್ತೇನೆ. 1983ರಿಂದಲೂ ಸಿದ್ದರಾಮಯ್ಯ ಅವರೊಂದಿಗಿದ್ದೇನೆ. 2006ರ ಉಪ ಚುನಾವಣೆ ಮತ್ತು 2008ರ ಚುನಾವಣೆಯಲ್ಲೂ ಕಾಂಗ್ರೆಸ್ ಬೆಂಬಲಿಸಿದ್ದೇನೆ. ಆದರೆ, 2013ರಲ್ಲಿ ಜಿ.ಟಿ.ದೇವೇಗೌಡರ ಆಹ್ವಾನದ ಮೇರೆಗೆ ಜೆಡಿಎಸ್ ಸೇರಿ ಎರಡು ವಿಧಾನಸಭಾ ಚುನಾವಣೆಗಳಲ್ಲಿ ಅವರನ್ನು ಬೆಂಬಲಿಸಲಾಯಿತು. ಆದರೀಗ ಮತ್ತೆ ಕಾಂಗ್ರೆಸ್ ಸೇರುವುದರ ಜೊತೆಗೆ ಟಿಕೆಟ್ ಆಕಾಂಕ್ಷಿಯೂ ಆಗಿದ್ದೆ. ಕೊನೆಗೂ ಕಾಂಗ್ರೆಸ್‌ನಿಂದ ಟಿಕೆಟ್ ನೀಡಿರುವುದು ಖುಷಿ ತಂದಿದ್ದು, ಎಲ್ಲಾ ಚುನಾವಣಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಅಲ್ಲದೆ ಕ್ಷೇತ್ರದಲ್ಲಿ ಟಿಕೆಟ್ ಆಕಾಂಕ್ಷಿಗಳಾಗಿದ್ದ ಎಲ್ಲರ ಬೆಂಬಲವೂ ಇದೆ ಎಂದರು.



ಕಾಂಗ್ರೆಸ್ ಲೆಕ್ಕಾಚಾರ: ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಒಕ್ಕಲಿಗರ ಪ್ರಾಬಲ್ಯವಿರುವುದರಿಂದಾಗಿ ಜೆಡಿಎಸ್‌ನ ಜಿ.ಟಿ.ದೇವೇಗೌಡ ಅವರ ಪ್ರತಿಸ್ಪರ್ಧಿಯಾಗಿ ಒಕ್ಕಲಿಗ ಸಮುದಾಯದ ಅಭ್ಯರ್ಥಿಯನ್ನೇ ಕಣಕ್ಕಿಳಿಸಬೇಕು ಎಂಬ ಲೆಕ್ಕಾಚಾರದೊಂದಿಗೆ ಸಿದ್ದೇಗೌಡ ಅವರಿಗೆ ಟಿಕೆಟ್ ನೀಡಲಾಗಿದೆ ಎನ್ನಲಾಗುತ್ತಿದೆ.

ಅಂತಿಮವಾಗದ ಕೃಷ್ಣರಾಜ, ಚಾಮರಾಜ ಅಭ್ಯರ್ಥಿ ಆಯ್ಕೆ: ಬ್ರಾಹ್ಮಣ ಸಮುದಾಯದ ಪ್ರಾಬಲ್ಯವಿರುವ ಕೃಷ್ಣರಾಜ ಹಾಗೂ ಒಕ್ಕಲಿಗರ ಪ್ರಾಬಲ್ಯವುಳ್ಳ ಚಾಮರಾಜ ವಿಧಾನಸಭಾ ಕ್ಷೇತ್ರಗಳಿಗೆ ಇನ್ನೂ ಅಭ್ಯರ್ಥಿಗಳನ್ನು ಅಂತಿಮಗೊಳಿಸಿಲ್ಲ. ಕೃಷ್ಣರಾಜ ಕ್ಷೇತ್ರದಿಂದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ನಗರಪಾಲಿಕೆ ಮಾಜಿ ಸದಸ್ಯ ಎಂ.ಪ್ರದೀಪ್‌ಕುಮಾರ್ ಮತ್ತು ಮುಖಂಡ ಎನ್.ಎಂ.ನವೀನ್ ಕುಮಾರ್ ಆಕಾಂಕ್ಷಿಗಳಾಗಿದ್ದಾರೆ. ಅದರಂತೆ ಚಾಮರಾಜ ಕ್ಷೇತ್ರದಲ್ಲಿ ಮಾಜಿ ಶಾಸಕ ವಾಸು ಮತ್ತು ಮುಖಂಡ ಕೆ.ಹರೀಶ್‌ಗೌಡ ನಡುವೆ ಪೈಪೋಟಿ ನಡೆಯುತ್ತಿದ್ದು, ಆಯ್ಕೆ ಅಂತಿಮವಾಗಿಲ್ಲ:

ಕ್ರಿಶ್ಚಿಯನ್ನರ ಕುರಿತು ದ್ವೇಷಪೂರಿತ ಭಾಷಣ: ಸಚಿವ ಮುನಿರತ್ನ ವಿರುದ್ಧ ಪ್ರಕರಣ ದಾಖಲು

ಬೆಂಗಳೂರು, ಏ.6– ಕ್ರಿಶ್ಚಿಯನ್ನರ ಕುರಿತು ದ್ವೇಷಪೂರಿತ ಭಾಷಣ ಮಾಡಿದ ಆರೋಪದ ಮೇಲೆ ತೋಟಗಾರಿಕೆ ಸಚಿವ ವಿ. ಮುನಿರತ್ನ ವಿರುದ್ಧ ಪ್ರಕರಣ ದಾಖಲಾಗಿದೆ.



ಈ ಸಂಬಂಧ ಗೆಜೆಟೆಡ್ ಅಧಿಕಾರಿಯೊಬ್ಬರು ನೀಡಿದ ದೂರಿನ ಆಧಾರದ ಮೇಲೆ ಸಚಿವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಅವರ ಜನರು ನಡುವೆ ದ್ವೇಷವನ್ನು ಪ್ರಚೋದಿಸುವ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಲಾಗಿದೆ. ಮಾರ್ಚ್ 31 ರಂದು ಖಾಸಗಿ ವಾಹಿನಿಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಕ್ರೈಸ್ತರು ಈ ಕ್ಷಣದಲ್ಲಿಯೂ ಜನರನ್ನು ಮತಾಂತರ ಮಾಡುತ್ತಿದ್ದಾರೆ ಎಂದು ಹೇಳಿಕೆ ನೀಡಿದ್ದರು. ಕೊಳೆಗೇರಿಗಳಲ್ಲಿ ಮತಾಂತರ ಗರಿಷ್ಠವಾಗಿದೆ. 1,400 ಜನರಿರುವ ಇಂತಹ ಸ್ಥಳಗಳಲ್ಲಿ 400 ಮಂದಿ ಮತಾಂತರಗೊಂಡಿದ್ದಾರೆ. ಕ್ರಿಶ್ಚಿಯನ್ನರು ಮತಾಂತರ ಮಾಡಲು ಬಂದರೆ ಅವರನ್ನು ಹೊರಹಾಕಿ ಇಲ್ಲವೇ ಪೊಲೀಸ್ ಠಾಣೆಯಲ್ಲಿ ದೂರು ನೀಡಿ ಎಂದು ಮುನಿರತ್ನ ಹೇಳಿದ್ದರು.

ಈ ಸಂಬಂಧ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 117 (ಅಪರಾಧಕ್ಕೆ ಪ್ರಚೋದನೆ), 153ಎ (ವಿವಿಧ ಗುಂಪುಗಳು ಅಥವಾ ಧರ್ಮಗಳ ನಡುವೆ ದ್ವೇಷವನ್ನು ಉತ್ತೇಜಿಸುವುದು) ಮತ್ತು ಜನತಾ ಪ್ರಾತಿನಿಧ್ಯ ಕಾಯ್ದೆ (ಚುನಾವಣೆಗೆ ಸಂಬಂಧಿಸಿದಂತೆ ವರ್ಗಗಳ ನಡುವೆ ದ್ವೇಷವನ್ನು ಉತ್ತೇಜಿಸುವುದು)ಅಡಿಯಲ್ಲಿ ರಾಜರಾಜೇಶ್ವರಿ ನಗರ ಪೊಲೀಸರು ಬಿಜೆಪಿ ಶಾಸಕನ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಸೆಲ್ಫಿ ವಿವಾದ: ಐಪಿಎಲ್ ನಡುವೆ ಪೃಥ್ವಿ ಶಾಗೆ ಸಂಕಷ್ಟ; ಕ್ರಿಕೆಟಿಗನ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಿದ ಸಪ್ನಾ ಗಿಲ್

ಮುಂಬೈ– ಸಾಮಾಜಿಕ ಮಾಧ್ಯಮದ ಪ್ರಭಾವಿ ಸಪ್ನಾ ಗಿಲ್ ಅವರು ಕ್ರಿಕೆಟಿಗ ಪೃಥ್ವಿ ಶಾ ಮತ್ತು ಅವರ ಸ್ನೇಹಿತ ಆಶಿಶ್ ಸುರೇಂದ್ರ ಯಾದವ್ ವಿರುದ್ಧ ಕ್ರಿಮಿನಲ್ ದೂರು ದಾಖಲಿಸಿದ್ದಾರೆ. ಸಪ್ನಾ ಗಿಲ್ ಐಪಿಸಿಯ ಸೆಕ್ಷನ್ 354, 509, 324 ರ ಅಡಿಯಲ್ಲಿ ಎಫ್‌ಐಆರ್ ದಾಖಲಿಸಿದ್ದಾರೆ. ಸಪ್ನಾ ಗಿಲ್ ಪೃಥ್ವಿ ಶಾ ಮತ್ತು ಆಶೀಶ್ ಯಾದವ್ ವಿರುದ್ಧ ಅಂಧೇರಿಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಲೈಂಗಿಕ ದೌರ್ಜನ್ಯದ ಕೇಸು ದಾಖಲಿಸಿದ್ದಾರೆ. ಸದ್ಯ ಪ್ರಕರಣ ದಾಖಲಿಸಿಕೊಂಡಿರುವ ಕೋರ್ಟ್, ವಿಚಾರಣೆ ನಡೆಸುವುದಾಗಿ ತಿಳಿಸಿದೆ.

ಕಿರುಕುಳ ಮತ್ತು ಬ್ಯಾಟ್‌ನಿಂದ ಹೊಡೆಯುವುದು ಸೇರಿದಂತೆ ಹಲವು ಪ್ರಕರಣಗಳಲ್ಲಿ ಪೃಥ್ವಿ ಶಾ ಮತ್ತು ಅವರ ಸ್ನೇಹಿತನ ವಿರುದ್ಧ ಸಪ್ನಾ ಗಿಲ್ ದೂರು ದಾಖಲಿಸಿದ್ದಾರೆ. ಅಷ್ಟೇ ಅಲ್ಲ, ಈ ಪ್ರಕರಣಗಳನ್ನು ದಾಖಲಿಸಿಕೊಳ್ಳುವಾಗ ಸಪ್ನಾ ಸರ್ಕಾರಿ ಆಸ್ಪತ್ರೆಯ ವೈದ್ಯಕೀಯ ಪ್ರಮಾಣಪತ್ರವನ್ನೂ ನೀಡಿದ್ದು, ಅದರಲ್ಲಿ ಲೈಂಗಿಕ ಶೋಷಣೆಯ ಬಗ್ಗೆ ನಮೂದಿಸಲಾಗಿದೆ.

ಇದಲ್ಲದೆ, ಸಾಮಾಜಿಕ ಮಾಧ್ಯಮದ ಪ್ರಭಾವಿ ಸಪ್ನಾ ಗಿಲ್ ಅವರು ಸತೀಶ್ ಕವಂಕರ್ ಮತ್ತು ಭಾಗವತ್ ಗರಾಂಡೆ ವಿರುದ್ಧ ಮತ್ತೊಂದು ದೂರು ದಾಖಲಿಸಿದ್ದಾರೆ. ಸತೀಶ ಕವಂಕರ್ ಮತ್ತು ಭಾಗವತ ಗರಾಂಡೆ ವಿಮಾನ ನಿಲ್ದಾಣ ಪೊಲೀಸ್ ಠಾಣೆಯ ಅಧಿಕಾರಿಗಳು. ಇಬ್ಬರೂ ತಮ್ಮ ಕರ್ತವ್ಯದ ಅವಧಿಯಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಿಲ್ಲ ಎಂದು ಸಪ್ನಾ ಆರೋಪಿಸಿದ್ದಾರೆ. ಇಬ್ಬರ ವಿರುದ್ಧವೂ ಐಪಿಸಿ ಸೆಕ್ಷನ್ 166ಎ ಅಡಿಯಲ್ಲಿ ಕ್ರಿಮಿನಲ್ ದೂರು ದಾಖಲಿಸಲಾಗಿದೆ.

ಪೃಥ್ವಿ ಶಾ ಸಂಕಷ್ಟ: ಕೆಲವು ವಾರಗಳ ಹಿಂದೆ ಭಾರತೀಯ ಕ್ರಿಕೆಟಿಗರಾದ ಪೃಥ್ವಿ ಶಾ ಮತ್ತು ಸಪ್ನಾ ಗಿಲ್ ಮುಂಬೈನ ಬೀದಿಗಳಲ್ಲಿ ಜಗಳವಾಡಿದ್ದ ವೀಡಿಯೊ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿತ್ತು. ಪೃಥ್ವಿ ಶಾ ಮತ್ತು ಆತನ ಸ್ನೇಹಿತ ತನಗೆ ಕಿರುಕುಳ ನೀಡಿರುವುದಾಗಿ ಎಬಿಪಿ ಜೊತೆಗಿನ ವಿಶೇಷ ಸಂಭಾಷಣೆಯ ವೇಳೆ ಸಪ್ನಾ ಹೇಳಿದ್ದಳು. ಈಗ ಈ ಎರಡೂ ಪ್ರಕರಣಗಳು ಏಪ್ರಿಲ್ 17 ರಂದು ನ್ಯಾಯಾಲಯದಲ್ಲಿ ವಿಚಾರಣೆಗೆ ಬರಲಿದ್ದು, ಇದರಲ್ಲಿ ಪೃಥ್ವಿ ಶಾ ಪರವಾಗಿ ಯಾವ ವಾದಗಳನ್ನು ನೀಡಲಾ ಗುತ್ತದೆ ಮತ್ತು ಪೃಥ್ವಿ ಶಾಗೆ ನ್ಯಾಯಾಲಯ ಏನು ಹೇಳುತ್ತದೆ ಎಂಬುದನ್ನು ನೋಡಬೇಕು.

ಮುಖ್ಯಮಂತ್ರಿ ಅವರು ಸೂಚಿಸಿದವರ ಪರ ಪ್ರಚಾರ; ನಟ ಸುದೀಪ್ ಚಲನ ಚಿತ್ರ, ಟಿವಿ ಶೋ ಸ್ಥಗಿತಕ್ಕೆ ಮನವಿ

ಬೆಂಗಳೂರು, ಏ.6(ಕೆಎಂಶಿ)– ನಟ ಸುದೀಪ್ ಸಿಎಂ ಬೊಮ್ಮಾಯಿ ಮತ್ತು ಬಿಜೆಪಿ ಪಕ್ಷದ ಕೆಲವು ಅಭ್ಯರ್ಥಿಗಳ ಪರ ಚುನಾವಣಾ ಪ್ರಚಾರ ನಡೆಸುತ್ತೇನೆ ಎಂದು ಘೋಷಣೆ ಮಾಡುತ್ತಿದ್ದಂತೆ ಅವರ ಚಲನಚಿತ್ರ ಹಾಗೂ ಟಿವಿ ಶೋಗಳನ್ನು ನಿಲ್ಲಿಸುವಂತೆ ವಕೀಲರೂ ಆದ ಸಾಮಾಜಿಕ ಹೋರಾಟಗಾರ ಕೆ.ಪಿ.ಶ್ರೀಪಾಲ್ ಅವರು ರಾಜ್ಯ ಚುನಾವಣಾ ಆಯೋಗಕ್ಕೆ ಮನವಿ ಮಾಡಿದ್ದಾರೆ. ಕನ್ನಡದ ಚಲನಚಿತ್ರ ನಟ ಕಿಚ್ಚ ಸುದೀಪ್ ಅವರು ಭಾರತೀಯ ಜನತಾ ಪಕ್ಷದ ಸ್ಟಾರ್ ಪ್ರಚಾರಕರಾಗಿರುವುದರಿಂದ ಚುನಾ ವಣೆ ಮುಗಿಯುವವರೆಗೂ ಅವರ ನಟನೆಯ ಯಾವುದೇ ಚಲನ ಚಿತ್ರಗಳು ಚಿತ್ರ ಮಂದಿರಗಳಲ್ಲಿ ಮತ್ತು ಟಿ.ವಿ.ಗಳಲ್ಲಿ ಪ್ರದರ್ಶನವಾಗದಂತೆ, ಅವರು ನಡೆಸಿಕೊಡುವ ಟಿ.ವಿ. ಶೋಗಳು ಪ್ರಸಾರ ವಾಗದಂತೆ ಮತ್ತು ಅವರು ನಟಿಸಿರುವ ಜಾಹೀ ರಾತುಗಳು ಸಹ ಪ್ರಸಾರವಾಗದಂತೆ ಚುನಾವಣಾ ಆಯೋಗ ಕಟ್ಟುನಿಟ್ಟಿನ ಕ್ರಮಜರುಗಿಸ ಬೇಕು ಎಂದು ವಕೀಲರಾದ ಶ್ರೀಪಾಲ್ ಮನವಿ ಮಾಡಿದ್ದಾರೆ. ಸುದೀಪ್ ಅವರು ಒಂದು ರಾಜ ಕೀಯ ಪಕ್ಷದ ವ್ಯಕ್ತಿ ಪರವಾಗಿ ಪ್ರಚಾರ ಮಾಡುತ್ತಿರುವುದನ್ನು, ಅವರೇ ಘೋಷಣೆ ಮಾಡಿದ್ದರಿಂದ ಅವರ ನಟನೆಯ ಚಲನ ಚಿತ್ರಗಳು, ಟಿ.ವಿ. ಶೋಗಳು ಹಾಗೂ ಜಾಹೀರಾತುಗಳು ಮತದಾರರ ಮೇಲೆ ಪ್ರಭಾವ ಬೀರುವುದರಿಂದ ಚುನಾವಣಾ ನೀತಿ ಸಂಹಿತೆಯ ಸ್ಪಷ್ಟ ಉಲ್ಲಂಘನೆ ಆಗಿರುತ್ತದೆ. ಆದ್ದರಿಂದ ತಕ್ಷಣದಿಂದ ಚುನಾವಣಾ ಆಯೋಗ ಈ ವಿಷಯಕ್ಕೆ ಸಂಬಂಧಿಸಿದಂತೆ ತುರ್ತು ಕ್ರಮ ಜರುಗಿಸಬೇಕೆಂದು, ಮನವಿ ಮಾಡಿದ್ದಾರೆ.



ಹೈಕೋರ್ಟ್‌ಗೆ ಎಎಪಿ ಅರ್ಜಿ

ಬೆಂಗಳೂರು, ಏ.6–ರಾಷ್ಟ್ರೀಯ ಪಕ್ಷದ ಮಾನ್ಯತೆ ಪಡೆಯುವಲ್ಲಿ ವಿಳಂಬವಾಗುತ್ತಿದೆ ಎಂದು ಆರೋಪಿಸಿ ಎಎಪಿ ಪಕ್ಷ ಕರ್ನಾಟಕ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಅಮೋಘ ಸಾಧನೆ ತೋರಿದ್ದ ಆಮ್ ಆದ್ಮಿ ಪಕ್ಷಕ್ಕೆ ರಾಷ್ಟ್ರೀಯ ಪಕ್ಷದ ಮಾನ್ಯತೆ ದೊರೆಯುವುದು ಖಾತರಿಯಾಗಿತ್ತು. ಆದರೆ, ಇಲ್ಲಿಯವರೆಗೂ ಮಾನ್ಯತೆ ನೀಡದಿರುವುದನ್ನು ಪ್ರಶ್ನಿಸಿ ಎಎಪಿ ಅರ್ಜಿ ಸಲ್ಲಿಸಿದೆ.

❝ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆಯ್ತು ಈಗ ಅವರ ಮಗನನ್ನು ಸೋಲಿಸಿಯೇ ತೀರುವುದಾಗಿ ಸವಾಲು ಹಾಕಿದ್ದ ಬಾಬುರಾವ್ ಚಿಂಚನಸೂರ್ ಅವರಿಗೆ ಗುರುಮಿಟ್ಕಲ್ ಕ್ಷೇತ್ರದಲ್ಲಿ ಟಿಕೆಟ್ ಘೋಷಣೆ ಮಾಡುವ ಮೂಲಕ ಕಾಂಗ್ರೆಸ್ ಅಚ್ಚರಿಯ ಹೆಜ್ಜೆಯನ್ನಿಟ್ಟಿದೆ. ಅಂದ ಹಾಗೆ ಚಿಂಚನಸೂರ್ ಇತ್ತೀಚೆಗಷ್ಟೇ ಬಿಜೆಪಿಯಿಂದ ಕಾಂಗ್ರೆಸ್‌ಗೆ ವಲಸೆ ಬಂದವರು. ಸೋಲಿಲ್ಲದ ಸರದಾರನಾಗಿದ್ದ ಮಲ್ಲಿಕಾರ್ಜುನ ಖರ್ಗೆ ಕಳೆದ ಲೋಕಸಭಾ ಚುನಾವಣೆಯಲ್ಲಿ ಪರಾಭವಗೊಂಡಾಗ ಇದೇ ಚಿಂಚನಸೂರ್ ಅವರು 'ಖರ್ಗೆ ಅವರನ್ನು ಸೋಲಿಸಿದ್ದಾಯಿತು. ಇನ್ನು ಅವರ ಮಗನನ್ನು ಸೋಲಿಸುವುದಷ್ಟೇ ಬಾಕಿ ಇದೆ' ಎಂದು ಹೇಳಿಕೆ ನೀಡಿದ್ದರು. ವಿಪರ್ಯಾಸವೆಂದರೆ ಖರ್ಗೆ ಅವರೇ ಎಐಸಿಸಿ ಅಧ್ಯಕ್ಷರಾಗಿರುವಾಗ ಇತ್ತೀಚೆಗೆ ಪಕ್ಷ ಸೇರಿದ ಚಿಂಚನಸೂರ್ ಅವರಿಗೆ ಮಣೆ ಹಾಕಲಾಗಿದೆ.



❝ ಕಡೂರು ಕ್ಷೇತ್ರದಲ್ಲಿ ಸಜ್ಜನ ರಾಜಕಾರಣಿ ಎಂದೇ ಹೆಸರು ಗಳಿಸಿರುವ ವೈ.ಎಸ್.ವಿ.ದತ್ತ ಅವರಿಗೆ ಕಾಂಗ್ರೆಸ್ ಟಿಕೆಟ್ ನಿರಾಕರಿಸಲಾಗಿದೆ. ಜೆಡಿಎಸ್‌ನಲ್ಲಿ ಸಂಪೂರ್ಣವಾಗಿ ಕಡೆಗಣಿಸಲ್ಪಟ್ಟಿದ್ದ ದತ್ತ ಅವರು ಕ್ಷೇತ್ರದಲ್ಲಿ ತಮ್ಮದೇ ಆದ ಪ್ರಭಾವ ಉಳಿಸಿಕೊಂಡಿದ್ದಾರೆ. ಅವರು ಜೆಡಿಎಸ್ ತೊರೆದು ಕಾಂಗ್ರೆಸ್ ಸೇರ್ಪಡೆಗೊಂಡಾಗ ಕಡೂರು ಕ್ಷೇತ್ರದ ಟಿಕೆಟ್ ಅವರಿಗೇ ನೀಡಲಾಗುತ್ತದೆ ಎಂಬ ಮಾತುಗಳು ಕ್ಷೇತ್ರಾದ್ಯಂತ ವ್ಯಾಪಕವಾಗಿ ಕೇಳಿಬರುತ್ತಿದ್ದವು. ಆದರೆ ದತ್ತ ಅವರ ಯಕಶ್ಚಿತ್ ಒಂದು ಆಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದ್ದಂತೆಯೇ ಅವರ ಕಾಂಗ್ರೆಸ್ ಟಿಕೆಟ್ ಗಿಟ್ಟಿಸುವ ಕನಸು ಭಗ್ನವಾಯಿತು ಎಂಬ ಮಾತುಗಳು ರಾಜಕೀಯ ವಲಯದಲ್ಲಿ ಕೇಳಿಬರುತ್ತಿದೆ.




ಮೈಸೂರಿನ ಮಹಾರಾಣಿ ಕಾಮರ್ಸ್ ಕಾಲೇಜಿನಲ್ಲಿ

ಮೈಸೂರು ಜಿಲ್ಲೆಯ ಎಲ್ಲಾ 11 ಕ್ಷೇತ್ರದ ಮತ ಎಣಿಕೆ

ಮೈಸೂರು, ಏ.6(ಆರ್‌ಕೆ)–ಈ ಬಾರಿ ಮೈಸೂರು ಜಿಲ್ಲೆಯ ಎಲ್ಲಾ 11 ವಿಧಾನ ಸಭಾ ಕ್ಷೇತ್ರಗಳ ಚುನಾವಣಾ ಮತ ಎಣಿಕೆ ಪ್ರಕ್ರಿಯೆಯು ಮೈಸೂರಿನ ಪಡುವಾರಹಳ್ಳಿ ಬಳಿಯ ವಾಲ್ಮೀಕಿ ರಸ್ತೆಯಲ್ಲಿರುವ ಮಹಾರಾಣಿ ಸರ್ಕಾರಿ ಮಹಿಳಾ ವಾಣಿಜ್ಯ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜು ಕೇಂದ್ರದಲ್ಲಿ ಮಾತ್ರ ಮೇ 13ರಂದು ನಡೆಯಲಿದೆ.

ಮಹಾರಾಣಿ ಕಾಮರ್ಸ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜು ಮತ್ತು ಕೂರ್ಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಎನ್‌ಐಇ–ಐಟಿ ಕಾಲೇಜುಗಳಲ್ಲಿ 2018ರ ವಿಧಾನಸಭಾ ಸಾರ್ವತ್ರಿಕ ಚುನಾವಣಾ ಮತ ಎಣಿಕೆ ನಡೆದಿತ್ತು ಮಹಾರಾಣಿ ಕಾಮರ್ಸ್ ಕಾಲೇಜಿನಲ್ಲಿ ಕೃಷ್ಣರಾಜ, ನರಸಿಂಹರಾಜ, ಹೆಚ್.ಡಿ.ಕೋಟೆ, ನಂಜನಗೂಡು, ತಿ. ನರಸೀಪುರ, ಹುಣಸೂರು ಮತ್ತು ಚಾಮುಂಡೇಶ್ವರಿ ಕ್ಷೇತ್ರಗಳ ಮತ ಎಣಿಕೆ ಕಾರ್ಯ ನಡೆದಿತ್ತು.

ಎನ್‌ಐಇ–ಐಟಿ ಕೇಂದ್ರದಲ್ಲಿ ಕೆ.ಆರ್.ನಗರ, ಪಿರಿಯಾಪಟ್ಟಣ, ವರುಣಾ ಹಾಗೂ ಚಾಮರಾಜ ವಿಧಾನಸಭಾ ಕ್ಷೇತ್ರಗಳ ಮತ ಎಣಿಕೆ ನಡೆದಿದ್ದು, ಅಂದಿನ ಜಿಲ್ಲಾಧಿಕಾರಿಯಾಗಿದ್ದ ಅಭಿರಾಂ ಜಿ.ಶಂಕರ್ ಅವರು 2018ರ ಚುನಾವಣೆಯಲ್ಲಿ ಮೈಸೂರು ಜಿಲ್ಲಾ ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದರು. ಆದರೆ ಈ ಬಾರಿ ಮೈಸೂರು ನಗರದ ವಾಲ್ಮೀಕಿ ರಸ್ತೆಯ ಮಹಾರಾಣಿ ಸರ್ಕಾರಿ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್ ಕಾಲೇಜು ಕೇಂದ್ರವೊಂದರಲ್ಲೇ ಜಿಲ್ಲೆಯ ಎಲ್ಲಾ 11 ವಿಧಾನಸಭಾ ಕ್ಷೇತ್ರಗಳ ಚುನಾವಣೆ ಮತ ಎಣಿಕೆ ಕಾರ್ಯ ನಡೆಯಲಿದೆ. ಅದಕ್ಕಾಗಿ ಕಾಲೇಜಿನಲ್ಲಿ ಸ್ಟ್ರಾಂಗ್ ರೂಂಗಳನ್ನು ಸಿದ್ಧ ಪಡಿಸಲಾಗಿದ್ದು, 11 ಕೊಠಡಿಗಳ ಕಿಟಕಿ ಗಳಿಗೆ ಪ್ಲೈವುಡ್ ಶೀಟ್‌ಗಳನ್ನು ಹಾಕಿ ಬಂದ್ ಮಾಡಲಾಗಿದೆ. ಸ್ಟ್ರಾಂಗ್ ರೂಂಗಳಿಗೆ ವಿದ್ಯುತ್ ಸಂಪರ್ಕ, ಸಿಸಿ ಕ್ಯಾಮರಾಗಳು, ಭದ್ರತಾ ವ್ಯವಸ್ಥೆ ಕಲ್ಪಿಸಲಾಗಿದ್ದು, ಜಿಲ್ಲಾ ಚುನಾವಣಾಧಿಕಾರಿ ಡಾ. ಕೆವಿ. ರಾಜೇಂದ್ರ ಈಗಾಗಲೇ ಸ್ಟ್ರಾಂಗ್ ರೂಂ ಪರಿಶೀಲಿಸಿ ಮತ ಎಣಿಕೆಗೂ ಸರ್ವ ಸಿದ್ಧತೆಗೆ ಸೂಚಿ ಸಿದ್ದಾರೆ. ಇವಿಎಂ, ವಿವಿ ಪ್ಯಾಟ್‌ಗಳಿರಿಸುವ ಕೊಠಡಿಗಳಲ್ಲಿ ಮಾರ್ಕಿಂಗ್ ಮಾಡಿ ನಂಬರ್‌ಗಳ ಸ್ಟಿಕ್ಕರ್ ಅಂಟಿಸಲಾಗಿದೆ. ಮಾಧ್ಯಮ ಕೇಂದ್ರ, ಹೆಲ್ತ್ ಕಿಯಾಸ್ಕ್,



ಚುನಾವಣಾ ವೀಕ್ಷಕರ ಕೊಠಡಿ, ಇಂಟರ್‌ನೆಟ್ ಸಹಿತ ಕಂಪ್ಯೂಟರ್ ರೂಂ ಹಾಗೂ ಹಾಟ್‌ಸ್ಪಾಟ್ ವ್ಯವಸ್ಥೆ ಕಲ್ಪಿಸಿ, ಕೇಂದ್ರಕ್ಕೆ ಅರೆಮಿಲಿಟರಿ ಪಡೆ ಹಾಗೂ ಹೆಚ್ಚುವರಿ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಿ, ಭಾರೀ ಬಂದೋಬಸ್ತ್ ಮಾಡಲಾಗುತ್ತಿದೆ. ಪ್ರತಿ ಮತ ಎಣಿಕೆ ಹಾಲ್‌ನಲ್ಲಿ 14 ಟೇಬಲ್‌ಗಳನ್ನು ಅಳವಡಿಸಿ ಅಭ್ಯರ್ಥಿಗಳ ಏಜೆಂಟರ ಸಮ್ಮುಖದಲ್ಲಿ ಇವಿಎಂಗಳಲ್ಲಿ ದಾಖಲಾಗಿರುವ ಮತಗಳನ್ನು ಎಣಿಕೆ ಮಾಡಿ, ದಾಖಲು ಮಾಡಲು ಅಗತ್ಯ ವ್ಯವಸ್ಥೆಯನ್ನು ಕೇಂದ್ರದಲ್ಲಿ ಮಾಡಲಾಗುತ್ತಿದೆ.

ಕೊಡಗು ಸುತ್ತಮುತ್ತ ವರ್ಷಧಾರೆ

ಸತತ 2ನೇ ದಿನವೂ ಮಳೆ, ಕಾಫಿ ಬೆಳೆಗಾರರಲ್ಲಿ ಹರ್ಷ



ಮಡಿಕೇರಿ, ಏ.6– ಬ್ರಹ್ಮಗಿರಿ ಬೆಟ್ಟ ಸಾಲಿನ ತಪ್ಪಲಿನಲ್ಲಿರುವ ವಿವಿಧ ಗ್ರಾಮಗಳಲ್ಲಿ ಗುರುವಾರವೂ ಉತ್ತಮ ವರ್ಷಧಾರೆಯಾಗಿದೆ. ನಾಪೋಕ್ಲು, ಪಾರಾಣೆ, ಕುಂಜಿಲ, ಕಕ್ಕಬ್ಬೆ ಭಾಗಗಳಲ್ಲಿ 2ನೇ ದಿನವು ಉತ್ತಮ ಮಳೆಯಾಗಿದ್ದು, ಕಾಫಿ ಬೆಳೆಗಾರರ ಮುಖದಲ್ಲಿ ಮಂದಹಾಸ ಮೂಡಿದೆ.

ಕಳೆದ ಕೆಲವು ದಿನಗಳಿಂದ ಜಿಲ್ಲೆಯಲ್ಲಿ ಸುಡು ಬಿಸಿಲಿನ ವಾತಾವರಣ ಕಂಡು ಬಂದಿದ್ದು, ಎರಡು ದಿನಗಳಿಂದ ಮೋಡ ಕವಿದ ವಾತಾವರಣ ಮನೆ ಮಾಡಿದೆ. ಗುರುವಾರ ಮಧ್ಯಾಹ್ನದ ವೇಳೆಗೆ ಚೆಯ್ಯಂಡಾಣೆ ವ್ಯಾಪ್ತಿಯಲ್ಲಿ ಗುಡುಗು ಸಹಿತ ವರ್ಷದ ಮೊದಲ ಮಳೆ ಸುರಿದಿದೆ. ಈ ವ್ಯಾಪ್ತಿಯ ನರಿಯಂದಡ, ಚೇಲಾವರ, ಕರಡ ಗ್ರಾಮದಲ್ಲಿ ಸಾಧಾರಣ ಮಳೆಯಾಗಿದ್ದು ಬಿಸಿಲಿನಿಂದ ಒಣಗುತ್ತಿದ್ದ ಕಾಫಿ ಗಿಡಗಳು ಹಾಗೂ ಕರಿಮೆಣಸು ಬಳ್ಳಿಗಳನ್ನು ತಂಪಾಗಿಸಿದೆ.

ನಾಪೋಕ್ಲು ಪಟ್ಟಣದ ಸುತ್ತಮುತ್ತಲಿನ ಪ್ರದೇಶ ಸೇರಿದಂತೆ ಕೊಳಕೇರಿ, ಕುಂಜಿಲ, ಎಮ್ಮೆಮಾಡು, ನೆಲಜಿ, ಬಲ್ಲಮಾವಟಿ, ಕಕ್ಕಬ್ಬೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಉತ್ತಮ ಮಳೆ ಸುರಿದಿದೆ. ಕಳೆದ ಎರಡು ದಿನಗಳಿಂದ ನಾಪೋಕ್ಲು ಸುತ್ತಮುತ್ತಲ ಗ್ರಾಮಗಳಲ್ಲಿ ಮಳೆಯಾಗುತ್ತಿದ್ದು, ಧೂಳು ಹಾಗೂ ಸೆಕೆಯಿಂದ ಬಸವಳಿದಿದ್ದ ಜನರಿಗೂ ತುಸು ನೆಮ್ಮದಿ ಮೂಡಿಸಿದೆ.

ಏಕಾಏಕಿ ಮಳೆಯಾದ ಕಾರಣ ಬಸ್‌ಗಳಲ್ಲಿ ನಾಪೋಕ್ಲು ಪಟ್ಟಣಕ್ಕೆ ಬಂದಿಳಿದವರು ಮಳೆಯಿಂದ ರಕ್ಷಣೆ ಪಡೆಯಲು ಅಂಗಡಿ–ಮುಂಗಟ್ಟುಗಳ ಆಶ್ರಯ ಪಡೆದಿದ್ದು ಕಂಡು ಬಂತು. ಇನ್ನು ಮಡಿಕೇರಿ ತಾಲೂಕು ವ್ಯಾಪ್ತಿಯ ಪಾರಣೆ ಗ್ರಾಮಕ್ಕೆ ವರ್ಷದ ಮೊದಲ ಮಳೆಯಾಗಿದೆ. ಹಾಕತ್ತೂರು ಭಾಗದಲ್ಲಿಯೂ ತುಂತುರು ಮಳೆಯಾದ ಬಗ್ಗೆ ವರದಿಯಾಗಿದೆ.

ಶ್ರೀ ಹನುಮ ಜಯಂತಿ ಆಚರಣೆ

ವಿರಾಜಪೇಟೆ, ಏ.6– ವಿರಾಜಪೇಟೆಯ ಛತ್ರಕೆರೆ ಬಳಿಯಿರುವ ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಗುರುವಾರ ಶ್ರೀ ಹನುಮ ಜಯಂತಿಯನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು. ಶ್ರೀ ಹನುಮ ಜಯಂತಿ ಅಂಗವಾಗಿ ದೇವಾಲಯದಲ್ಲಿ ಬೆಳಿಗ್ಗೆಯಿಂದಲೇ ವಿಶೇಷ ಪೂಜೆಗಳು ನಡೆಯಿತು. ಮಧ್ಯಾಹ್ನ ಮಹಾಪೂಜೆ ಬಳಿಕ ಪ್ರಸಾದ ವಿತರಣೆ ಮಾಡಲಾಯಿತು. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಈ ಸಂದರ್ಭ ದೇವಸ್ಥಾನ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.



ಅಂತಿಮ ಘಟ್ಟಕ್ಕೆ ಅಪ್ಪಚೆಟ್ಟೋಳಂಡ ಹಾಕಿ ಉತ್ಸವ

ಇಂದು ಸೆಮಿಫೈನಲ್, ಏ.9ರಂದು ಫೈನಲ್

- 329 ತಂಡಗಳು ಭಾಗಿ
- 957 ಗೋಲುಗಳು ದಾಖಲು
- 49 ಪಂದ್ಯಗಳಲ್ಲಿ ಟೈಬ್ರೇಕರ್ ಮೂಲಕ ನಿರ್ಧಾರ



ಮಡಿಕೇರಿ, ಏ.6– ನಾಪೋಕ್ಲುವಿನಲ್ಲಿ ನಡೆಯುತ್ತಿರುವ ಕೊಡವ ಕುಟುಂಬಗಳ ನಡುವಿನ 'ಅಪ್ಪಚೆಟ್ಟೋಳಂಡ ಹಾಕಿ ಉತ್ಸವ' ಅಂತಿಮ ಘಟ್ಟವನ್ನು ಪ್ರವೇಶಿಸುತ್ತಿದೆ. ಪಂದ್ಯಾವಳಿಯ ಸೆಮಿಫೈನಲ್ಸ್ ನಾಳೆ (ಏ.7) ಮತ್ತು ಫೈನಲ್ ಪಂದ್ಯ ಏ.9 ರಂದು ನಡೆಯಲಿದೆ ಎಂದು ಪಂದ್ಯಾವಳಿ ಆಯೋಜನಾ ಸಮಿತಿಯ ಸಂಚಾಲಕರಾದ ಅಪ್ಪಚೆಟ್ಟೋಳಂಡ ಮನು ಮುತ್ತಪ್ಪ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 20 ದಿನಗಳಿಂದ ನಡೆಯುತ್ತಿರುವ ಪಂದ್ಯಾವಳಿಯಲ್ಲಿ ನೋಂದಾಯಿಸಿಕೊಂಡ 336 ತಂಡಗಳ ಪೈಕಿ 329 ತಂಡಗಳು ಪಾಲ್ಗೊಂಡಿದ್ದು, ವಿವಿಧ ಕುಟುಂಬಗಳ 5 ಸಾವಿರ ಆಟಗಾರರು ಪಾಲ್ಗೊಂಡಿದ್ದಾರೆ. ಇಲ್ಲಿಯವರೆಗೆ ಒಟ್ಟು 957 ಗೋಲುಗಳು ವಿವಿಧ ಪಂದ್ಯಗಳಲ್ಲಿ ದಾಖಲಾಗಿದೆ. 49 ಪಂದ್ಯಗಳಲ್ಲಿ ವಿಜೇತ ತಂಡಗಳನ್ನು ಟೈಬ್ರೇಕರ್ ಮೂಲಕ ನಿರ್ಧರಿಸಲಾಗಿದೆ. ಒರಟಿನ ಆಟಕ್ಕಾಗಿ 67 ಹಸಿರು, 11 ಹಳದಿ ಕಾರ್ಡ್‌ಗಳನ್ನು ತೋರಿಸಲಾಗಿದೆ. ತಾಂತ್ರಿಕ ತಂಡದಲ್ಲಿ 27 ಮಂದಿ ಕಾರ್ಯ ನಿರ್ವಹಿಸುತ್ತಿರುವುದಾಗಿ ವಿವರಿಸಿದರು.

ಇಂದು ಸೆಮಿಫೈನಲ್: ಏ.7ರಂದು ಪಂದ್ಯಾವಳಿಯ ಮೊದಲ ಸೆಮಿಫೈನಲ್‌ನ್ನು ಭಾರತ ಹಾಕಿ ತಂಡದ ಮಾಜಿ ನಾಯಕ, ಒಲಂಪಿಯನ್ ಮನೆಯಪಂಡ ಸೋಮಯ್ಯ ಉದ್ಘಾಟಿಸಲಿದ್ದಾರೆ. ದ್ವಿತೀಯ ಸೆಮಿಫೈನಲ್ ಪಂದ್ಯವನ್ನು ಅಂತರರಾಷ್ಟ್ರೀಯ ಹಾಕಿ ತೀರ್ಪುಗಾರರಾದ ಅಚ್ಚಕಾಳಿರ ಪಳಂಗಪ್ಪ ಮತ್ತು ಅಯ್ಯುಡ ವೇಣು ಉತ್ತಪ್ಪ ಉದ್ಘಾಟಿಸಲಿದ್ದಾರೆ. ಇದೇ ಸಂದರ್ಭ ಪಾಲೆಕಂಡ ಬೋಪಯ್ಯ, ಪಾಲೆಕಂಡ ಬೆಳ್ಯಪ್ಪ, ಮಾರಮಾಡ ಮಾಚಮ್ಮ ಅವರನ್ನು ಅವರ ಕ್ರೀಡಾ ಸಾಧನೆಗಾಗಿ ಸನ್ಮಾನಿಸಿ, ಗೌರವಿಸಲಾಗುವುದು ಎಂದರು.

ಅಂತಿಮ ಪಂದ್ಯ: ಅಂತಿಮ ಪಂದ್ಯ ಏ.9ರಂದು ನಡೆಯಲಿದ್ದು, ಪಂದ್ಯವನ್ನು ಹಾಕಿ ಉತ್ಸವದ ಸ್ಥಾಪಕ ಪಾಂಡಂಡ ಕುಟ್ಟಪ್ಪ ಅವರ ಪತ್ನಿ ಪಾಂಡಂಡ ಲೀಲಾ ಕುಟ್ಟಪ್ಪ ಉದ್ಘಾಟಿಸಲಿದ್ದಾರೆ. ಸಮಾರಂಭದಲ್ಲಿ ಏರ್ ಮಾರ್ಷಲ್ ಬಲ್ಟಿಕಾಳಂಡ ಯು.ಚೆಂಗಪ್ಪ, ಗಾರ್ಡನ್ ಸಿಟಿ ಯೂನಿವರ್ಸಿಟಿಯ ಕುಲಪತಿ ಡಾ. ಜೋಸೆಫ್ ವಿ.ಜಿ., ಕೈಗ್ ಸಂಸ್ಥೆಯ ಕುಟ್ಟಂಡ ಸುದಿನ್ ಮಂದಣ್ಣ, ಭಾರತ ಹಾಕಿ ತಂಡದ ಮಾಜಿ ನಾಯಕರುಗಳಾದ ಜಫರ್ ಇಕ್ಬಾಲ್, ಧನರಾಜ್ ಪಿಳ್ಳೆ, ಒಲಂಪಿಯನ್ ಅಂಜಪರವಂಡ ಸುಬ್ಬಯ್ಯ, ಒಲಂಪಿಯನ್ ಚೆಪ್ಪುಡಿರ ಎಸ್.ಪೂಣಚ್ಚ, ಒಲಂಪಿಯನ್ ಎಸ್.ವಿ. ಸುನಿಲ್ ಪಾಲ್ಗೊಳ್ಳಲಿದ್ದಾರೆಂದು ತಿಳಿಸಿದರು.

ಬಹುಮಾನ: ಪಂದ್ಯಾವಳಿ ವಿಜೇತ ತಂಡಕ್ಕೆ 3 ಲಕ್ಷ ರೂ. ನಗದು ಮತ್ತು ಟ್ರೋಫಿ, ದ್ವಿತೀಯ 2 ಲಕ್ಷ ರೂ. ಮತ್ತು ಟ್ರೋಫಿ, ತೃತೀಯ 1.50 ಲಕ್ಷ ನಗದು ಮತ್ತು ಟ್ರೋಫಿ, ನಾಲ್ಕನೇ 50 ಸಾವಿರ ರೂ. ಮತ್ತು ಟ್ರೋಫಿ ನೀಡಲಾಗುವುದು ಎಂದರು. ಪಂದ್ಯ ಪುರುಷೋತ್ತಮರಿಗೆ 1 ಲಕ್ಷ, ಅಂತಿಮ ಪಂದ್ಯ ಪುರುಷೋತ್ತಮರಿಗೆ 50 ಸಾವಿರ ನಗದು ಬಹುಮಾನ ನೀಡಲಾಗುತ್ತದೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಪಂದ್ಯಾವಳಿ ಆಯೋಜನಾ ಸಮಿತಿಯ ಗೌರವ ಕಾರ್ಯದರ್ಶಿ ಮಿಥುನ್ ಮಾಚಯ್ಯ, ಸದಸ್ಯರುಗಳಾದ ಮನು ಮಾದಪ್ಪ, ಸೋಮಣ್ಣ, ರಾಧಿಕಾ ಮಾದಪ್ಪ, ಶಶಿ ಜನತ್ ಕುಮಾರ್ ಉಪಸ್ಥಿತರಿದ್ದರು.

ಪಂದ್ಯಾವಳಿಯ ಸ್ವಾರಸ್ಯಗಳು

ಪಂದ್ಯಾವಳಿಯಲ್ಲಿ ನಾಪನೆರವಂಡ ಕುಟುಂಬ ತಂಡದಲ್ಲಿ 87ರ ಪ್ರಾಯದ ಪೊನ್ನಪ್ಪ, ಚೀಯಕಪೂವಂಡ ತಂಡದಲ್ಲಿ 84ರ ಪ್ರಾಯದ ಉತ್ತಪ್ಪ ಅವರು ಪಾಲ್ಗೊಂಡು ಯುವಕರನ್ನು ನಾಚಿಸುವಂತೆ ಆಟವಾಡಿ ಗಮನ ಸೆಳೆದಿದ್ದಾರೆ ಎಂದು ಪಂದ್ಯಾವಳಿಯಲ್ಲಿ ಕಂಡು ಬಂದ ಕುತೂಹಲಕಾರಿ ಅಂಶಗಳನ್ನು ಮನು ಮುತ್ತಪ್ಪ ತೆರೆದಿಟ್ಟರು. ಪಂದ್ಯಾವಳಿಯಲ್ಲಿ 3ರ ಪ್ರಾಯದ ಅಚ್ಚಾಂಡಿರ ತನು ತಿಮ್ಮಯ್ಯ ಪಾಲ್ಗೊಂಡು ಕುತೂಹಲ ಮೂಡಿಸಿದರೆ, ಕೇತಿರ ಕುಟುಂಬ ತಂಡ ಪ್ರಥಮ ಬಾರಿಗೆ ಪಂದ್ಯಾಳಿಯಲ್ಲಿ ಪಾಲ್ಗೊಂಡಿದ್ದಲ್ಲದೆ, ಈ ತಂಡದ ಅರ್ಧದಷ್ಟು ಅಂದರೆ ಐವರು ಮಹಿಳಾ ಆಟಗಾರರು ಮೈದಾನಕ್ಕಿಳಿದು ಮೊದಲ ಸುತ್ತಿನ ಪಂದ್ಯದಲ್ಲಿ ಗೆಲುವು ಸಾಧಿಸಿದ್ದನ್ನು ಮನು ಮುತ್ತಪ್ಪ ವಿವರಿಸಿದರು. ಬಾಚಿಮಂಡ ತಂಡದಲ್ಲಿ ತಂದೆ, ತಾಯಿ, ಮಗ, ಮಗನ ಪತ್ನಿ ಹೀಗೆ ಒಂದೇ ಕುಟುಂಬದ ನಾಲ್ವರು ಪಾಲ್ಗೊಂಡು ಅಚ್ಚರಿ ಮೂಡಿಸಿದ್ದಾಗಿ ತಿಳಿಸಿದರು.

ಸೂಕ್ತ ದಾಖಲೆ ಇಲ್ಲದ 3 ಲಕ್ಷ ನಗದು ವಶ

ವಿರಾಜಪೇಟೆ, ಏ.6– ವಿಧಾನಸಭಾ ಚುನಾವಣೆ ಹಿನ್ನೆಲೆ ಕೊಡಗು–ಕೇರಳ ಹೆದ್ದಾರಿ ಗಡಿ ಭಾಗವಾದ ಮಾಕುಟ್ಟದ ಚೆಕ್‌ಪೋಸ್ಟ್‌ನಲ್ಲಿ ಕಟ್ಟುನಿಟ್ಟಿನ ತಪಾಸಣೆ ನಡೆಸಲಾಗುತ್ತಿದ್ದು, ಸೂಕ್ತ ದಾಖಲೆಗಳಿಲ್ಲದ 3 ಲಕ್ಷ 39 ಸಾವಿರದ 310 ರೂ.ಗಳನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ವಿರಾಜಪೇಟೆ ಪೆರುಂಬಾಡಿ ಚೆಕ್‌ಪೋಸ್ಟ್ ಮಾರ್ಗವಾಗಿ ಕೇರಳದ ಕಣ್ಣೂರಿಗೆ ಹೋಗಿ ಬರುತ್ತಿದ್ದ ಮಂಡ್ಯ ಜಿಲ್ಲೆಯ ಬೆಲ್ಲದ ವಾಹನದಲ್ಲಿ 2,34,650 ರೂ. ಹಾಗೂ ಮತ್ತೊಂದು ತರಕಾರಿ ವಾಹನದಲ್ಲಿ 1,04,660 ರೂ.ಗಳಿಗೆ ವಾಹನ ಮಾಲಿಕರು ಸೂಕ್ತ ದಾಖಲೆ ನೀಡದ ಕಾರಣ ಹಣವನ್ನು ವಶಪಡಿಸಿಕೊಂಡಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಗಡಿ ಭಾಗವಾದ ಮಾಕುಟ್ಟ ಚೆಕ್‌ಪೋಸ್ಟ್‌ನಲ್ಲಿ ವಾಹನ ತಪಾಸಣೆ ಸಂದರ್ಭ ಚೆಕ್‌ಪೋಸ್ಟ್ ಕಣ್ಗಾವಲು ಪಡೆಯ ಸುಬ್ಬಯ್ಯ ಹಾಗೂ ನಂದೀಶ್ ಮತ್ತು ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಗಳು ಹಾಜರಿದ್ದರು.

ವಾಹನಗಳ ಮೇಲೆ ರಾಜಕೀಯ ವ್ಯಕ್ತಿ, ಪಕ್ಷಗಳ ಬ್ಯಾನರ್, ಭಿತ್ತಿ ಪತ್ರ ಬಳಕೆ ನಿಷೇಧ

ಮಡಿಕೇರಿ, ಏ.6– ವಿಧಾನಸಭಾ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವ ಹಿನ್ನೆಲೆಯಲ್ಲಿ ಆಟೋರಿಕ್ಷಾ, ಟ್ಯಾಕ್ಸಿ, ಬಸ್ ಹಾಗೂ ಇತರೆ ಯಾವುದೇ ವಾಹನಗಳ ಮೇಲೆ, ಯಾವುದೇ ರಾಜಕೀಯ ವ್ಯಕ್ತಿಗಳ ಭಾವಚಿತ್ರ ಅಥವಾ ಪಕ್ಷಗಳನ್ನು ಬಿಂಬಿಸುವ ಬ್ಯಾನರ್ಸ್, ಭಿತ್ತಿಪತ್ರಗಳು ಹಾಗೂ ಇತರೇ ಚಿತ್ರಗಳನ್ನು ಪೂರ್ವಾನುಮತಿ ಇಲ್ಲದೆ ಪ್ರದರ್ಶಿಸುವಂತಿಲ್ಲ.

ಪ್ರದರ್ಶನದ ಬ್ಯಾನರ್ಸ್, ಕಟೌಟ್ಸ್ ಇತರೆ ಚಿತ್ರಗಳನ್ನು 24 ಗಂಟೆಗಳ ಒಳಗಾಗಿ ಕಡ್ಡಾಯವಾಗಿ ತೆರವುಗೊಳಿಸುವುದು. ತಪ್ಪಿದಲ್ಲಿ ಅಂತಹ ವಾಹನಗಳನ್ನು ಚುನಾವಣಾ ನೀತಿ ಸಂಹಿತೆ ಉಲ್ಲಂಘನೆಯ ಪ್ರಕರಣವೆಂದು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿ ಎಸ್.ಎನ್. ಮಧುರ ತಿಳಿಸಿದ್ದಾರೆ.

ಕೆಪಿಸಿಸಿಯಿಂದ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ

ಮಡಿಕೇರಿಗೆ ಮಂಥರ್‌ಗೌಡ ಕಾಂಗ್ರೆಸ್ ಅಭ್ಯರ್ಥಿ



ಮಡಿಕೇರಿ, ಏ.6– ವಿಧಾನಸಭೆ ಚುನಾವಣೆಗೆ ಸಂಬಂಧಿಸಿದಂತೆ ಕೆಪಿಸಿಸಿ ಇಂದು ಕಾಂಗ್ರೆಸ್ ಅಭ್ಯರ್ಥಿಗಳ 2ನೇ ಪಟ್ಟಿ ಬಿಡುಗಡೆ ಮಾಡಿದೆ. 208ನೇ ಮಡಿಕೇರಿ ವಿಧಾನಸಭಾ ಕ್ಷೇತ್ರಕ್ಕೆ ಅರಕಲಗೋಡು ಶಾಸಕ ಜೆಡಿಎಸ್ ಮುಖಂಡ ಎ.ಮಂಜು ಅವರ ಪುತ್ರ ಡಾ. ಮಂಥರ್ ಗೌಡ ಅವರ ಹೆಸರನ್ನು ಅಂತಿಮಗೊಳಿಸಿ ಪಟ್ಟಿ ಬಿಡುಗಡೆ ಮಾಡಿದೆ. ಆ ಮೂಲಕ ಅಧಿಕೃತ ಅಭ್ಯರ್ಥಿಗಳು ಯಾರು ಎಂಬ ಗೊಂದಲಗಳಿಗೆ ಕಾಂಗ್ರೆಸ್ ಹೈಕಮಾಂಡ್ ತೆರೆ ಎಳೆದಿದೆ.

ಮಡಿಕೇರಿ ವಿಧಾನಸಭಾ ಕಣಕ್ಕೆ ಹೈಕೋರ್ಟ್ ವಕೀಲ ಕೊಡ್ಲಿಪೇಟೆಯ ಹೆಚ್.ಎಸ್. ಚಂದ್ರಮೌಳಿ, ಮಾಜಿ ಸಚಿವ ಬಿ.ಎ.ಜೀವಿಜಯ ಮತ್ತು ಡಾ.ಮಂಥರ್ ಗೌಡ ಅವರ ಹೆಸರುಗಳು ಪ್ರಬಲವಾಗಿ ಕೇಳಿ ಬಂದಿತ್ತು. ಸಮೀಕ್ಷೆಗಳ ವರದಿಯನ್ನು ಅಳೆದು ತೂಗಿರುವ ಕಾಂಗ್ರೆಸ್ ಹೈಕಮಾಂಡ್ ವಿಧಾನಪರಿಷತ್ ಚುನಾವಣೆಯಲ್ಲಿ ಸ್ಪರ್ಧಿಸಿ ಅಲ್ಪ ಮತಗಳಿಂದ ಪರಾಭವ ಕಂಡಿದ್ದ ಡಾ. ಮಂಥರ್‌ಗೌಡ ಅವರನ್ನು ಅಧಿಕೃತ ಅಭ್ಯರ್ಥಿಯನ್ನಾಗಿಸಿದೆ.

ಮಡಿಕೇರಿ ಕ್ಷೇತ್ರದಲ್ಲಿ ಡಾ.ಮಂಥರ್ ಗೌಡ ಪರಿಷತ್ ಚುನಾವಣಾ ಸಂದರ್ಭ ಸಕ್ರಿಯವಾಗಿ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದು, ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಚುನಾವಣಾ ಪ್ರಚಾರ ನಡೆಸಿದ್ದರು. ಇದೇ ಮಾನದಂಡ ಮತ್ತು ಯುವ ಉತ್ಸಾಹಿ ಯುವಕರಿಗೆ ಮಣೆ ಹಾಕುವ ಸಲುವಾಗಿ ಡಾ. ಮಂಥರ್ ಗೌಡ ಅವರಿಗೆ ಟಿಕೆಟ್ ನೀಡಲಾಗಿದೆ ಎಂದು ಪಕ್ಷ ಮೂಲಗಳು ಮಾಹಿತಿ ನೀಡಿವೆ. ಪಕ್ಷದಿಂದ ಅಧಿಕೃತವಾಗಿ ಟಿಕೆಟ್ ದೊರೆಯಲಿದೆ ಎಂದು ವಿಶ್ವಾಸ ಹೊಂದಿದ್ದ ಡಾ. ಮಂಥರ್ ಗೌಡ ಈಗಾಗಲೇ ಕ್ಷೇತ್ರದಲ್ಲಿ ಒಂದು ಸುತ್ತಿನ ಚುನಾವಣಾ ಪ್ರಚಾರ ನಡೆಸಿದ್ದು, ಮತದಾರರನ್ನು ಸೆಳೆಯುವ ಪ್ರಯತ್ನ ನಡೆಸಿದ್ದಾರೆ.

ಇನ್ನು ವಿರಾಜಪೇಟೆ ಕ್ಷೇತ್ರಕ್ಕೆ ಹೈಕೋರ್ಟ್ ವಕೀಲ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಅವರ ಹೆಸರನ್ನು ಮೊದಲ ಪಟ್ಟಿಯಲ್ಲೇ ಬಿಡುಗಡೆ ಮಾಡಲಾಗಿದೆ. ಎ.ಎಸ್.ಪೊನ್ನಣ್ಣ ಈಗಾಗಲೇ ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಸಮಾವೇಶಗಳ ಸಹಿತ ಬಿರುಸಿನ ಚುನಾವಣಾ ಪ್ರಚಾರ ನಡೆಸುತ್ತಿದ್ದಾರೆ.

ಸುಂಟಿಕೊಪ್ಪದಲ್ಲಿ ಶಸ್ತ್ರಸಜ್ಜಿತ ಯೋಧರ ಪಥಸಂಚಲನ



ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ಶಾಂತಿ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವ ಸಲುವಾಗಿ ಕೊಡಗು ಜಿಲ್ಲೆಗೆ ಕೇಂದ್ರೀಯ ಕೈಗಾರಿಕಾ ಪಡೆಯ ಶಸ್ತ್ರಸಜ್ಜಿತ ಯೋಧರ ಒಂದು ತುಕಡಿ ಸುಂಟಿಕೊಪ್ಪಕ್ಕೆ ಬಂದಿಳಿದಿದ್ದು, ಜಿಲ್ಲಾ ಪೊಲೀಸ್ ಮತ್ತು ಕೇಂದ್ರ ಕೈಗಾರಿಕಾ ಭದ್ರತಾ ಪಡೆ ಜಂಟಿಯಾಗಿ ಪಥಸಂಚಲನ ನಡೆಸಿ ಶಾಂತಿಯುತ ಮತದಾನಕ್ಕೆ ಅಭಯ ನೀಡಿದರು.

ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ 2ನೇ ಪಟ್ಟಿ ಬಿಡುಗಡೆ

ಕೊಳ್ಳೇಗಾಲ ಕಾಂಗ್ರೆಸ್ ಅಭ್ಯರ್ಥಿ ಎ.ಆರ್. ಕೃಷ್ಣಮೂರ್ತಿ

• ಸಿದ್ದಲಿಂಗಸ್ವಾಮಿ

ಚಾಮರಾಜನಗರ, ಏ.6– ಜಿಲ್ಲೆಯ ಏಕೈಕ ಮೀಸಲು ವಿಧಾನಸಭಾ ಕ್ಷೇತ್ರವಾದ ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ತನ್ನ ಅಭ್ಯರ್ಥಿಯನ್ನಾಗಿ ಮಾಜಿ ಶಾಸಕ ಎ.ಆರ್. ಕೃಷ್ಣಮೂರ್ತಿ ಅವರನ್ನು ಕಣಕ್ಕಿಳಿಸಿದೆ. ಇದರೊಂದಿಗೆ ಜಿಲ್ಲೆಯ ನಾಲ್ಕೂ ಕ್ಷೇತ್ರಗಳಿಗೆ ಕಾಂಗ್ರೆಸ್ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದಂತಾಗಿದೆ.

ಕಾಂಗ್ರೆಸ್‌ನ ಮೊದಲ ಪಟ್ಟಿಯಲ್ಲಿ ಚಾಮರಾಜನಗರದಿಂದ ಸಿ. ಪುಟ್ಟರಂಗಶೆಟ್ಟಿ, ಹನೂರಿನಿಂದ ಆರ್. ನರೇಂದ್ರ, ಗುಂಡ್ಲುಪೇಟೆಯಿಂದ ಎಚ್.ಎಂ. ಗಣೇಶ್‌ಪ್ರಸಾದ್ ಆಯ್ಕೆ ಮಾಡಲಾಗಿತ್ತು. ಗುರುವಾರ ಪ್ರಕಟಗೊಂಡ ಎರಡನೇ ಪಟ್ಟಿಯಲ್ಲಿ ಕಾಂಗ್ರೆಸ್ ತನ್ನ ಅಭ್ಯರ್ಥಿಯಾಗಿ ಎ.ಆರ್. ಕೃಷ್ಣಮೂರ್ತಿ ಅವರನ್ನು ಆಯ್ಕೆ ಮಾಡಿದೆ.

ಸಿದ್ದರಾಮಯ್ಯನ ಆಪ್ತನಿಗೆ ಒಲಿದ ಅವಕಾಶ: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ ಬಳಗದಲ್ಲಿ ಗುರುತಿಸಿಕೊಂಡಿದ್ದ ಮಾಜಿ ಶಾಸಕ ಎ.ಆರ್. ಕೃಷ್ಣಮೂರ್ತಿ ಅವರೊಂದಿಗೆ ಕೊಳ್ಳೇಗಾಲ ಕ್ಷೇತ್ರದಿಂದ ಮಾಜಿ ಶಾಸಕರಾದ ಎಸ್. ಜಯಣ್ಣ, ಎಸ್. ಬಾಲರಾಜ್ ಸೇರಿದಂತೆ ಕಳೆದ ತಿಂಗಳಷ್ಟೇ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ್ದ ಜಿ.ಎನ್. ನಂಜುಂಡಸ್ವಾಮಿ ಅವರ ನಡುವೆ ಟಿಕೆಟ್‌ಗಾಗಿ ತೀವ್ರ ಪೈಪೋಟಿ ಇತ್ತು. ಇದರಿಂದ ಅಭ್ಯರ್ಥಿ ಆಯ್ಕೆಯೂ ಕಾಂಗ್ರೆಸ್‌ಗೆ ಕಗ್ಗಂಟಾಗಿತ್ತು. ಹೀಗಾಗಿ, ಮೊದಲ ಪಟ್ಟಿಯಲ್ಲಿ ಕ್ಷೇತ್ರದ ಅಭ್ಯರ್ಥಿ ಹೆಸರು ಪ್ರಕಟಿಸಿರಲಿಲ್ಲ.



ಉಳಿದ ಚಾಮರಾಜನಗರ, ಗುಂಡ್ಲುಪೇಟೆ ಮತ್ತು ಹನೂರು ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಲಾಗಿತ್ತು. ಕೊಳ್ಳೇಗಾಲ ಕ್ಷೇತ್ರದಲ್ಲಿ ಗೊಂದಲ ಮುಂದುವರಿದಿತ್ತು. ಆದರೆ, ಕಾಂಗ್ರೆಸ್ ಗುರುವಾರ ಪ್ರಕಟಿಸಿರುವ 42 ಅಭ್ಯರ್ಥಿಗಳ ಪಟ್ಟಿಯಲ್ಲಿ ಕೊಳ್ಳೇಗಾಲದಿಂದ ಎ.ಆರ್. ಕೃಷ್ಣಮೂರ್ತಿ ಅವರ ಹೆಸರು ಅಂತಿಮಗೊಳಿಸಲಾಗಿದೆ.

ಎಆರ್‌ಕೆ ರಾಜಕೀಯ ಇತಿಹಾಸ: ಎ.ಆರ್. ಕೃಷ್ಣಮೂರ್ತಿ ತಮ್ಮ ತಂದೆ ಬಿ. ರಾಚಯ್ಯ ಅವರ ರಾಜಕೀಯ ಗರಡಿಯಲ್ಲಿ ಬೆಳೆದವರು. ರಾಜ್ಯ ರಾಜಕೀಯದಲ್ಲಿ ಬಿ. ರಾಚಯ್ಯ ಅವರು ತಮ್ಮದೇ ಛಾಪು ಮೂಡಿಸಿದವರು. ನಾನಾ ಇಲಾಖೆಗಳ ಸಚಿವರಾಗಿ ಸಾಕಷ್ಟು ಸುಧಾರಣೆ ತಂದವರು. ಕೊನೆಯಲ್ಲಿ ಕೇರಳ ರಾಜ್ಯಪಾಲರಾಗಿ ಬಿ. ರಾಚಯ್ಯ ಅವರು ನಿವೃತ್ತರಾದರು.

ಬಿ. ರಾಚಯ್ಯ ಅವರ ನಂತರ ಸಂತೇಮರಹಳ್ಳಿ ಕ್ಷೇತ್ರದಲ್ಲಿ ಅವರ ಪುತ್ರ ಎ.ಆರ್. ಕೃಷ್ಣಮೂರ್ತಿ ಸ್ಪರ್ಧೆ ಮುಂದುವರಿಸಿದರು. 1989ರಲ್ಲಿ ಮೊದಲ ಬಾರಿಗೆ ಸಂತೇಮರಹಳ್ಳಿ ಕ್ಷೇತ್ರದಿಂದ ಸ್ಪರ್ಧಿಸಿದ ಎ.ಆರ್. ಕೃಷ್ಣಮೂರ್ತಿ ಸೋಲು ಅನುಭವಿಸಿದರು. ನಂತರ 1994ರಲ್ಲಿ ಜನದಳದಿಂದ ಸ್ಪರ್ಧಿಸಿ ಗೆಲುವು ಕಾಣುವ ಮೂಲಕ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾದರು. ನಂತರ 1999ರ ಚುನಾವಣೆಯಲ್ಲಿ ಜನತಾದಳ (ಸಂಯುಕ್ತ) ಅಭ್ಯರ್ಥಿಯಾಗಿ ಸಂತೇಮರಹಳ್ಳಿ ವಿಧಾನಸಭಾ ಕ್ಷೇತ್ರದಿಂದ ಮತ್ತೊಮ್ಮೆ ಆಯ್ಕೆಯಾಗಿದ್ದರು.

ಒಂದು ಮತದ ಸೋಲು: 2004ರ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಎ.ಆರ್. ಕೃಷ್ಣಮೂರ್ತಿ ಅವರು ಕಾಂಗ್ರೆಸ್‌ನ ಆರ್. ಧ್ರುವನಾರಾಯಣ್ ಅವರ ವಿರುದ್ಧ ಕೇವಲ ಒಂದು ಮತದ ಅಂತರದಿಂದ ಪರಾಭವಗೊಂಡರು. ಈ ಚುನಾವಣೆಯಲ್ಲಿ ಧ್ರುವನಾರಾಯಣ್ ಅವರು 40,752 ಮತಗಳನ್ನು ಗಳಿಸಿ ವಿಜೇತರಾದರೆ, 40,751 ಮತಗಳನ್ನು ಪಡೆದು ಸೋಲು ಕಂಡರು.

ಆ ನಂತರದಲ್ಲಿ 2008ರಲ್ಲಿ ಸಂತೇಮರಹಳ್ಳಿ ಕ್ಷೇತ್ರ ರದ್ದಾಗಿದ್ದರಿಂದ ಕೊಳ್ಳೇಗಾಲ ಕ್ಷೇತ್ರಕ್ಕೆ ವಲಸೆ ಹೋದರು. 2008ರಲ್ಲಿ ಜೆಡಿಎಸ್‌ನಿಂದ ಕೊಳ್ಳೇಗಾಲದಲ್ಲಿ ಸ್ಪರ್ಧಿಸಿ ಕಾಂಗ್ರೆಸ್‌ನ ಧ್ರುವನಾರಾಯಣ್ ವಿರುದ್ಧ ಸೋಲು ಕಂಡರು. ನಂತರ ಬದಲಾದ ರಾಜಕೀಯ ಸನ್ನಿವೇಶದಲ್ಲಿ ಅವರು ಬಿಜೆಪಿಗೆ ಸೇರ್ಪಡೆಗೊಂಡು 2009ರಲ್ಲಿ ಚಾಮರಾಜನಗರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ ಎ.ಆರ್. ಕೃಷ್ಣಮೂರ್ತಿ ಮತ್ತೊಮ್ಮೆ ಕಾಂಗ್ರೆಸ್‌ನ ಧ್ರುವನಾರಾಯಣ್ ವಿರುದ್ಧ 4002 ಮತಗಳಿಂದ ಸೋಲು ಕಂಡರು.

2014ರ ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಮತ್ತೆ ಬಿಜೆಪಿಯಿಂದ ಸ್ಪರ್ಧಿಸಿದ್ದ ಎ.ಆರ್. ಕೃಷ್ಣಮೂರ್ತಿ ಅದೇ ಧ್ರುವನಾರಾಯಣ್ ವಿರುದ್ಧ 1,41,172 ಮತಗಳ ಅಂತರದಿಂದ ಸೋಲು ಕಂಡರು. ಮತ್ತೆ ಬದಲಾದ ರಾಜಕೀಯ ಸನ್ನಿವೇಶದಲ್ಲಿ ಎ.ಆರ್. ಕೃಷ್ಣಮೂರ್ತಿ ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಯಾದರು. 2018ರ ಚುನಾವಣೆಯಲ್ಲಿ ಕೊಳ್ಳೇಗಾಲ ಮೀಸಲು ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಎ.ಆರ್. ಕೃಷ್ಣಮೂರ್ತಿ ಅವರು ಎನ್. ಮಹೇಶ್ ವಿರುದ್ಧ ಸೋಲು ಕಂಡರು. ಇದೀಗ 2023ರಲ್ಲಿ ಕೊಳ್ಳೇಗಾಲ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಟಿಕೆಟ್ ಪಡೆಯಲು ಯಶಸ್ವಿಯಾಗಿದ್ದಾರೆ.

> ನನ್ನ ತಂದೆ ಬಿ. ರಾಚಯ್ಯ ಅವರ ಮೇಲೆ ಗೌರವ, ನನ್ನ ಮೇಲೆ ವಿಶ್ವಾಸವಿಟ್ಟು, ಸಮೀಕ್ಷೆ ಆಧಾರದ ಮೇಲೆ ಹಾಗೂ ಕಳೆದ ಚುನಾವಣೆಯಲ್ಲಿ ನಾನು ಗಳಿಸಿದ ಮತಗಳ ಆಧಾರದ ಮೇಲೆ ಪಕ್ಷದ ವರಿಷ್ಠರು, ನನಗೆ ಟಿಕೆಟ್ ನೀಡಿದ್ದಾರೆ. ಇದಕ್ಕಾಗಿ ಎಲ್ಲಾ ನಾಯಕರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಮಾಜಿ ಸಂಸದ ದಿ.ಆರ್. ಧ್ರುವನಾರಾಯಣ್ ಅವರ ಬೆಂಬಲಿಗರು, ಅಭಿಮಾನಿಗಳು, ಟಿಕೆಟ್ ಆಕಾಂಕ್ಷಿಗಳಾಗಿದ್ದ ಎಸ್. ಜಯಣ್ಣ, ಎಸ್. ಬಾಲರಾಜು, ಜಿ.ಎನ್. ನಂಜುಂಡಸ್ವಾಮಿ ಅವರನ್ನು ಖುದ್ದು ಭೇಟಿ ಮಾಡಿ ಸಹಕರಿಸುವಂತೆ ಮನವಿ ಮಾಡಿಕೊಳ್ಳುತ್ತೇನೆ.
>
> –ಎ.ಆರ್. ಕೃಷ್ಣಮೂರ್ತಿ, ಕಾಂಗ್ರೆಸ್ ಅಭ್ಯರ್ಥಿ, ಕೊಳ್ಳೇಗಾಲ.

ಕೊಂಡೋತ್ಸವದಲ್ಲಿ ಬಿದ್ದು ತಂಬಡಿಗೆ ಗಾಯ



ಕೊಳ್ಳೇಗಾಲ, ಏ.6– ಮಾರಿ ಹಬ್ಬದ ಸಂದರ್ಭದಲ್ಲಿ ನಡೆದ ಕೊಂಡೋತ್ಸವದಲ್ಲಿ ಕಂಡಾಯ ಹೊತ್ತಿದ್ದ ತಂಬಡಿಯೊಬ್ಬರು ಕೆಂಡದ ಮೇಲೆ ಬಿದ್ದು ಗಾಯಗೊಂಡಿರುವ ಘಟನೆ ತಾಲೂಕಿನ ಲಕ್ಕರಸಪಾಳ್ಯದಲ್ಲಿ ಸಂಭವಿಸಿದೆ. ಕೆಂಪನಪಾಳ್ಯದ ತಂಬಡಿ ಮಲ್ಲಣ್ಣ ಎಂಬುವರೇ ಆಯತಪ್ಪಿ ಬಿದ್ದು ಗಾಯಗೊಂಡವರಾಗಿದ್ದು, ಅವರು ಸ್ಥಳೀಯ ಆಸ್ಪತ್ರೆಗೆ ಸೇರಿಸಲಾಗಿದೆ.

ಮುಕ್ತ ವಿವಿ ಪರೀಕ್ಷಾ ಶುಲ್ಕ ಪಾವತಿಗೆ ಅರ್ಜಿ ಆಹ್ವಾನ

ಚಾಮರಾಜನಗರ, ಏ.6– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ 2018–19ನೇ ಸಾಲಿನಿಂದ 2021–22ನೇ ಶೈಕ್ಷಣಿಕ ಸಾಲಿನವರೆಗೆ (ಜುಲೈ, ಜನವರಿ ಆವೃತ್ತಿ) ಮತ್ತು 2022–23ನೇ ಸಾಲಿನಲ್ಲಿ (ಜುಲೈ ಆವೃತ್ತಿ) ಪ್ರವೇಶಾತಿ ಪಡೆದಿರುವ ಸ್ನಾತಕ, ಸ್ನಾತಕೋತ್ತರ ಪದವಿಗಳಾದ ಯುಜಿ.ಪಿಜಿ ವಿದ್ಯಾರ್ಥಿಗಳಿಗೆ ಸಿ.ಬಿ.ಸಿ.ಎಸ್ ಮತ್ತು ನಾನ್ ಸಿ.ಬಿ.ಸಿ.ಎಸ್ ಪರೀಕ್ಷಾ ಶುಲ್ಕಗಳನ್ನು ಪಾವತಿಸಲು ಅರ್ಜಿ ಆಹ್ವಾನಿಸಿದೆ.

ದಂಡ ಶುಲ್ಕವಿಲ್ಲದೆ ಪಾವತಿಸಲು ಏ.24 ಕೊನೆಯ ದಿನವಾಗಿರುತ್ತದೆ. ಪರೀಕ್ಷಾ ಶುಲ್ಕ 200 ರೂ. ದಂಡ ಶುಲ್ಕದೊಂದಿಗೆ ಮೇ 3 ಕಡೆಯ ದಿನವಾಗಿದೆ. ವಿದ್ಯಾರ್ಥಿಗಳು ಅಧಿಕೃತ ವೆಬ್‌ಸೈಟ್ www.ksoumysuru.ac.in ನಲ್ಲಿ ಪರೀಕ್ಷಾ ಅರ್ಜಿ ಮತ್ತು ಪರೀಕ್ಷಾ ಶುಲ್ಕವನ್ನು ಎಲ್ಲಾ ಅಗತ್ಯ ವಿವರಗಳೊಂದಿಗೆ ಭರ್ತಿಮಾಡಿ ಕಡ್ಡಾಯವಾಗಿ ಅಂತರ್ಜಾಲದ ಆನ್‌ಲೈನ್ ಮೂಲಕವೇ ಸಲ್ಲಿಸಬೇಕು.

ಸದರಿ ಪರೀಕ್ಷೆಗಳು ಮೇ 18ರಿಂದ ಪ್ರಾರಂಭವಾಗುವುದು. ಪರೀಕ್ಷಾ ದಿನಾಂಕಗಳ ವೇಳಾಪಟ್ಟಿಯನ್ನು ವಿವಿ ನಿಲಯದ ಅಂತರ್ಜಾಲದಲ್ಲಿ ಮುಂದಿನ ದಿನಗಳಲ್ಲಿ ಪ್ರಕಟಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾಲಯದ ಅಧಿಕೃತ ವೆಬ್‌ಸೈಟ್ www.ksoumysuru.ac.in ನ ಆನ್‌ಲೈನ್ ಎಕ್ಸಾಮಿನೇಶನ್ ಪೋರ್ಟಲ್‌ನಲ್ಲಿ ಮಾಹಿತಿ ಲಭ್ಯವಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವಾಗ ತೊಂದರೆಗಳು ಎದುರಾದಲ್ಲಿ ಆನ್‌ಲೈನ್ ಸಹಾಯವಾಣಿ ಸಂಖ್ಯೆ: 8800335638 ಸಂಪರ್ಕಿಸಬಹುದು ಎಂದು ಚಾಮರಾಜನಗರದ ವಿಶ್ವವಿದ್ಯಾನಿಲಯ ಪ್ರಾದೇಶಿಕ ಕೇಂದ್ರ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಾಮರಾಜನಗರ; ಬಿಜೆಪಿ ಟಿಕೆಟ್ ಯಾರಿಗೆ?

ಸ್ಥಳೀಯರಿಗೋ, ಹೊರಗಿನವರಿಗೋ: ತೀವ್ರ ಕುತೂಹಲ

ಚಾಮರಾಜನಗರ, ಏ.6– ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯಾರಾಗಲಿದ್ದಾರೆ ಎಂಬುದು ತೀವ್ರ ಕುತೂಹಲಕ್ಕೆ ಎಡೆ ಮಾಡಿಕೊಟ್ಟಿದೆ.

ವಸತಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ವಿ. ಸೋಮಣ್ಣ ಅವರು ಈ ಕ್ಷೇತ್ರದಿಂದ ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸಿದ ನಂತರ ಅಭ್ಯರ್ಥಿ ಆಯ್ಕೆ ಪಕ್ಷದ ವರಿಷ್ಠರಿಗೆ ಕಗ್ಗಂಟಾಗಿ ಪರಿಣಮಿಸಿದೆ.

ವಿ. ಸೋಮಣ್ಣ ನನಗೆ ಟಿಕೆಟ್ ಬೇಕು ಎಂದು ಬಿಗಿ ಪಟ್ಟು ಹಿಡಿದಿದ್ದಾರೆ ಎನ್ನಲಾಗಿದೆ. ಹಾಗೆಯೇ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಆಪ್ತ ಬಳಗದಲ್ಲಿ ಗುರುತಿಸಿಕೊಂಡಿರುವ ಕೆಆರ್‌ಐಡಿಎಲ್ ಅಧ್ಯಕ್ಷ ಎಂ. ರುದ್ರೇಶ್ ಅವರ ಪರವಾಗಿ ಬಿಎಸ್‌ವೈ ಬ್ಯಾಟಿಂಗ್ ಮಾಡುತ್ತಿದ್ದಾರೆ ಎನ್ನಲಾಗಿದೆ. ಸಂಸದ ವಿ. ಶ್ರೀನಿವಾಸ ಪ್ರಸಾದ್ ಅವರು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷರೂ ಆದ ಮಾಜಿ ಶಾಸಕ ದಿ.ಜಿ. ಗುರುಸ್ವಾಮಿ ಅವರ ಪುತ್ರಿ ನಾಗಶ್ರೀ ಪ್ರತಾಪ್ ಅವರಿಗೆ ಟಿಕೆಟ್ ಕೊಡಿಸಲು ಪ್ರಯತ್ನಿಸುತ್ತಿದ್ದಾರೆ ಎಂಬ ಮಾತುಗಳು ಕ್ಷೇತ್ರಾದ್ಯಂತ ಕೇಳಿ ಬರುತ್ತಿದೆ.

ಇನ್ನುಳಿದಂತೆ ಇತರ ಆಕಾಂಕ್ಷಿಗಳು ತಮ್ಮ–ತಮ್ಮ ಗಾಡಫಾದರ್‌ಗಳ ಮೂಲಕ ಟಿಕೆಟ್ ಪಡೆಯಲು ಇನ್ನಿಲ್ಲದ ಕಸರತ್ತಿನಲ್ಲಿ ತೊಡಗಿದ್ದಾರೆ ಎನ್ನಲಾಗುತ್ತಿದೆ. ಬಿಜೆಪಿ ತನ್ನ ಅಭ್ಯರ್ಥಿಗಳ ಪಟ್ಟಿಯನ್ನು ಇನ್ನೂ ಸಹ ಬಿಡುಗಡೆ ಮಾಡದಿರುವುದು ಕುತೂಹಲ ಕೆರಳಿಸುವಂತೆ ಮಾಡಿದೆ. ಪತ್ರಕರ್ತರನ್ನು ಕಂಡೊಡನೆಯೇ ಸಾರ್ ಚಾಮರಾಜನಗರ ಬಿಜೆಪಿಯಿಂದ ಯಾರು ಸಾರ್ ಎಂಬ ಪ್ರಶ್ನೆ ಕೇಳುವುದು ಸಾಮಾನ್ಯವಾಗಿದೆ.

ಸ್ಥಳೀಯವಾಗಿ ಏಳೆಂಟು ಮಂದಿ ಪ್ರಬಲ ಆಕಾಂಕ್ಷಿಗಳಿರುವುದು ಪಕ್ಷದ ವರಿಷ್ಠರಿಗೆ ತಲೆ ಬಿಸಿ ತರಿಸಿದೆ. ಟಿಕೆಟ್ ಸ್ಥಳೀಯರಿಗೆ ಸಿಗುತ್ತದಾ? ವರಿಷ್ಠರು ಹೊರಗಿನ ವ್ಯಕ್ತಿಗಳಿಗೆ ಮಣೆ ಹಾಕುತ್ತಾರಾ? ಎಂಬುದು ಕುತೂಹಲಕ್ಕೆ ಎಡೆ ಮಾಡಿಕೊಟ್ಟಿದೆ.

ಚಾಮರಾಜನಗರ ಕ್ಷೇತ್ರದ ಬಿಜೆಪಿ ಟಿಕೆಟ್ ಯಾರಾ ಪಾಲಾಗುತ್ತದೆ ಎಂಬುದು ತೀವ್ರ ಚರ್ಚೆಗೆ ಗ್ರಾಸವಾಗಿದ್ದು, ಕುತೂಹಲಕ್ಕೆ ಕಾರಣವಾಗಿದೆ.

ನಂಜುಂಡಸ್ವಾಮಿ ನಿಧನ



ಚಾಮರಾಜನಗರ, ಏ.6– ತಾಲೂಕಿನ ಚಂದಕವಾಡಿ ಗ್ರಾಮದ ತೆಂಗಿನಕಾಯಿ ವ್ಯಾಪಾರಿ ನುಜುಂಡಸ್ವಾಮಿ (52) ಗುರುವಾರ ಬೆಳಗ್ಗೆ ನಿಧನರಾದರು.

ಮೃತರು ಪತ್ನಿ, ಮೂವರು ಪುತ್ರರು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಚಂದಕವಾಡಿ ಗ್ರಾಮದಲ್ಲಿ ಸಂಜೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮತದಾನಕ್ಕಿಂತ ಬೇರೊಂದಿಲ್ಲ, ಕಡ್ಡಾಯವಾಗಿ ಮತದಾನ ಮಾಡಿ

ಮತದಾನದ ಅರಿವು ಕುರಿತು ವಿದ್ಯಾರ್ಥಿಗಳ ಮೊಂಬತ್ತಿ ಜಾಥಾಕ್ಕೆ ಚಾಲನೆ



ಚಾಮರಾಜನಗರ, ಏ.6– ಮತದಾನದ ಅರಿವಿಗಾಗಿ ನಗರದ ವಿವಿಧ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಂದ ಮೊಂಬತ್ತಿ ಜಾಥಾ ನಗರದಲ್ಲಿ ನಡೆಯಿತು.

ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಜಿಲ್ಲಾಡಳಿತ, ಜಿಪಂ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಇವರ ಸಹಯೋಗದಲ್ಲಿ ಚಾಲನೆಗೊಂಡ ಜಾಥಾ ಜೋಡಿರಸ್ತೆ, ಭುವನೇಶ್ವರಿ ವೃತ್ತದ ಮೂಲಕ ಶ್ರೀಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಮುಕ್ತಾಯಗೊಂಡಿತು. ಕರ್ನಾಟಕ ಭವಿಷ್ಯ ನಿಮ್ಮ ಕೈಯಲ್ಲಿದೆ. ಕಡ್ಡಾಯವಾಗಿ ಮತದಾನ ಮಾಡಿ. ಜಾಥಾಕ್ಕೆ ಚಾಲನೆ ನೀಡಿದ ಜಿಪಂ ಸಿಇಓ ಪೂಜಿತ ಮಾತನಾಡಿ, ಮೇ 10 ರಂದು ಕರ್ನಾಟಕ ಸಾರ್ವತ್ರಿಕ ಚುನಾವಣೆ ಪ್ರಯುಕ್ತ ವಿವಿಧ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಂದ ಮೊಂಬತ್ತಿ ಜಾಥಾ ಹಮ್ಮಿಕೊಳ್ಳಲಾಗಿದೆ. ಕರ್ನಾಟಕ ಭವಿಷ್ಯ ನಿಮ್ಮ ಕೈಯಲ್ಲಿದೆ. ಪ್ರತಿಯೊಬ್ಬರು ಮೇ 10 ರಂದು ತಪ್ಪದೆ ಕಡ್ಡಾಯವಾಗಿ ಮತದಾನ ಮಾಡಬೇಕು ಎಂದು ಮನವಿ ಮಾಡಿದರು.

ಜಾಥಾದಲ್ಲಿ ಜಿಪಂ ಉಪ ಕಾರ್ಯದರ್ಶಿ ಸರಸ್ವತಿ, ಸಿಪಿಇಓ ಪ್ರಭುಸ್ವಾಮಿ, ತಾಪಂ ಸಿಓ ಪೂರ್ಣಿಮಾ, ಸಮಾಜ ಇಲಾಖೆಯ ಉಪ ನಿರ್ದೇಶಕ ಮಲ್ಲಿಕಾರ್ಜುನ, ಚಿಕ್ಕಬಸವಯ್ಯ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಉಪನಿರ್ದೇಶಕಿ ಮಂಜುಳ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾಧಿಕಾರಿ ಎಚ್.ಎಸ್.ಬಿಂದ್ಯ, ತಾಲೂಕು ವಿಸ್ತರಣಾಧಿಕಾರಿ ಮೋಹನ್ ರಾಜ್, ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಮಂಜುನಾಥ ಪ್ರಸನ್ನ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಮಂಜುನಾಥ್ ಹಾಜರಿದ್ದರು.

ದಾಖಲೆ ಇಲ್ಲದೆ ಸಾಗಿಸುತ್ತಿದ್ದ 12 ಲಕ್ಷ ರೂ. ವಶ

ಚಾಮರಾಜನಗರ, ಏ.6– ದಾಖಲೆ ಇಲ್ಲದೆ ಸಾಗಿಸಲಾಗುತ್ತಿದ್ದ 12 ಲಕ್ಷ ರೂಪಾಯಿಗಳನ್ನು ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಚಾಮರಾಜನಗರ ತಾಲೂಕಿನ ಬಾಣಹಳ್ಳಿ ಚೆಕ್‌ಪೋಸ್ಟ್ ನಲ್ಲಿ ವಶಕ್ಕೆ ಪಡೆಯಲಾಗಿದೆ.

ಇಂದು ಬೆಳಿಗ್ಗೆ 9 ಗಂಟೆ ಸಮಯದಲ್ಲಿ ಬಾಣಹಳ್ಳಿ ಚೆಕ್‌ಪೋಸ್ಟ್ ನಲ್ಲಿ ಸಂತೇಮರಹಳ್ಳಿ ಪೊಲೀಸ್ ಠಾಣೆಯ ಉಪ ನಿರೀಕ್ಷಕರು ಹಾಗೂ ಪೊಲೀಸ್ ಸಿಬ್ಬಂದಿ ವಾಹನಗಳ ತಪಾಸಣೆ ಮಾಡಿದ ವೇಳೆ ಬೈಕ್‌ವೊಂದರಲ್ಲಿ ಯಾವುದೇ ದಾಖಲಾತಿಗಳಿಲ್ಲದೇ 12 ಲಕ್ಷ ರೂ. ಸಾಗಿಸುತ್ತಿದ್ದುದು ಕಂಡು ಬಂತು. ಕೂಡಲೇ ಹಣ ಜಪ್ತಿ ಮಾಡಿ ಫ್ಲೈಯಿಂಗ್ ಸ್ಕ್ವಾಡ್ ತಂಡಕ್ಕೆ ಹಸ್ತಾಂತರಿಸಲಾಗಿದೆ.

ಪ್ರಜಾಪ್ರಭುತ್ವದ ಬಗ್ಗೆ ಹೆಚ್ಚು ಮಾತನಾಡುವ ಮೋದಿ ಸರ್ಕಾರ, ಮಾತಿನಂತೆ ನಡೆಯುವುದಿಲ್ಲ



ನವದೆಹಲಿ, ಏ.6– ಸರ್ಕಾರ ಪ್ರಜಾಪ್ರಭುತ್ವದ ಬಗ್ಗೆ ಹೆಚ್ಚು ಮಾತನಾಡುತ್ತದೆ. ಆದರೆ, ಅವರು ಹೇಳಿದ್ದು ಅವರ ಕಾರ್ಯಗಳಲ್ಲಿ ಕಾಣಿಸುತ್ತಿಲ್ಲ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು, ಪ್ರಧಾನಮಂತ್ರಿ ನರೇಂದ್ರ ಮೋದಿ ವಿರುದ್ಧ ಗುರುವಾರ ವಾಗ್ದಾಳಿ ನಡೆಸಿದ್ದಾರೆ. ದೆಹಲಿಯಲ್ಲಿ ಮಾಧ್ಯಮದವರನ್ನುದ್ದೇಶಿಸಿ ಮಾತನಾಡಿದ ಖರ್ಗೆ ಅವರು, ಬಜೆಟ್ ಅಧಿವೇಶನವನ್ನು ವ್ಯರ್ಥ ಮಾಡುವುದು ಸರ್ಕಾರದ ಉದ್ದೇಶವಾಗಿತ್ತು. ಸರ್ಕಾರ ಪ್ರಜಾಪ್ರಭುತ್ವದ ಬಗ್ಗೆ ಸಾಕಷ್ಟು ಮಾತನಾಡುತ್ತದೆ, ಆದರೆ ಅವರು ಹೇಳಿದಂತೆ ನಡೆಯುವುದಿಲ್ಲ. ಆದರೆ, ಪ್ರತಿಪಕ್ಷಗಳು ಪ್ರಜಾಪ್ರಭುತ್ವ ಮತ್ತು ಸಂವಿಧಾನಕ್ಕಾಗಿ ಒಗ್ಗಟ್ಟಿನಿಂದ ಹೋರಾಡುತ್ತಿವೆ ಎಂದು ಹೇಳಿದರು. 50 ಲಕ್ಷ ಕೋಟಿ ರೂಪಾಯಿಗಳ ಬಜೆಟ್ ಅನ್ನು ಕೇವಲ 12 ನಿಮಿಷಗಳಲ್ಲಿ ಅಂಗೀಕರಿಸಲಾಗಿದೆ, ಆದರೆ, ಸರ್ಕಾರ ಮಾತ್ರ ವಿರೋಧ ಪಕ್ಷಗಳಿಗೆ ಆಸಕ್ತಿಯಿಲ್ಲ ಎಂದು ಆರೋಪಿಸುತ್ತದೆ. ಈ ಮೂಲಕ ಸದನದಲ್ಲಿ ಗದ್ದಲ ಏರ್ಪಡುವಂತೆ ಮಾಡುತ್ತಾರೆ. ನಾವು ಬೇಡಿಕೆ ಇಟ್ಟಾಗಲೆಲ್ಲ ನಮಗೆ ಮಾತನಾಡಲು ಅವಕಾಶ ನೀಡಲಿಲ್ಲ. 52 ವರ್ಷಗಳ ನನ್ನ ಸಾರ್ವಜನಿಕ ಜೀವನದಲ್ಲಿ ಈ ರೀತಿ ನಡೆಯುತ್ತಿರುವುದು ಇದೇ ಮೊದಲು. ಈ ಹಿಂದೆಂದೂ ಈ ರೀತಿಯಾಗಿರಲಿಲ್ಲ ಎಂದು ಕಿಡಿಕಾರಿದರು. ಬಜೆಟ್ ಅಧಿವೇಶನವನ್ನು ವ್ಯರ್ಥ ಮಾಡುವುದು ಸರ್ಕಾರದ ಉದ್ದೇಶವಾಗಿತ್ತು. ಇದನ್ನು ನಾವು ಖಂಡಿಸುತ್ತೇವೆ. ಇದು ಹೀಗೆಯೇ ಮುಂದುವರೆದಿದ್ದೇ ಆದರೆ, ಪ್ರಜಾಪ್ರಭುತ್ವ ಅಂತ್ಯಗೊಳ್ಳುತ್ತದೆ. ನಾವು ಸರ್ವಾಧಿಕಾರದತ್ತ ಸಾಗುತ್ತೇವೆಂದು ಎಚ್ಚರಿಸಿದ್ದಾರೆ.

ಒಂದನೇ ಪುಟದಿಂದ

ಎರಡನೇ ಪಟ್ಟಿ ಪ್ರಕಟ

ಗುರುಮಿಠಕಲ್ ಕ್ಷೇತ್ರಕ್ಕೆ ಬಾಬುರಾವ್ ಚಿಂಚನಸೂರ ಅವರನ್ನು ಅಭ್ಯರ್ಥಿಯನ್ನಾಗಿ ಮಾಡಲಾಗಿದೆ. ಅವರು ಇತ್ತೀಚೆಗೆ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ್ದರು. ಭಾರೀ ಕುತೂಹಲಕ್ಕೆ ಕಾರಣವಾಗಿರುವ ಕೋಲಾರ ಮತ್ತು ಚನ್ನಪಟ್ಟಣದಲ್ಲಿ ಜೆಡಿಎಸ್‌ನ ಎಚ್.ಡಿ. ಕುಮಾರಸ್ವಾಮಿ ವಿರುದ್ಧ ಅಭ್ಯರ್ಥಿ ಯಾರು ಎಂಬ ಪ್ರಶ್ನೆಗೆ ಈ ಪಟ್ಟಿಯಲ್ಲಿ ಉತ್ತರ ಸಿಕ್ಕಿಲ್ಲ. ಎರಡನೇ ಪಟ್ಟಿಯಲ್ಲಿ ಒಕ್ಕಲಿಗ ಮತ್ತು ಲಿಂಗಾಯಿತ ಸಮುದಾಯಕ್ಕೆ ಸೇರಿದ ತಲಾ 11 ಮಂದಿಗೆ ಟಿಕೆಟ್ ದೊರೆತಿದೆ. ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ತಲಾ 4, ಕುರುಬ ಮತ್ತು ಮುಸ್ಲಿಂಗೆ ತಲಾ ಮೂರು ಮಂದಿಗೆ ಟಿಕೆಟ್ ದೊರೆತಿದೆ.

42 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರು

1.	ಚಾಮುಂಡೇಶ್ವರಿ	–ಸಿದ್ದೇಗೌಡ
2.	ಕೊಳ್ಳೇಗಾಲ	–ಎ.ಆರ್.ಕೃಷ್ಣಮೂರ್ತಿ
3.	ಮಡಿಕೇರಿ	–ಡಾ.ಮಂಥರ್ ಗೌಡ
4.	ಬೇಲೂರು	–ಬಿ.ಶಿವರಾಂ
5.	ಕೃಷ್ಣರಾಜಪೇಟೆ	–ಬಿ.ಎಲ್.ದೇವರಾಜ
6.	ಮಂಡ್ಯ	–ಪಿ.ರವಿಕುಮಾರ್
7.	ಮೇಲುಕೋಟೆ–ದರ್ಶನ್‌ಪುಟ್ಟಣ್ಣಯ್ಯಗೆ ಬೆಂಬಲ (ಸರ್ವೋದಯ ಪಕ್ಷ)	
8.	ಪದ್ಮನಾಭನಗರ	–ವಿ.ರಘುನಾಥ ನಾಯ್ಡು
9.	ಮಹಾಲಕ್ಷ್ಮೀ ಲೇಔಟ್	–ಎಸ್.ಬಾಲರಾಜಗೌಡ
10.	ಯಲಹಂಕ	–ಬಿ.ಕೇಶವರಾಜಣ್ಣ
11.	ಯಶವಂತಪುರ	–ಎಸ್.ಬಾಲರಾಜಗೌಡ
12.	ಗುಬ್ಬಿ	–ಎಸ್.ಆರ್.ಶ್ರೀನಿವಾಸ
13.	ತುಮಕೂರು ನಗರ	–ಇಕ್ಬಾಲ್ ಅಹ್ಮದ್
14.	ಕಡೂರು	–ಕೆ.ಎಸ್.ಆನಂದ
15.	ಉಡುಪಿ	–ಪ್ರಸಾದ್‌ರಾಜ ಕಾಂಚನ್
16.	ತೀರ್ಥಹಳ್ಳಿ	–ಕಿಮ್ಮಾನೆ ರತ್ನಾಕರ್
17.	ನಿಪ್ಪಾಣಿ	–ಕಾಕಾಸಾಹೇಬ್ ಪಾಟೀಲ್
18.	ಗೋಕಾಕ್	–ಮಹಾಂತೇಶ್ ಕಡಾಡಿ
19.	ಕಿತ್ತೂರು	–ಬಾಬು ಸಾಹೇಬ್ ಡಿ.ಪಾಟೀಲ್
20.	ಸವದತ್ತಿ ಯಲ್ಲಮ್ಮ	–ವಿಶ್ವಾಸ್ ವಸಂತ ವೈದ್ಯ
21.	ಮುಧೋಳ	–ಆರ್.ಬಿ.ತಿಮ್ಮಾಪೂರ್
22.	ಬೀಳಗಿ	–ಜೆ.ಟಿ.ಪಾಟೀಲ್
23.	ಬಾದಾಮಿ	–ಬಿ.ಬಿ.ಚಿಮ್ಮನಕಟ್ಟಿ
24.	ಬಾಗಲಕೋಟೆ	–ಹೆಚ್.ವೈ.ಮೇಟಿ
25.	ವಿಜಯಪುರ	–ಅಬ್ದುಲ್ ಹಮೀದ್ ಖಾಜಾಸಾಹೇಬ್
26.	ಅಫಜಲಪುರ	–ಎಂ.ವೈ.ಪಾಟೀಲ್
27.	ನಾಗಠಾಣ (ಎಸ್‌ಸಿ)	–ವಿಠ್ಠಲ್ ಕಟಕದೊಂಡ
28.	ಯಾದಗಿರಿ	–ಚನ್ನಾರೆಡ್ಡಿ ಪಾಟೀಲ್ ತುನ್ನೂರ್
29.	ಗುರುಮಿಠಕಲ್	–ಬಾಬುರಾವ್ ಚಿಂಚನಸೂರ್
30.	ಗುಲಬರ್ಗಾ ದಕ್ಷಿಣ	–ಅಲ್ಲಮಪ್ರಭು ಪಾಟೀಲ್
31.	ಬಸವಕಲ್ಯಾಣ	–ವಿಜಯ ಧರ್ಮಸಿಂಗ್
32.	ಗಂಗಾವತಿ	–ಇಕ್ಬಾಲ್ ಅನ್ಸಾರಿ
33.	ನರಗುಂದ	–ಬಿ.ಆರ್.ಯಾವಗಲ್
34.	ಧಾರವಾಡ	–ವಿನಯ್ ಕುಲಕರ್ಣಿ
35.	ಕಲಘಟಗಿ	–ಸಂತೋಷ್ ಲಾಡ್
36.	ಶಿರಸಿ	–ಭೀಮಣ್ಣ ನಾಯಕ್
37.	ಯಲ್ಲಾಪುರ	–ವಿ.ಎಸ್.ಪಾಟೀಲ್
38.	ಕೂಡ್ಲಿಗಿ	–ಡಾ.ಶ್ರೀನಿವಾಸ
39.	ಮೊಳಕಾಲ್ಮೂರು	–ಎನ್.ವೈ.ಗೋಪಾಲಕೃಷ್ಣ
40.	ಚಿತ್ರದುರ್ಗ	–ಕೆ.ಸಿ.ವಿರೇಂದ್ರ
41.	ಹೊಳಕೆರೆ	–ಹೆಚ್.ಆಂಜನೇಯ
42.	ಚನ್ನಗಿರಿ	–ಬಸವರಾಜು.ವಿ

ಯಾವತ್ತೂ ದೇಶವೇ ನಮಗೆ ಮೊದಲು

ಬೆಂಬಲಿಸುವುದಿಲ್ಲ ಎಂದು ಹೇಳಿದರು, ಈ ದೇಶದಲ್ಲಿರುವ ಭ್ರಷ್ಟಾಚಾರ, ಸ್ವಜನಪಕ್ಷಪಾತ ಮತ್ತು ಕಾನೂನು–ಸುವ್ಯವಸ್ಥೆಗೆ ಇರುವ ಸವಾಲುಗಳ ವಿರುದ್ಧ ಹೋರಾಡುವುದು ಬಿಜೆಪಿಯ ಗಟ್ಟಿ ನಿರ್ಧಾರ. ಇದಕ್ಕಾಗಿ ನಾವು ಹನುಮಂತನಿಂದ ಸ್ಫೂರ್ತಿ–ಶಕ್ತಿ ಪಡೆದಿದ್ದೇವೆ. ನಾವೂ ಕೂಡ ಹನುಮಂತನಂತೆ ಕೆಲವೊಮ್ಮೆ ಕಠಿಣವಾಗಬಹುದು. ಆದರೆ, 0ಯಾವತ್ತೂ ದೇಶವೇ ನಮಗೆ ಮೊದಲು. ದೇಶದ ಒಳಿತಿಗಾಗಿ ಒಂದಷ್ಟು ನಿರ್ಧಾರ ತೆಗೆದುಕೊಳ್ಳುವಾಗ ಕಠಿಣ ಎನ್ನಿಸಬಹುದು ಎಂದು ತಿಳಿಸಿದರು.

ಇದೇ ವೇಳೆ ಮೋದಿ ತೇರಿ ಕಬ್ರ ಖುದೇಗಿ' (ಮೋದಿ, ನಿಮಗೆ ಸಮಾಧಿ ತೋಡಲಾಗುತ್ತದೆ) ಎಂಬ ಘೋಷಣೆಯನ್ನು ಉಲ್ಲೇಖಿಸಿ ವಾಗ್ದಾಳಿ ನಡೆಸಿದ ಮೋದಿಯವರು, ಪ್ರತಿಪಕ್ಷಗಳು ತೀವ್ರ ಹತಾಶೆಗೀಡಾಗಿವೆ. ಏನೇ ಮಾಡಿದರೂ, 2024ರ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಲು ಸಾಧ್ಯವೇ ಇಲ್ಲ ಎಂಬುದು ಅವರಿಗೆ ತಿಳಿದಿದೆ. ಮನಸ್ಸಿನಲ್ಲಿ ವಿಷವನ್ನೇ ತುಂಬಿಕೊಂಡವರು ಸುಳ್ಳುಗಳನ್ನು ಬಿತ್ತರಿಸುತ್ತಿದ್ದಾರೆ. ಹತಾಶೆಗೆ ಒಳಗಾದವರು ಮೋದಿ ನಿಮ್ಮ ಸಮಾಧಿ ತೆಗೆಯುತ್ತೇವೆ ಎಂದು ಕೂಗುತ್ತಿದ್ದಾರಷ್ಟೇ ಎಂದರು. ನಾವು ನಮ್ಮನ್ನು ಭಾರತ ಮಾತೆಗೆ, ಇಲ್ಲಿನ ಸಂವಿಧಾನಕ್ಕೆ ಮತ್ತು ಕೋಟ್ಯಂತರ ನಾಗರಿಕರಿಗೆ ಅರ್ಪಿಸಿಕೊಂಡಿದ್ದೇವೆ. ನಮ್ಮದು ದೊಡ್ಡ ಕನಸು ಇರುವ ರಾಜಕೀ0ಯ ಸಂಸ್ಕೃತಿ. ಅದನ್ನು ನೆರವೇರಿಸಿಕೊಳ್ಳಲು ಪ್ರಯತ್ನ ಮಾಡುತ್ತಿದ್ದೇವೆ. ನಾವು ಕಾಂಗ್ರೆಸ್ಸಿಗರಂತೆ ಅಲ್ಲ. ಮಹಿಳೆಯರ ಕಲ್ಯಾಣ ನಮ್ಮ ಆದ್ಯತೆ. ಮುಂದಿನ 25 ವರ್ಷಗಳಿಗಾಗಿ ನಾವು ಗುರಿಯನ್ನು ಹೊಂದಿದ್ದೇವೆ. ಅದನ್ನು ಈಡೇರಿಸಿಕೊಳ್ಳಲು ನಮ್ಮ ಪಕ್ಷದ ಪಂಚಾಯಿತಿ ಮಟ್ಟದ ಕಾ0ರ್ಯಕರ್ತರಿಂದ ಹಿಡಿದು, ಸಂಸತ್ತಿನ ಮಟ್ಟದ ಕಾ0ರ್ಯಕರ್ತರವರೆಗೆ ಎಲ್ಲರಿಗೂ ಸೂಕ್ತ ತರಬೇತಿ ಕೊಡುತ್ತಿದ್ದೇವೆ? ಎಂದು ಹೇಳಿದರು.

ಪ್ರಜ್ವಲಿಸುವುದೇ ಚುನಾವಣೆಗಳಿಂದ...!

ತೆರಳಲು ಸಾಧ್ಯವಾಗದ ವೃದ್ಧರಿಗೆ ಅಂಚೆ ಮತದಾನಕ್ಕೆ ಅವಕಾಶ ಕಲ್ಪಿಸಿದ್ದು, ಈ ಬಾರಿ ಚುನಾವಣೆಯಲ್ಲಿ ಮತದಾನದ ಪ್ರಮಾಣ ಹೆಚ್ಚಿಸಲು ಕೆಲವು ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದ ಜಿಲ್ಲಾಧಿಕಾರಿಗಳು ಎಲ್ಲರೂ ತಪ್ಪದೇ ಮತದಾನ ಮಾಡುವಂತೆ ಸಲಹೆ ನೀಡಿದರು. ಚುನಾವಣಾ ಅಕ್ರಮ, ಪ್ರಚಾರದ ಬಗ್ಗೆ ಯಾವುದೇ ಲೋಪ ಕಂಡುಬಂದಲ್ಲಿ ಸಿ–ವಿಜಿಲ್ ಅಪ್ಲಿಕೇಷನ್ ಮೂಲಕ ಮಾಹಿತಿ ನೀಡಿದರೆ ತಕ್ಷಣ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಕ್ರಮ ಕೈಗೊಳ್ಳುವರು. ದೂರುದಾರರ ಮಾಹಿತಿಯನ್ನು ಗುಪ್ತವಾಗಿರಿಸುವುದರಿಂದ ಸಾರ್ವಜನಿಕರು ಆ್ಯಪ್ ಮೂಲಕ ದೂರು ನೀಡುವಂತೆ ಡಾ. ಕೆ.ವಿ.ರಾಜೇಂದ್ರ ಅವರು ಇದೇ ಸಂದರ್ಭ ತಿಳಿಸಿದರು. ಮತದಾರರ ಜಾಗೃತಿ ಅಭಿಯಾನದ ಪೋಸ್ಟರ್ ಬಿಡುಗಡೆ ಮಾಡಿದ ಗಣ್ಯರು, ಇದೇ ವೇಳೆ ಮತದಾನದ ಬಗ್ಗೆ ಪ್ರತಿಜ್ಞಾ ವಿಧಿ ಸ್ವೀಕರಿಸಿದರು. ಅದೇ ರೀತಿ ಸಹಿ ಅಭಿಯಾನ, ಸೆಲ್ಫಿ ಪಾಯಿಂಟ್‌ನಲ್ಲಿ ನಿಂತು ಬೆರಳು ತೋರಿಸುವ ಮೂಲಕ ಮತದಾನ ಮಾಡುವಂತೆ ಪ್ರೇರೇಪಿಸಿದರು. ಮಹಾ ನಗರ ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯಿತ್ರಿ, ಎಸ್ಪಿ ಸೀಮಾ ಲಾಟ್ಕರ್, ಹೆರಿಟೇಜ್ ಕಮೀಷ್ನರ್ ದೇವರಾಜ್, ಡಿಸಿಪಿ ಎಂ.ಮುತ್ತುರಾಜ್, ವಿವಿಧ ಕಾಲೇಜು ವಿದ್ಯಾರ್ಥಿಗಳು, ಪ್ಯಾರಾ ಮೆಡಿಕಲ್ ವಿದ್ಯಾರ್ಥಿಗಳು, ನರ್ಸಿಂಗ್ ವಿದ್ಯಾರ್ಥಿಗಳು, ಜಾನಪದ ಕಲಾ ತಂಡಗಳು, ವಿವಿಧ ಇಲಾಖೆಗಳ ಅಧಿಕಾರಿಗಳು ಅಭಿಯಾನದಲ್ಲಿ ಪಾಲ್ಗೊಂಡಿದ್ದರು.

ಮುಂಬರುವ ಎರಡು ವರ್ಷಗಳಲ್ಲಿ ಮೈಸೂರು, ಚಾಮರಾಜನಗರ ಜಿಲ್ಲೆ ಕ್ಷಯರೋಗ ಮುಕ್ತಗೊಳಿಸಲು

ಕ್ಯಾಪ್ ಟಿಬಿ ಯೋಜನೆ ಅನುಷ್ಠಾನಕ್ಕೆ ಚಾಲನೆ



ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಕ್ಯಾಪ್ ಟಿಬಿ ಯೋಜನೆಯ ಅನುಷ್ಠಾನಕ್ಕೆ ಗುರುವಾರ ಚಾಲನೆ ನೀಡಲಾಯಿತು.

ಕಳೆದ 2022ರ ಜನವರಿಯಿಂದ ಇದೇ ವರ್ಷದ ಡಿಸೆಂಬರ್‌ವರೆಗೆ ಮೈಸೂರು ಜಿಲ್ಲೆಯಲ್ಲಿ ಒಟ್ಟು 4,066 ಕ್ಷಯ ರೋಗಿಗಳನ್ನು ಗುರುತಿಸಲಾಗಿದೆ. ಹೆಚ್‌ಡಿ ಕೋಟೆ ತಾಲೂಕಿನಲ್ಲಿ 206, ಹುಣಸೂರಲ್ಲಿ 120, ಕೆಆರ್ ನಗರದಲ್ಲಿ 115, ಮೈಸೂರಿನಲ್ಲಿ 3,244, ನಂಜನಗೂಡಿನಲ್ಲಿ 184, ಪಿರಿಯಾಪಟ್ಟಣದಲ್ಲಿ 76 ಮತ್ತು ತಿ.ನರಸೀಪುರದಲ್ಲಿ 121 ಮಂದಿ ಕ್ಷಯರೋಗಿಗಳನ್ನು ಗುರುತಿಸಲಾಗಿದೆ.

ಮೈಸೂರು,ಏ.6(ಪಿಎಂ)– ಕೊಲಾಬ್ರೇಷನ್ ಟು ಎಲಿಮಿನೇಟ್ ಟ್ಯೂಬರ್ ಕ್ಯುಲೋಸಿಸ್ ಅಮಾಂಗ್ ಇಂಡಿಯನ್ಸ್ (ಸಿಟಿ), ಆಶ್ರಯ ಹಸ್ತ ಟ್ರಸ್ಟ್ ಹಾಗೂ ಕೇಂದ್ರ ಸರ್ಕಾರದ ನ್ಯಾಷನಲ್ ಟ್ಯೂಬರ್ ಕ್ಯುಲೋಸಿಸ್ ಎಲಿಮಿನೇಷನ್ ಪ್ರೋಗ್ರಾಮ್ ಸಂಯುಕ್ತಾಶ್ರಯದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳನ್ನು ಕ್ಷಯರೋಗ ಮುಕ್ತಗೊಳಿಸುವ ಮಹತ್ವದ ಯೋಜನೆಗೆ ಗುರುವಾರ ಚಾಲನೆ ನೀಡಲಾಯಿತು.

ಕಳೆದ ಎರಡು ತಿಂಗಳಿಂದ ಪೂರ್ವಸಿದ್ಧತೆ ನಡೆಸಿ ಇದೀಗ ಅಧಿಕೃತವಾಗಿ ಯೋಜನೆ ಕೈಗೆತ್ತಿಕೊಳ್ಳಲಾಗಿದ್ದು, ಪ್ರಾಯೋಗಿಕ ಯೋಜನೆಯಾಗಿ ಈ ಎರಡು ಜಿಲ್ಲೆಗಳಲ್ಲಿ ಕ್ಷಯರೋಗ ಮುಕ್ತಗೊಳಿಸುವ ಕಾರ್ಯ ಚಟುವಟಿಕೆ ಆರಂಭಿಸಲಾಗುತ್ತಿದೆ. ಅದರಂತೆ ಮೊದಲ ಹಂತದಲ್ಲಿ ಮೈಸೂರು ಜಿಲ್ಲೆಯ ಕೆಆರ್ ನಗರ, ಪಿರಿಯಾಪಟ್ಟಣ ಮತ್ತು ತಿ.ನರಸೀಪುರ ತಾಲೂಕುಗಳು ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ ಚಾಮರಾಜನಗರ, ಕೊಳ್ಳೇಗಾಲ, ಗುಂಡ್ಲುಪೇಟೆ ತಾಲೂಕುಗಳಲ್ಲಿ ಕ್ಷಯರೋಗ ತೊಡೆದು ಹಾಕಲು ಕಾರ್ಯತಂತ್ರ ರೂಪಿಸಲಾಗಿದೆ. ಕ್ಷಯರೋಗ ನಿರ್ಮೂಲನೆಗೆ ಪಿಡಿಎಸ್‌ಎ ಸಮಗ್ರವಿಧಾನದ(ಸಿಎಪಿ–ಟಿಬಿ ಯೋಜನೆ/ಕ್ಯಾಪ್ ಟಿಬಿ) ಮೂಲಕ ಕಾರ್ಯ ಚಟುವಟಿಕೆ ಆರಂಭಿಸಲು ನಿರ್ಧರಿಸಲಾಗಿದೆ.

ಮೈಸೂರಿನ ಮಹಾತ್ಮ ಗಾಂಧಿ ರಸ್ತೆಯ ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಸದರಿ ಪ್ರಾಯೋಗಿಕ ಯೋಜನೆಯ ಅನುಷ್ಠಾನಕ್ಕೆ ಇನ್ಫೋಸಿಸ್‌ನ ಸಹ ಸಂಸ್ಥಾಪಕರೂ ಆದ ಆಶ್ರಯ ಹಸ್ತ ಟ್ರಸ್ಟ್‌ನ ಸಂಸ್ಥಾಪಕ ಕೆ.ದಿನೇಶ್ ಚಾಲನೆ ನೀಡಿದರು. ಮುಂಬರುವ ಎರಡು ವರ್ಷಗಳ ಒಳಗೆ ಎರಡೂ ಜಿಲ್ಲೆಗಳನ್ನು ಈ ಯೋಜನೆಯಡಿ ಕ್ಷಯರೋಗ ಮುಕ್ತಗೊಳಿಸುವ ಗುರಿ ಹೊಂದಲಾಗಿದೆ. ಇದೇ ವೇಳೆ ಯೋಜನೆ ಅನುಷ್ಠಾನ ಸಂಬಂಧ ಆರೋಗ್ಯ ಇಲಾಖೆ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ಸರ್ಕಾರೇತರ ಸಂಘ–ಸಂಸ್ಥೆಗಳ ಪ್ರತಿನಿಧಿಗಳ ಸಭೆಯೂ ನಡೆಯಿತು.

ಕಾರ್ಯಕ್ರಮದಲ್ಲಿ ಅತಿಥಿಯಾಗಿ ಪಾಲ್ಗೊಂಡಿದ್ದ ಮೈಸೂರು ಜಿಪಂ ಸಿಇಓ ಕೆ.ಎಂ.ಗಾಯಿತ್ರಿ ಮಾತನಾಡಿ, ಕ್ಷಯಮುಕ್ತ ಭಾರತ ಯೋಜನೆಯಲ್ಲಿ ವೈದ್ಯರು, ಸರ್ಕಾರೇತರ ಸಂಘ–ಸಂಸ್ಥೆಗಳು ಮತ್ತು ಜಿಲ್ಲಾಡಳಿತ ಸೇರಿ ವ್ಯವಸ್ಥಿತವಾಗಿ ಕಾರ್ಯತಂತ್ರ ಅನುಷ್ಠಾನಗೊಳಿಸಿದರೆ ಕ್ಷಯರೋಗ ತೊಡೆದು ಹಾಕಲು ಸಾಧ್ಯವಾಗಲಿದೆ. ದಿಢೀರ್ ಎಂದು ಎದುರಾದ ಕೋವಿಡ್ ಅನ್ನೇ ಎದುರಿಸಿದ್ದೇವೆ. ಹಾಗಾಗಿ ಕ್ಷಯ ಹೋಗಲಾಡಿಸಲೂ ನಮ್ಮಲ್ಲಿ ಶಕ್ತಿ ಇದೆ. ಆದರೆ ಇಚ್ಛಾಸಕ್ತಿ ಪ್ರದರ್ಶಿಸಬೇಕಿದೆಯಷ್ಟೇ ಎಂದು ಹೇಳಿದರು.

ಚಾಮರಾಜನಗರದಲ್ಲಿ ನಾನು ಸಿಇಓ ಆಗಿದ್ದಾಗ ಕ್ಷಯಮುಕ್ತಗೊಳಿಸುವ ಚಟುವಟಿಕೆಗೆ ಸಂಬಂಧ ಬುಡಕಟ್ಟು ಪ್ರದೇಶಗಳನ್ನು ಆಯ್ಕೆ ಮಾಡಿಕೊಟ್ಟಿದ್ದೆ. ಈ ಪ್ರದೇಶದಲ್ಲಿ ಕ್ಷಯರೋಗ ಕಾಣಿಸುವುದು ಹೆಚ್ಚಿದೆ. ಅಲ್ಲದೆ, ಪ್ರಧಾನಮಂತ್ರಿ ಟಿಬಿ ಮುಕ್ತ ಭಾರತ ಅಭಿಯಾನದಡಿಯ ನಿ–ಕ್ಷಯ ಮಿತ್ರ ಯೋಜನೆಯಡಿ ಕ್ಷಯ ರೋಗಿಗಳನ್ನು ದತ್ತು ಸ್ವೀಕಾರಕ್ಕೆ ಹೆಚ್ಚು ಒತ್ತು ನೀಡಲಾಗಿತ್ತು. ಅನುಕೂಲಸ್ಥ ನಾಗರಿಕರು ಬಡರೋಗಿಗಳನ್ನು ದತ್ತು ಪಡೆದು ಪೌಷ್ಟಿಕ ಆಹಾರ ಪೂರೈಸುವುದು ಈ ಯೋಜನೆಯ ಪಾಕ್ಷಿಕೆಯಾಗಿದೆ ಎಂದು.

ದತ್ತು ಪಡೆದ ರೋಗಿಗಳಿಗೆ 6 ತಿಂಗಳವರೆಗೆ ಪೌಷ್ಟಿಕ ಆಹಾರ ಪೂರೈಸುವ ಕಾರ್ಯಕ್ರಮ ಇದಾಗಿದೆ. ಇದಕ್ಕೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಮುಂದೆ ಬರಲಿ ಎಂಬ ಕಾರಣಕ್ಕಾಗಿ ಚಾಮರಾಜನಗರದಲ್ಲಿ ವೈಯಕ್ತಿಕವಾಗಿ ನಾನು ಮತ್ತು ಹಿಂದಿನ ಚಾಮರಾಜನಗರ ಜಿಲ್ಲಾಧಿಕಾರಿಗಳು ಹಲವು ರೋಗಿಗಳನ್ನು ದತ್ತು ಸ್ವೀಕಾರ ಮಾಡಿದ್ದೆವು. ಮೈಸೂರಿನಲ್ಲೂ ಈ ದತ್ತು ಯೋಜನೆಗೆ ಉತ್ತೇಜನ ನೀಡಬೇಕು. ಆ ಮೂಲಕ ಟಿಬಿಯಿಂದ ನರಳುವವರಿಗೆ ನೆರವಾಗಲು ಎಲ್ಲರೂ ಕೈಜೋಡಿಸುವಂತಾಗಬೇಕು ಎಂದು ತಿಳಿಸಿದರು.

ಕ್ಷಯರೋಗ ಮುಕ್ತಗೊಳಿಸಲು ಬುಡಕಟ್ಟು ಪ್ರದೇಶದಲ್ಲಿ ವಿಶೇಷ ಒತ್ತು ನೀಡಬೇಕಾಗುತ್ತದೆ. ಮೊದಲಿಗೆ ಸರ್ವೇ, ಬಳಿಕ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಯೋಜನೆ ರೂಪಿಸಬೇಕಾಗುತ್ತದೆ. ಇದಕ್ಕೆ ಜಿಲ್ಲಾ ಪಂಚಾಯಿತಿಯಿಂದ ಸಂಪೂರ್ಣ ಸಹಕಾರ ನೀಡಲಾಗುವುದು ಎಂದು ಹೇಳಿದರು.

ಸಿಎಪಿ–ಟಿಬಿ ಯೋಜನೆಯ ಉದ್ದೇಶ, ಸಾಧನೆ ಮತ್ತು ಗುರಿಗಳ ಕುರಿತು ಭಾರತೀಯ ನೌಕಾಪಡೆಯ ನಿವೃತ್ತ ಸೇನಾಧಿಕಾರಿಯೂ ಆದ ಸಿಎಪಿ–ಟಿಬಿ ಯೋಜನೆಯ ಯೋಜನಾಧಿಕಾರಿ ಕಮೋಡೋರ್ ರಾಮನ್ ಅರೋನಾ ಅವರು ಮಾಹಿತಿ ನೀಡಿದರು. ಆಶ್ರಯ ಹಸ್ತ ಟ್ರಸ್ಟ್‌ನ ಸಂಸ್ಥಾಪಕ ಕೆ.ದಿನೇಶ್ ಅವರ ಪತ್ನಿ ಆಶಾ ದಿನೇಶ್, ಕರ್ನಾಟಕ ರಾಜ್ಯ ಕ್ಷಯರೋಗ ನಿರ್ಮೂಲನಾ ಅಧಿಕಾರಿ ಡಾ.ಎಸ್.ಅನಿಲ್, ಆರೋಗ್ಯ ಇಲಾಖೆ ಮೈಸೂರು ವಿಭಾಗೀಯ ಜಂಟಿ ನಿರ್ದೇಶಕಿ ಡಾ.ರಾಜೇಶ್ವರಿ ದೇವಿ, ಮೈಸೂರು ಜಿಲ್ಲಾ ಕ್ಷಯರೋಗ ನಿರ್ಮೂಲನಾ ಅಧಿಕಾರಿ ಡಾ.ಮೊಹಮ್ಮದ್ ಶಿರಾಜ್ ಅಹಮದ್, ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಪ್ರಾಂಶುಪಾಲ ಡಾ.ಬಸವನಗೌಡಪ್ಪ, ರಘುಲಾಲ್ ಫಾರ್ಮಾ ಕಂಪನಿ ಮಾಲೀಕ ರಾಘವನ್ ಸೇರಿದಂತೆ ಮತ್ತಿತರರು ಹಾಜರಿದ್ದರು.

'ನಿ–ಕ್ಷಯ ಮಿತ್ರ'ದಡಿ ಮೈಸೂರು ಜಿಲ್ಲೆಯಲ್ಲಿ ಸುಮಾರು 900 ಕ್ಷಯರೋಗಿಗಳ ದತ್ತು ಸ್ವೀಕಾರ

ಮೈಸೂರು,ಏ.6(ಪಿಎಂ)– ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳನ್ನು ಕ್ಷಯರೋಗ ಮುಕ್ತಗೊಳಿಸುವ ಯೋಜನೆ ಸಂಬಂಧ 'ಸಿಟಿ' ಎನ್‌ಜಿಓ ವತಿಯಿಂದ ಚಟುವಟಿಕೆಗಳು ಆಯೋಜನೆಗೊಳ್ಳಲಿವೆ. ಅಗತ್ಯ ಹಣಕಾಸು ನೆರವನ್ನು ಆಶ್ರಯ ಹಸ್ತ ಟ್ರಸ್ಟ್ ನೀಡಲಿದೆ. ಸಿಟಿ ವತಿಯಿಂದ ಮೊದಲಿಗೆ ಅರಿವು ಮೂಡಿಸುವ ಕಾರ್ಯಚಟುವಟಿಕೆಗಳನ್ನು ನಡೆಸಿ, ಬಳಿಕ ಆರೋಗ್ಯ ಇಲಾಖೆ ಸಹಯೋಗದೊಂದಿಗೆ ತಪಾಸಣೆ ಕೈಗೊಳ್ಳಲಾಗುತ್ತದೆ ಎಂದು ಮೈಸೂರು ಜಿಲ್ಲಾ ಕ್ಷಯರೋಗ ನಿರ್ಮೂಲನಾ ಅಧಿಕಾರಿ ಡಾ.ಮೊಹಮ್ಮದ್ ಶಿರಾಜ್ ಅಹಮದ್ ತಿಳಿಸಿದರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಕಳೆದ ವರ್ಷ ಮೈಸೂರು ಜಿಲ್ಲೆಯಲ್ಲಿ 4,066 ಕ್ಷಯರೋಗ ಪ್ರಕರಣ ಪತ್ತೆಯಾಗಿವೆ. ಪ್ರಧಾನಮಂತ್ರಿ ಕ್ಷಯಮುಕ್ತ ಭಾರತ ಅಭಿಯಾನ ಅಡಿಯಲ್ಲಿ ಕ್ಷಯರೋಗಿಗಳಿಗೆ ಉಚಿತ ಚಿಕಿತ್ಸೆ ಲಭ್ಯವಿದೆ. ಜೊತೆಗೆ ರೋಗಿಗಳನ್ನು ದತ್ತು ತೆಗೆದುಕೊಂಡು ಆರು ತಿಂಗಳವರೆಗೆ ಪೌಷ್ಟಿಕ ಆಹಾರ ಸಾಮಗ್ರಿ ಒದಗಿಸಲೂ ನಿ–ಕ್ಷಯಮಿತ್ರ ಕಾರ್ಯಕ್ರಮದಲ್ಲಿ ಅವಕಾಶವಿದೆ. ಪ್ರಸ್ತುತ ಮೈಸೂರು ಜಿಲ್ಲೆಯಲ್ಲಿ ಸುಮಾರು 2 ಸಾವಿರ ಕ್ಷಯರೋಗಿಗಳು ಚಿಕಿತ್ಸೆಯಲ್ಲಿದ್ದು, ಈ ಪೈಕಿ ಸುಮಾರು 900 ರೋಗಿಗಳನ್ನು ನಾಗರಿಕರು ನಿ–ಕ್ಷಯ ಮಿತ್ರದಡಿ ದತ್ತು ಪಡೆದಿದ್ದಾರೆ. ಇದರಲ್ಲಿ ವೈಯಕ್ತಿಕವಾಗಿ ನಾನು 20 ಮಂದಿ ದತ್ತು ಪಡೆದಿದ್ದೇನೆ. ರಘುಲಾಲ್ ಫಾರ್ಮಸಿ ಕಂಪನಿಯಿಂದ 500 ಮಂದಿ ದತ್ತು ಪಡೆಯಲಾಗಿದೆ ಎಂದು ಹೇಳಿದರು.

ಪೂರ್ಣ ಪ್ರಮಾಣದಲ್ಲಿ ಬಿಜೆಪಿ ಅಧಿಕಾರ ಹಿಡಿದರೆ ರಾಜ್ಯದ ಸಮಗ್ರ ಅಭಿವೃದ್ಧಿ

● ಕೆ.ಆರ್.ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್ ಮನವಿ ● ಬಿಜೆಪಿ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಪಕ್ಷದ ತತ್ವ ಸಿದ್ಧಾಂತ ಮನವರಿಕೆ



ಮೈಸೂರು,ಏ.6(ಎಂಟಿವೈ)– ರಾಜ್ಯದ ಸಮಗ್ರ ಅಭಿವೃದ್ಧಿಯಾಗಬೇಕಾದರೆ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪೂರ್ಣ ಪ್ರಮಾಣದ ಬಿಜೆಪಿ ಸರ್ಕಾರ ರಚನೆಗೆ ಬೆಂಬಲ ನೀಡುವಂತೆ ಶಾಸಕ ಎಸ್.ಎ.ರಾಮದಾಸ್ ಮನವಿ ಮಾಡಿದ್ದಾರೆ.

ಮೈಸೂರಿನ ಕೆ.ಆರ್.ಕ್ಷೇತ್ರ ವ್ಯಾಪ್ತಿಯ ಜಯನಗರ ಬಡಾವಣೆಯಲ್ಲಿ ಗುರುವಾರ ನಡೆದ ಬಿಜೆಪಿ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ತನ್ನದೇ ಆದ ತತ್ವ ಸಿದ್ಧಾಂತವನ್ನು ಹೊಂದಿರುವ ಬಿಜೆಪಿ ದೇಶದ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ, ರಾಜ್ಯದಲ್ಲಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಜನಪರವಾದ ಹಲವು ಮಹತ್ತರ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ದೇಶ ಹಾಗೂ ರಾಜ್ಯದ ಅಭಿವೃದ್ಧಿಗೆ ತನ್ನದೇ ಆದ ಕೊಡುಗೆ ನೀಡುತ್ತಿದೆ. ಈ ಅಭಿವೃದ್ಧಿಯ ಪರ್ವ ಮುಂದುವರೆಯಬೇಕಾದರೆ, ಮುಂಬರುವ ಚುನಾವಣೆಯಲ್ಲೂ ಬಿಜೆಪಿಗೆ ಜನ ಬೆಂಬಲ ನೀಡಬೇಕು. ಪೂರ್ಣ ಪ್ರಮಾಣದ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದರೆ ನಾಡಿನ ಏಳಿಗೆಗೆ ಇನ್ನಷ್ಟು ಕಾರ್ಯಕ್ರಮ ರೂಪಿಸಲು ಸಾಧ್ಯವಾಗುತ್ತದೆ ಎಂದರು.

ಬಿಜೆಪಿ ತತ್ವ ಹಾಗೂ ಸಿದ್ಧಾಂತದ ಮೇಲೆ ನಿಂತಿರುವ ಪಕ್ಷವಾಗಿದ್ದು, ಅದಕ್ಕೆ ಶ್ಯಾಮ್ ಪ್ರಸಾದ್ ಮುಖರ್ಜಿ ಹಾಗೂ ದೀನ ದಯಾಳ್ ಉಪಾಧ್ಯಾಯ ಅವರಂತಹ ಮೇರು ವ್ಯಕ್ತಿಗಳು ಭದ್ರ ಬುನಾದಿ ಹಾಕಿಕೊಟ್ಟಿದ್ದಾರೆ. ಮಹನೀಯರು ಹಾಕಿಕೊಟ್ಟ ಮಾರ್ಗದಲ್ಲೇ ಪ್ರಧಾನಿ ನರೇಂದ್ರ ಮೋದಿಯವರು ಸಾಗುತ್ತಿದ್ದಾರೆ. ಇದರಿಂದ ಭಾರತ ವಿಶ್ವದ ವಿವಿಧ ರಾಷ್ಟ್ರಗಳ ಗಮನ ಸೆಳೆಯಲು ಸಾಧ್ಯವಾಗಿದೆ. ದಿಟ್ಟವಾದ ರಾಜನೀತಿಯೂ ಭಾರತವನ್ನು ಜಾಗತಿಕ ಮಟ್ಟದಲ್ಲಿ ಇನ್ನಷ್ಟು ಪ್ರಬಲಗೊಳಿಸಿದೆ. ಇದಕ್ಕೆ ಬಿಜೆಪಿ ಸರ್ಕಾರದ ಬದ್ಧತೆಯೇ ಕಾರಣ ಎಂದು ತಿಳಿಸಿದರು.

ದೇಶದ ರಕ್ಷಣೆಗಾಗಿ ಅನೇಕರು ಪ್ರಾಣ ತ್ಯಾಗ ಮಾಡಿದ್ದಾರೆ. ಅವರೆಲ್ಲರ ತ್ಯಾಗಕ್ಕೆ ಗೌರವ ಸೂಚಿಸಲು ನಾವೆಲ್ಲರೂ ದೇಶ ಕಟ್ಟುವ ಕೆಲಸ ಮಾಡಬೇಕಾಗಿದೆ. ದೇಶ ಕಟ್ಟುವುದಕ್ಕಾಗಿಯೇ ಬಿಜೆಪಿ ಶ್ರಮಿಸುತ್ತಿದೆ. ಪ್ರಧಾನಿ ನರೇಂದ್ರ ಮೋದಿ ನಾಯಕತ್ವಕ್ಕೆ ಇಂದು ದೇಶವೇ ತಲೆದೂಗಿದೆ. ನಮ್ಮ ನೆರೆಯ ಶತ್ರು ರಾಷ್ಟ್ರವೂ ಕೂಡ ನಮ್ಮ ಪ್ರಧಾನಿ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡುತ್ತಿದೆ. ಇದ್ದರೆ ನರೇಂದ್ರ ಮೋದಿಯಂತಹ ಪ್ರಧಾನಮಂತ್ರಿ ಇರಬೇಕು ಎಂದು ಆಶಿಸುತ್ತಿದೆ. ಅದಕ್ಕಾಗಿ ನಾವು ರಾಜ್ಯ ಹಾಗೂ ಕೇಂದ್ರದಲ್ಲಿ ಡಬಲ್ ಇಂಜಿನ್ ಸರ್ಕಾರ ಅಸ್ತಿತ್ವಕ್ಕೆ ತರಲು ಶ್ರಮಿಸಬೇಕು. ಇಂದಿನಿಂದ ಒಂದು ತಿಂಗಳು ಕೆಆರ್. ಕ್ಷೇತ್ರ ಬೂತ್ ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಪ್ರಮುಖರು ಮನೆ ಮನೆಗೆ ಹೋಗುವ ಕೆಲಸ ಮಾಡಬೇಕು. ಪಕ್ಷ ಹಾಗೂ ಸರ್ಕಾರದ ಸಾಧನೆಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕು ಎಂದು ಸಲಹೆ ನೀಡಿದರು. ಈ ಸಂದರ್ಭದಲ್ಲಿ ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.

ಬಿಜೆಪಿ ಸರ್ಕಾರದ ಕೋಮು ಧೋರಣೆಯಿಂದ ರಾಜ್ಯದಲ್ಲಿ ಭಯಭೀತ ವಾತಾವರಣ



ಮೈಸೂರು,ಏ.6(ಎಂಟಿವೈ)– ಬಿಜೆಪಿ ಸರ್ಕಾರದ ಕೋಮುವಾದಿ ಧೋರಣೆಯಿಂದ ರಾಜ್ಯದಲ್ಲಿ ಅಭದ್ರತೆ, ಅನಿಶ್ಚಿತತೆ ಕಾಡುತ್ತಿದ್ದು, ಜನ ಭಯಭೀತರಾಗಿದ್ದಾರೆ ಎಂದು ಎಸ್‌ಡಿಪಿಐ ರಾಜ್ಯ ಉಪಾಧ್ಯಕ್ಷ ದೇವನೂರು ಪುಟ್ಟನಂಜಯ್ಯ ವಿಷಾದಿಸಿದ್ದಾರೆ.


ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಹಾಗೂ ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದ್ದು, ಯಾವುದೇ ಅಭಿವೃದ್ಧಿ ಕಾರ್ಯ ನಡೆಸದೇ ಕೇವಲ ಕೋಮು ದಳ್ಳುರಿ ಹಬ್ಬಿಸಲು ಮುಂದಾಗಿದೆ. ರಾಜ್ಯದಲ್ಲಿ ಶಾಂತಿ ಕದಡುವ ಮೂಲಕ ರಾಜಕೀಯ ಲಾಭ ಮಾಡಿಕೊಳ್ಳಲು ಬಿಜೆಪಿ ಮುಂದಾಗಿದ್ದು, ಇದನ್ನು ಗಮನಿಸಿದ ಹಲವು ಮುಖಂಡರು ಬಿಜೆಪಿ ತೊರೆಯಲು ಮುಂದಾಗಿದ್ದಾರೆ. ಬಹುತೇಕರಲ್ಲಿ ಅಭದ್ರತೆ, ಅನಿಶ್ಚಿತತೆ ಕಾಡುತ್ತಿದೆ. ಜನ ಆತಂಕದಲ್ಲಿದ್ದಾರೆ. ಸಂವಿಧಾನದ ಆಶಯವನ್ನು ಬದಿಗೊತ್ತಲಾಗುತ್ತಿದೆ. ಚುನಾವಣೆ ಹೊಸ್ತಿಲಲ್ಲ ಭಯದ ವಾತಾವರಣ ನಿರ್ಮಿಸುವ ಹುನ್ನಾರ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಶ್ರೀರಾಮಸೇನೆಯ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಎಸ್‌ಡಿಪಿಐ ಪಕ್ಷವನ್ನು ಕೋಮುವಾದಿ ಪಕ್ಷ ಎಂದು ಟೀಕಿಸಿರುವುದು ಖಂಡನೀಯ. ಮುತಾಲಿಕ್, ಆರ್‌ಎಸ್‌ಎಸ್, ಬಿಜೆಪಿ ಮುಖಂಡರು ಜೊತೆಗೆ ಎಸ್‌ಡಿಪಿಐ ಮುಖಂಡರನ್ನು ಮಂಪರು ಪರೀಕ್ಷೆಗೆ ಒಳಪಡಿಸಿದರೆ ನಿಜವಾದ ಕೋಮುವಾದಿಗಳು ಯಾರು ಎಂದು ಬಹಿರಂಗವಾಗಲಿದೆ. ವಾಸ್ತವ ಸಂಗತಿ ಗೊತ್ತಿದ್ದರೂ ಪ್ರಮೋದ್ ಮುತಾಲಿಕ್ ಕೋಮುವಾದಕ್ಕೆ ಪ್ರಚೋದನೆ ನೀಡುವ ಸಂಚು ನಡೆಸುತ್ತಲೇ ಇದ್ದಾರೆ. ಭಾರತ ಬಹುತ್ವದ ರಾಷ್ಟ್ರವಾಗಿದೆ. ಎಲ್ಲರಿಗೂ ಅವರದೇ ಆದ ಆಚಾರ, ವಿಚಾರವಿದೆ. ಆದರೆ ಈಗ ಅವರನ್ನು ಹಿಡಿತಕ್ಕೆ ತೆಗೆದುಕೊಂಡು ಕೋಮು ಗಲಭೆಗಳಿಗೆ ಬಳಸಿಕೊಳ್ಳುವ ಯತ್ನ ನಡೆದಿದೆ ಎಂದು ಆರೋಪಿಸಿದರು.


ಮುಖಂಡ ರಫತ್‌ಖಾನ್ ಮಾತನಾಡಿ, ಪುತ್ತೂರಿನಲ್ಲಿ ಎಸ್‌ಡಿಪಿಐ ಟಿಕೆಟ್ ನೀಡಿರುವ ಅಭ್ಯರ್ಥಿ ಪಕ್ಷದ ಪ್ರಾಮಾಣಿಕ ಸದಸ್ಯರಾಗಿದ್ದಾರೆ. ಅವರು ಜನೋಪಯೋಗಿ ಕೆಲಸಗಳಲ್ಲೂ ತೊಡಗಿದ್ದಾರೆ. ಆದರೆ ಅವರು ಪ್ರವೀಣ್ ನೆಟ್ಟಾರ್ ಪ್ರಕರಣದ ಅಪರಾಧಿಯಲ್ಲ, ಕೇವಲ ಆರೋಪ ಎದುರಿಸುತ್ತಿದ್ದಾರಷ್ಟೇ ಎಂದರು.

ಇದೇ ವೇಳೆ ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಸ್ಟೀಫನ್ ಸುಜಿತ್ ಹಾಗೂ ಮರಿಯಾ ಫ್ರಾನ್ಸಿಸ್, ಜಾನ್ ಫರ್ನಾಂಡಿಸ್ ಎಸ್‌ಡಿಪಿಐ ಸೇರ್ಪಡೆಯಾದರು. ಈ ಸಂದರ್ಭದಲ್ಲಿ ಪಾಲಿಕೆ ಮಾಜಿ ಸದಸ್ಯ ಎಸ್.ಸ್ವಾಮಿ ಇದ್ದರು.

ಮೈಸೂರು ಹೃದಯ ಭಾಗದಲ್ಲಿ ವಾಹನ ಸವಾರರಿಗೆ ನಿತ್ಯ ಚರಂಡಿ ನೀರಿನ ಸಿಂಚನ



● ಪ್ರತಿದಿನ ಸಂಜೆ ರಸ್ತೆಯಲ್ಲಿ ಹರಿಯುವ ಚರಂಡಿ ನೀರು
● ನಗರ ಬಸ್ ನಿಲ್ದಾಣ ಪ್ರವೇಶ ದ್ವಾರದ ಬಳಿ ಆಲ್ಬರ್ಟ್ ವಿಕ್ಟರ್ ರಸ್ತೆಯಲ್ಲಿ ಪಾದಚಾರಿಗಳಿಗೆ ಭಾರೀ ಕಿರಿಕಿರಿ



ಮೈಸೂರು,ಏ.6(ಎಂಟಿವೈ)– ಮೈಸೂರಿನ ಹೃದಯ ಭಾಗದಲ್ಲಿ ಪ್ರತಿದಿನ ಸಂಜೆ ಚರಂಡಿ ನೀರು ರಸ್ತೆಗೆ ಉಕ್ಕಿ ಹರಿಯುತ್ತಿದ್ದು, ನಗರದ ನಿವಾಸಿ ಮಾತ್ರವಲ್ಲದೆ ಮೈಸೂರಿಗೆ ಬರುವ ಪ್ರವಾಸಿಗರು ಮುಜುಗರಕ್ಕೊಳಗಾಗುತ್ತಿದ್ದಾರೆ.

ಕೆ.ಆರ್.ವೃತ್ತದಿಂದ ಚಾಮರಾಜ ಒಡೆಯರ್ ವೃತ್ತಕ್ಕೆ ಸಂಪರ್ಕ ಕಲ್ಪಿಸುವ ಆಲ್ಬರ್ಟ್ ವಿಕ್ಟರ್ ರಸ್ತೆಯಲ್ಲಿ ಪ್ರತಿದಿನ ಸಂಜೆಯಾಗುತ್ತಿದ್ದಂತೆ ಒಳಚರಂಡಿ ನೀರು ರಾಜಪಥದ ಮೇಲೆ ಹರಿಯಲಾರಂಭಿಸುತ್ತದೆ. ನಗರ ಬಸ್ ನಿಲ್ದಾಣ ಪ್ರವೇಶಕ್ಕೆ ವ್ಯವಸ್ಥೆ ಮಾಡಿರುವ 'ಬಸ್ ಬೇ'ನಲ್ಲೇ ದುರ್ನಾತ. ಒಂದೆಡೆ ರಸ್ತೆ ಬದಿ ನಡೆದುಕೊಂಡು ಹೋಗುವ ಪಾದಚಾರಿಗಳು, ಮತ್ತೊಂದೆಡೆ ವಾಹನ ಸವಾರರಿಗೆ ಚರಂಡಿ ನೀರಿನ ಸಿಂಚನವಾಗಿ ಅಸಹ್ಯಪರಿಸ್ಥಿತಿ ನಿರ್ಮಾಣವಾಗಿದೆ.

ಪ್ರತಿದಿನ ಸಂಜೆ ವೇಳೆ ಚರಂಡಿ ನೀರು ಕಾಂಕ್ರಿಟ್ ರಸ್ತೆ ಮೇಲೆ ಹರಿಯುವುದರಿಂದ ವಾತಾವರಣ ಕಲುಷಿತಗೊಳ್ಳುತ್ತಿದೆ. ಹಾಪ್‌ಕಾಮ್ಸ್‌ಗೆ ಹಣ್ಣು–ತರಕಾರಿ ತೆಗೆದುಕೊಳ್ಳಲು ಬರುವ ಗ್ರಾಹಕರು ಚರಂಡಿ ನೀರನ್ನು ದಾಟಿ ಮುಂದೆ ಸಾಗಲು ಆಗದೆ ಪರದಾಡುವಂತಹ ಪರಿಸ್ಥಿತಿ ಎದುರಾಗಿದೆ. ಅರಮನೆಯ ದೀಪಾಲಂಕಾರ ವೀಕ್ಷಣೆಗಾಗಿ ಕೆಲವು ಪ್ರವಾಸಿಗರು ತಮ್ಮ ವಾಹನವನ್ನು ನಿಲ್ಲಿಸಿ ಕುದುರೆಗಾಡಿ, ಕಾಲ್ನಡಿಗೆಯಲ್ಲಿ ತೆರಳಲು ಇಚ್ಛಿಸುತ್ತಾರೆ. ಆದರೆ, ನಗರದ ಹೃದಯ ಭಾಗದಲ್ಲೇ ಒಳಚರಂಡಿ ನೀರು ರಸ್ತೆಗೆ ಹರಿಯುವುದು ಪ್ರವಾಸಿಗರಿಗೆ ಮುಜುಗರವನ್ನುಂಟು ಮಾಡುತ್ತಿದೆ.

ನಗರ ಬಸ್ ನಿಲ್ದಾಣದ ಪ್ರವೇಶ ದ್ವಾರದ ಬಳಿ ಸಿಮೆಂಟ್ ಬ್ಲಾಕ್‌ಗಳು ಒಳಚರಂಡಿ ಮಾರ್ಗದ ಪೈಪ್ ಮೇಲೆ ಕೂರಿಸಿರುವುದರಿಂದ ಒಳಚರಂಡಿ ನೀರು ಸರಾಗವಾಗಿ ಹರಿಯಲು ಅಡ್ಡಿಯಾಗಿ ರಸ್ತೆಗೆ ಉಕ್ಕುತ್ತಿದೆ ಎನ್ನಲಾಗಿದೆ. ಕೂಡಲೇ ಒಳಚರಂಡಿ ಮಾರ್ಗ ದುರಸ್ತಿ ಮಾಡುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

ಸಮನ್ವಯದ ಕೊರತೆ

ನಗರ ಬಸ್ ನಿಲ್ದಾಣಕ್ಕೆ ಹಾರ್ಡಿಂಗ್ ವೃತ್ತದ ಕಡೆಯಿಂದ ಬರುವ ಸಾರಿಗೆ ಬಸ್‌ಗಳು ಪ್ರವೇಶಿಸುವ ಸ್ಥಳದಲ್ಲಿ ಕಳೆದ ಕೆಲವು ದಿನಗಳಿಂದ ಚರಂಡಿ ನೀರು ರಸ್ತೆ ಮೇಲೆ ಹರಿಯುತ್ತಿದೆ. ವೇಗವಾಗಿ ಬಸ್‌ಗಳು ಸಂಚರಿಸುವುದರಿಂದ ಚರಂಡಿ ನೀರು ರಸ್ತೆ ಬದಿವರೆಗೂ ಹಾರುತ್ತಿದೆ. ಅದರಲ್ಲೂ ಸಂಜೆ ವೇಳೆ ಈ ಅವ್ಯವಸ್ಥೆ ಕಂಡು ಬರುತ್ತಿದೆ. ಅರಮನೆಗೆ ಬರುವ ಪ್ರವಾಸಿಗರು ಮೂಗುಮುಚ್ಚಿಕೊಂಡು ಓಡಾಡುವ ದುಸ್ಥಿತಿ ನಿರ್ಮಾಣವಾಗಿದೆ. ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣದ ಉಸ್ತುವಾರಿ ಅಧಿಕಾರಿಗಳು ಹಾಗೂ ಪಾಲಿಕೆ ಅಧಿಕಾರಿಗಳ ನಡುವಿನ ಸಮನ್ವಯದ ಕೊರತೆಯಿಂದ ಈ ಸಮಸ್ಯೆ ಉದ್ಭವಿಸಿದೆ. ಕೂಡಲೇ ಸಮಸ್ಯೆ ಬಗೆಹರಿಸಬೇಕು.

- ಎಂ.ಸಿ.ಕಾರ್ತಿಕ್, ಸಿದ್ಧಾರ್ಥನಗರದ ನಿವಾಸಿ





ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಗುಜರಾತ್	2	2	0	0	4
ಪಂಜಾಬ್	2	2	0	0	4
ಕೋಲ್ಕತ್ತಾ	2	1	1	0	2
ರಾಜಸ್ಥಾನ್	2	1	1	0	2
ಲಕ್ನೋ	2	1	1	0	2
ಸಿಎಸ್‌ಕೆ	2	1	1	0	2
ಆರ್‌ಸಿಬಿ	2	1	1	0	2
ಡೆಲ್ಲಿ	2	0	2	0	0
ಮುಂಬೈ	1	0	1	0	0
ಎಸ್‌ಆರ್‌ಹೆಚ್	1	0	1	0	0

ಕೆಕೆಆರ್ ವಿರುದ್ಧ ಆರ್‌ಸಿಬಿಗೆ ಹೀನಾಯ ಸೋಲು


ಕೋಲ್ಕತ್ತಾ, ಏ.6– ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ವೈಫಲ್ಯ ಅನುಭವಿಸಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು, ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ 81ರನ್ ಹೀನಾಯ ಸೋಲು ಅನುಭವಿಸಿದೆ.

205ರನ್‌ಗಳ ಬೃಹತ್ ಗೆಲುವಿನ ಬೆನ್ನತ್ತಿದ ಆರ್‌ಸಿಬಿ ಕೆಕೆಆರ್ ಬೌಲರ್‌ಗಳ ಮಾರಕ ಬೌಲಿಂಗ್ ದಾಳಿಗೆ ತತ್ತರಿಸಿ 17.4 ಓವರ್‌ಗಳಲ್ಲಿ 123ರನ್ ಗಳಿಸಲಷ್ಟೇ ಶಕ್ತವಾಯಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ವಿರಾಟ್ ಕೊಹ್ಲಿ ಹಾಗೂ ನಾಯಕ ಫಾಫ್ ಡುಪ್ಲಿಸಿಸ್ ಮೊದಲ ವಿಕೆಟ್‌ಗೆ 44 ರನ್‌ಗಳ ಜೊತೆಯಾಟ ವಾಡುವ ಮೂಲಕ ಉತ್ತಮ ಆರಂಭ ಒದಗಿಸಿಕೊಟ್ಟರು. ಈ ವೇಳೆ 18 ಎಸೆತಗಳಲ್ಲಿ 3 ಬೌಂಡರಿ ಒಳಗೊಂಡ 21 ರನ್ ಗಳಿಸಿದ್ದ ಕೊಹ್ಲಿ ವಿಕೆಟ್ ಒಪ್ಪಿಸಿದರು. ಇದರ ಬೆನ್ನಲ್ಲೇ ನಾಯಕ ಡುಪ್ಲೆಸಿಸ್ 12 ಎಸೆತಗಳಲ್ಲಿ ತಲಾ 2ಸಿಕ್ಸರ್, ಬೌಂಡರಿ ಒಳಗೊಂಡ 23ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ವರು ಕ್ರೀಸ್‌ನಲ್ಲಿ ನಿಲ್ಲದೇ ಪೆವಿಲಿಯನ್ ಪರೇಡ್ ನಡೆಸಿದರು. ಉಳಿದಂತೆ ಮೈಕಲ್ ಬ್ರೆಸ್‌ವೆಲ್ 19, ಡೇವಿಡ್ ವಿಲ್ಲಿ 20, ಆಕಾಶ್ ದೀಪ್ 17 ರನ್ ಗಳಿಸಿ ಅಲ್ಪ ಪ್ರತಿರೋಧ ವ್ಯಕ್ತಪಡಿಸಿದರಾದರೂ ತಂಡವನ್ನು ಸೋಲಿನಿಂದ ಪಾರು ಮಾಡುವಲ್ಲಿ ವಿಫಲರಾದರು. ಕೆಕೆಆರ್ ಪರ ಬೌಲಿಂಗ್‌ನಲ್ಲಿ ವರುಣ್ ಚಕ್ರವರ್ತಿ 4, ಸುಂಯೇಷ್ ಶರ್ಮಾ 3, ಸುನೀಲ್ ನರೇನ್ 2, ಶಾರ್ದೂಲ್ ಠಾಕೂರು ಒಂದು ವಿಕೆಟ್ ಪಡೆದು ಮಿಂಚಿದರು.

ಇದಕ್ಕೂ ಮುನ್ನಾ ಇಲ್ಲಿನ ಈಡನ್ ಗಾರ್ಡನ್ ಮೈದಾನದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಕೋಲ್ಕತ್ತಾ ನೈಟ್ ರೈಡರ್ಸ್ ತಂಡದ ಮೊತ್ತ 47ರನ್ ಆಗುವಷ್ಟರಲ್ಲೇ ಪ್ರಮುಖ 3 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಆದರೆ ಮತ್ತೊಂದೆಡೆ ಉತ್ತಮ ಬ್ಯಾಟಿಂಗ್ ಮಾಡಿದ ಗುರ್ಬಜ್ 44 ಎಸೆತಗಳಲ್ಲಿ 6 ಬೌಂಡರಿ, 3 ಸಿಕ್ಸರ್ ಒಳಗೊಂಡ 57ರನ್ ಗಳಿಸಿ ಔಟಾದರು. ಈ ವೇಳೆ ಕ್ರೀಸ್‌ಗೆ ಆಗಮಿಸಿದ ಆಂಡ್ರ್ಯೂ ರಸೆಲ್ ಶೂನ್ಯಕ್ಕೆ ವಿಕೆಟ್ ಒಪ್ಪಿಸಿದರು. ಈ ವೇಳೆ ಜೊತೆಗೂಡಿದ ರಿಂಕು ಸಿಂಗ್ ಹಾಗೂ ಶಾರ್ದೂಲ್ ಠಾಕೂರ್ ಬಿರುಸಿನ ಬ್ಯಾಟಿಂಗ್ ಮಾಡಿದರು. ಇವರಿಬ್ಬರು 6ನೇ ವಿಕೆಟ್‌ಗೆ 103ರನ್‌ಗಳ ಜೊತೆಯಾಟವಾಡಿದರು. ರಿಂಕು ಸಿಂಗ್ 33 ಎಸೆತಗಳಲ್ಲಿ 3 ಸಿಕ್ಸರ್, 2 ಬೌಂಡರಿ ಒಳಗೊಂಡ 46ರನ್ ಗಳಿಸಿದರೇ, ಠಾಕೂರ್ 29 ಎಸೆತಗಳಲ್ಲಿ 9 ಬೌಂಡರಿ, 3ಸಿಕ್ಸರ್ ಒಳಗೊಂಡ 68 ರನ್ ಪೇರಿಸಿ ವಿಕೆಟ್ ಒಪ್ಪಿಸಿದರು. ಅಂತಿಮವಾಗಿ ಕೆಕೆಆರ್ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 204ರನ್‌ಗಳ ಬೃಹತ್ ಮೊತ್ತ ದಾಖಲಿಸಿತು.



ಆರ್‌ಸಿಬಿ ಪರ ಕರಣ್ ಶರ್ಮಾ, ಡೇವಿಡ್ ವಿಲ್ಲಿ ತಲಾ 2, ಹರ್ಷಲ್ ಪಟೇಲ್, ಮೈಕಲ್ ಬ್ರೆಸ್‌ವೆಲ್ ಹಾಗೂ ಮೊಹಮ್ಮದ್ ಸಿರಾಜ್ ತಲಾ ಒಂದೊಂದು ವಿಕೆಟ್ ಕಬಳಿಸಿದರು. ಕೆಕೆಆರ್ ಪರ ಆಲ್‌ರೌಂಡ್ ಆಟ ಪ್ರದರ್ಶಿಸಿದ ಶಾರ್ದೂಲ್ ಠಾಕೂರ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.



ಏ.9ಕ್ಕೆ ಮೈಸೂರಿಗೆ ಮೋದಿ

ಪ್ರಧಾನಿ ಸಂಚರಿಸುವ ಮಾರ್ಗದಲ್ಲಿ ಸ್ವಚ್ಛತೆ, ಮರದ ರೆಂಬೆ ಕಡಿತ



ಮೈಸೂರು, ಏ.6(ಜಿಎ)–ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮೈಸೂರಿಗೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ನಗರದಲ್ಲಿ ಸ್ವಚ್ಛತಾ ಕಾರ್ಯ ಸೇರಿದಂತೆ ಇತರ ಸಿದ್ಧತೆಗಳು ಮೈಸೂರು ನಗರ ಪಾಲಿಕೆಯಿಂದ ಭರದಿಂದ ಸಾಗಿವೆ.

ಮೋದಿ ಅವರು ಏ.9ರಂದು ಚಾಮರಾಜನಗರದಲ್ಲಿ ಕಾರ್ಯಕ್ರಮಗಳನ್ನು ಮುಗಿಸಿಕೊಂಡು ಮೈಸೂರಿನ ಕೆಎಸ್‌ಓಯು ಘಟಿಕೋತ್ಸವ ಭವನದಲ್ಲಿ ಏರ್ಪಡಿಸಿರುವ ಸಮಾರಂಭದಲ್ಲಿ ಹುಲಿ ಸಮೀಕ್ಷಾ ವರದಿ ಬಿಡುಗಡೆ ಮಾಡಲಿದ್ದಾರೆ. ಈ ಹಿನ್ನೆಲೆಯಲ್ಲಿ ಅವರು ಸಂಚರಿಸುವ ಮಾರ್ಗದಲ್ಲಿ ಸ್ವಚ್ಛತೆ, ಇಕ್ಕೆಲಗಳಲ್ಲಿ ಚಾಚಿಕೊಂಡಿರುವ ಮರದ ರೆಂಬೆಗಳನ್ನು ಕಟಾವು ಮಾಡುತ್ತಿದ್ದು, ಜೊತೆಗೆ ಬೀದಿದೀಪಗಳನ್ನು ದುರಸ್ತಿಪಡಿಸುತ್ತಿದ್ದಾರೆ.

ಪ್ರಧಾನಿ ಮೋದಿ ಪ್ರವಾಸ ಕಾರ್ಯಕ್ರಮದ ಪ್ರಕಾರ ಅವರು ಏಪ್ರಿಲ್ 9ರಂದು ಭಾರತೀಯ ವಾಯುದಳ (ಐಎಎಫ್)ದ ಹೆಲಿಕಾಪ್ಟರ್‌ನಲ್ಲಿ ಬೆಳಗ್ಗೆ 7 ಗಂಟೆಗೆ ಚಾಮರಾಜನಗರ ಜಿಲ್ಲೆ ಮೇಲುಕಾಮನಹಳ್ಳಿ ಹೆಲಿಪ್ಯಾಡ್ ತಲುಪಿ, ಅಲ್ಲಿಂದ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಸಫಾರಿಗೆ ತೆರಳುವರು. ನಂತರ ತೆಪ್ಪಕಾಡು ಆನೆ ಶಿಬಿರಕ್ಕೆ ತೆರಳಿ, ಅಲ್ಲಿ ಆಸ್ಕರ್ ಪ್ರಶಸ್ತಿ ಗಳಿಸಿದ ಸಾಕ್ಷ್ಯಚಿತ್ರ 'ದಿ ಎಲಿಫೆಂಟ್ ವಿಸ್ಪರರ್ಸ್'ದಲ್ಲಿರುವ ಆನೆ ಮರಿ ಸಲಹಿದ ಬೊಮ್ಮ ಮತ್ತು ಬೆಳ್ಳಿ ದಂಪತಿಯನ್ನು ಸನ್ಮಾನಿಸುವರು.

9.45ಕ್ಕೆ ಹೆಲಿಕಾಪ್ಟರ್‌ನಲ್ಲಿ ಹೊರಟು ಬೆಳಗ್ಗೆ 10.30ಕ್ಕೆ ಮೈಸೂರು ವಿವಿಯ ಓವಲ್ ಮೈದಾನದಲ್ಲಿ ನಿರ್ಮಾಣ ಮಾಡಿರುವ ತಾತ್ಕಾಲಿಕ ಹೆಲಿಪ್ಯಾಡ್ ತಲುಪಲಿದ್ದಾರೆ. ನಂತರ ಅಲ್ಲಿಂದ ಕಾರಿನಲ್ಲಿ ಮೈಸೂರು–ಹುಣಸೂರು ರಸ್ತೆಯಲ್ಲಿರುವ ಕೆಎಸ್‌ಓಯು ಘಟಿಕೋತ್ಸವ ಭವನದಲ್ಲಿ ಏರ್ಪಡಿಸಿರುವ ಸಮಾರಂಭದಲ್ಲಿ ಹುಲಿ ಸಮೀಕ್ಷಾ ವರದಿ ಬಿಡುಗಡೆ ಮಾಡಲಿದ್ದಾರೆ.

ಮಕ್ಕಳ ಭಾವನೆ ಬದಲಿಸುವ ಮುನ್ನ ಪೋಷಕರು ಭಾವನೆ ಬದಲಿಸಿಕೊಳ್ಳಬೇಕು

● ಶಿಕ್ಷಣ ತಜ್ಞ ಗುರುರಾಜ ಕರ್ಜಗಿ ಕಿವಿಮಾತು ● ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ನಲ್ಲಿ ಪೋಷಕರೊಂದಿಗೆ ಸಂವಾದ

ಮೈಸೂರು, ಏ.6(ಜಿಎ)– ಪೋಷಕರು ಮಕ್ಕಳ ಭಾವನೆಯನ್ನು ಬದಲಿಸುವ ಮುನ್ನ ತಮ್ಮ ಭಾವನೆಗಳನ್ನು ಬದಲಿಸಿಕೊಳ್ಳಬೇಕು ಎಂದು ಶಿಕ್ಷಣ ತಜ್ಞ ಗುರುರಾಜ ಕರ್ಜಗಿ ಕಿವಿಮಾತು ಹೇಳಿದರು.

ಮೈಸೂರಿನ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಆಯೋಜಿಸಿದ್ದ 'ಶಿಕ್ಷಣದಲ್ಲಿ ಪೋಷಕರ ಪಾತ್ರ' ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಡಾ. ಗುರುರಾಜ್ ಕರ್ಜಗಿ ಅವರು ಪೋಷಕರೊಂದಿಗೆ ಮುಕ್ತ ಸಂವಾದ ನಡೆಸಿದರು.

ಅನೇಕ ಪೋಷಕರು ಶಾಲೆಯನ್ನು ಲ್ಯಾಂಡ್ರಿ ಅಂದುಕೊಂಡಿದ್ದಾರೆ. ಆದರೆ, ಶಾಲೆಗೆ ಮಕ್ಕಳನ್ನು ಸೇರಿಸುವುದು ಮಾತ್ರ ಅಪ್ಪ–ಅಮ್ಮನ ಕರ್ತವ್ಯವಲ್ಲ. ಮಕ್ಕಳು ಶಾಲೆಗಿಂತ ಹೆಚ್ಚು ಸಮಯ ಮನೆಯಲ್ಲಿ ಕಳೆಯುತ್ತಾರೆ. ನೀವು ಏನು ಹೇಳುತ್ತಿರೋ ಅದನ್ನು ಕೇಳುವ ಬದಲು ಪೋಷಕರು ಏನು ಮಾಡುತ್ತಾರೆ ಅದನ್ನು ಅನುಸರಿಸುವುದೇ ಹೆಚ್ಚು. ಆದ್ದರಿಂದ ನೀವು ಅವರ ಭಾವನೆಗಳನ್ನು ಬದಲಿಸುವ ಮುನ್ನ ನಿಮ್ಮ ಭಾವನೆಗಳನ್ನು ಬದಲಿಸಿಕೊಳ್ಳಿ ಎಂದರು.



ಮಕ್ಕಳು ಶಾಲೆಯಲ್ಲಿ ಇರುವ ಹಾಗೆ ಮನೆಯಲ್ಲಿ ಇರುವುದಿಲ್ಲ. ಪೋಷಕರು ಮತ್ತು ಶಿಕ್ಷಕರ ನಡುವೆ ಸದಾ ನಿರಂತರ ಸಂಪರ್ಕವಿರಬೇಕು. ಇದರಿಂದ ಮಕ್ಕಳ ಪ್ರತಿಯೊಂದು ಚಟುವಟಿಕೆ, ಚಲನವಲನಗಳ ಬಗ್ಗೆ ಇಬ್ಬರಿಗೂ ತಿಳಿಯುತ್ತದೆ. ಆಗ ಮಕ್ಕಳಲ್ಲಿಯೂ ಎಚ್ಚರವಿರುತ್ತದೆ. ಯಾವುದೇ ತಪ್ಪು ದಾರಿಗೆ ಇಳಿಯುವುದಿಲ್ಲ ಎಂದು ತಿಳಿಸಿದರು.

ಕಾಳಜಿ ವಹಿಸುವುದು : ಕೆಲ ಪೋಷಕರು ಅತಿಯಾದ ಪ್ರೀತಿಯಿಂದ ಆರು ವರ್ಷದ ಮಕ್ಕಳನ್ನು ಅವು ಸ್ವತಂತ್ರವಾಗಿ ಓಡಾಡಲು, ಊಟ ಮಾಡಲು, ಬಟ್ಟೆ ಹಾಕಿಕೊಳ್ಳಲು ಹೀಗೆ ನಾನಾ ಚಟುವಟಿಕೆಗಳಲ್ಲಿ ತೊಡಗಲು ಬಿಡದೇ ಹೆಚ್ಚು ಕಾಳಜಿ ವಹಿಸಿ ಎಲ್ಲವನ್ನು ಅವರೇ ಮಾಡುತ್ತಾರೆ. ಇದರಿಂದ ಮಕ್ಕಳಲ್ಲಿ ಯಾವುದೇ ಪ್ರಯೋಗಗಳನ್ನು ಮಾಡಲು ಸಾಧ್ಯವಾಗುವುದಿಲ್ಲ. ನಂತರದ ದಿನಗಳಲ್ಲಿ ಇದರಿಂದ ಪಶ್ಚಾತ್ತಾಪಪಡಬೇಕಾಗುತ್ತದೆ. ಮಕ್ಕಳ ಬಗ್ಗೆ ಕಾಳಜಿ ಇರಲಿ. ಆದರೆ, ಅತಿಯಾದ ಕಾಳಜಿ ಅವಶ್ಯಕತೆ ಇಲ್ಲ ಎಂದರು.

ಸಮಯ ಕೊಡಿ : ಮಕ್ಕಳ ಭವಿಷ್ಯ ರೂಪಿಸಲು ಪೋಷಕರು ಹಗಲು–ರಾತ್ರಿ ಎನ್ನದೆ ನಿರಂತರವಾಗಿ ದುಡಿಯುತ್ತಾರೆ. ಆದರೆ, ಮಕ್ಕಳಿಗೆ ನೀಡಬೇಕಾದ ಪ್ರೀತಿ, ಸಮಯವನ್ನು ನೀಡುವುದನ್ನೇ ಮರೆಯುತ್ತಿದ್ದಾರೆ. ಅನೇಕ ಮನೆಗಳಲ್ಲಿ ತಂದೆಯೂ ಮಕ್ಕಳು ನಿದ್ರೆಯಿಂದ ಎಚ್ಚರಗೊಳ್ಳುವ ಮೊದಲು ಮನೆಯಿಂದ ಕೆಲಸಕ್ಕೆ ಹೊರಟು ಮಧ್ಯರಾತ್ರಿ ಮಕ್ಕಳು ನಿದ್ರೆಗೆ ಜಾರಿದಾಗ ಬರುತ್ತಾರೆ. ಇದರಿಂದ ಮಕ್ಕಳು ತಂದೆಯ ಜೊತೆ ಸಮಯವನ್ನು ಕಳೆಯಲು ಸಾಧ್ಯವಾಗುತ್ತಿಲ್ಲ. ಆದಷ್ಟು ನಿಮ್ಮ ಕೆಲಸ ನಡುವೆಯೇ ಮಕ್ಕಳಿಗೆ ಸಮಯ ಕೊಡಿ. ಹರಟೆ ಹೊಡೆಯಿರಿ. ಹೆಚ್ಚು ಮಕ್ಕಳ ಜೊತೆ ಮಾತನಾಡಿದಷ್ಟು ಅವರ ಭಾಷೆಯೂ ಬೆಳೆಯುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ಆರ್.ರಘು, ಕಾರ್ಯದರ್ಶಿ ಆರ್.ಕೌಟಿಲ್ಯ, ಕಾರ್ಯನಿರ್ವಾಹಕ ನಿರ್ದೇಶಕಿ ಡಾ.ಎಲ್.ಸವಿತಾ, ಸ್ಕೂಲ್ ಸಕ್ಸಸ್ ಫೆಸಿಲಿಟೇಟರ್ ಚೇತನ, ಶಾಲಾ ಸಿಬ್ಬಂದಿಗಳು, ಪೋಷಕರು ಉಪಸ್ಥಿತರಿದ್ದರು.

ಮೌಲ್ಯಗಳು ಮುಖ್ಯ

ಪ್ರೀತಿಯಿಂದ ತಿದ್ದಲೂ ಸಾಧ್ಯವಾಗದೇ ಇದ್ದಾಗ ಇಂತಹ ಸಂದರ್ಭದಲ್ಲಿ ಹೊಡೆದರೆ ಯಾವ ಬದಲಾವಣೆಯೂ ಆಗುವುದಿಲ್ಲ. ಆದ್ದರಿಂದ ಬೇರೆ ಮಕ್ಕಳೊಂದಿಗೆ ನಿಮ್ಮ ಮಕ್ಕಳನ್ನು ಹೋಲಿಕೆ ಮಾಡಬೇಡಿ. ಅದರ ಬದಲು ಅವರಲ್ಲಿ ಮೌಲ್ಯಗಳನ್ನು ಬೆಳೆಸಲು ಮುಂದಾಗಿ ಎಂದು 'ಶಿಕ್ಷಣದಲ್ಲಿ ಪೋಷಕರ ಪಾತ್ರ' ಏನು ಎಂಬುದನ್ನು ತಮ್ಮ ಕೆಲವು ಅನುಭವಗಳನ್ನು ಗುರುರಾಜ್ ಕರ್ಜಗಿ ಹಂಚಿಕೊಂಡರು.

ಟಿ.ನರಸೀಪುರದಲ್ಲಿ ಬಿಜೆಪಿಯಿಂದ ಮಾದಿಗ ಸಮುದಾಯದ ಅಭ್ಯರ್ಥಿ ಕಣಕ್ಕಿಳಿಸಲು ಮನವಿ



ಮೈಸೂರು,ಏ.6(ಎಂಟಿವೈ)– ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ತಿ.ನರಸೀಪುರ ಮೀಸಲು ಕ್ಷೇತ್ರದಿಂದ ಬಿಜೆಪಿ ಮಾದಿಗ ಸಮುದಾಯದ ಅಭ್ಯರ್ಥಿಯನ್ನು ಕಣಕ್ಕಿಳಿಸುವಂತೆ ರಾಜ್ಯ ಡಾ.ಬಿ.ಆರ್. ಅಂಬೇಡ್ಕರ್ ಆದಿ ದ್ರಾವಿಡ (ಪೌರಕಾರ್ಮಿಕರ) ಯುವಕರ ಅಭಿವೃದ್ಧಿ ಮಹಾಸಂಘದ ಕಾರ್ಯಾಧ್ಯಕ್ಷ ಪಿ. ಮಂಜುನಾಥ್ ಒತ್ತಾಯಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ರಾಜಕೀಯದಲ್ಲಿ ಇದುವರೆಗೂ ಮಾದಿಗ ಸಮುದಾಯಕ್ಕೆ ಪ್ರಾತಿನಿಧ್ಯ ಸಿಕ್ಕಿಲ್ಲ. ಸಮುದಾಯದ ನಾಯಕರು ಶಾಸಕರಾಗಿ ಆಯ್ಕೆ ಮಾಡಲು ತಾರತಮ್ಯ ನೀತಿ ಅನುಸರಿಸಲಾಗುತ್ತಿದೆ. ನಮ್ಮ ಸಮುದಾಯ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯವಾಗಿ ಹಿಂದುಳಿದಿದೆ. ಆದ್ದರಿಂದ ಈ ಬಾರಿ ತಿ.ನರಸೀಪುರ ಕ್ಷೇತ್ರದಿಂದ ಸಮುದಾಯದ ನಾಯಕ ಬಾಲರಾಜು ಅವರಿಗೆ ಬಿಜೆಪಿ ಟಿಕೆಟ್ ನೀಡಬೇಕು ಎಂದು ಮನವಿ ಮಾಡಿದರು.

ಸಿಎಂ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ನ್ಯಾಯಮೂರ್ತಿ ಸದಾಶಿವ ವರದಿಯನ್ನು ಎತ್ತಿ ಹಿಡಿದು ಮಾದಿಗ ಸಮುದಾಯಕ್ಕೆ ಶೇ. 6ರಷ್ಟು ಮೀಸಲಾತಿ ನೀಡಲು ಕೈಗೊಂಡಿರುವ ಕ್ರಮಕ್ಕಾಗಿ ಕೃತಜ್ಞತೆ ಸಲ್ಲಿಸುವುದಾಗಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಸಿ.ಎಂ. ರಾಮಯ್ಯ, ಸಣ್ಣಬೋರ, ಜಿ. ಮುರುಗೇಶ್, ಆರ್.ಜಿ. ಮಹದೇವ್ ಇದ್ದರು.

ಕೆನಡಾದಲ್ಲಿ ಮತ್ತೊಂದು ಹಿಂದೂ ದೇವಾಲಯ ವಿರೂಪ

ಟೊರೊಂಟೊ: ಕೆನಡಾದಲ್ಲಿ ಮತ್ತೊಂದು ಹಿಂದೂ ದೇವಾಲಯವನ್ನು ದುಷ್ಕರ್ಮಿಗಳು ವಿರೂಪಗೊಳಿಸಿದ್ದು, ಒಂಟಾರಿಯೊ ಪ್ರಾಂತ್ಯದ ಪ್ರಮುಖ ಹಿಂದೂ ದೇವಾಲಯದ ಮೇಲೆ ಹಿಂದೂ ವಿರೋಧಿ ಮತ್ತು ಭಾರತ ವಿರೋಧಿ ಬರಹಗಳನ್ನು ಗೀಚುವ ಮೂಲಕ ವಿರೂಪಗೊಳಿಸಿದ್ದಾರೆ. ಇದು ದ್ವೇಷ–ಪ್ರೇರಿತ ಘಟನೆ ಎಂದು ಪೊಲೀಸರು ಹೇಳಿದ್ದಾರೆ.

ಒಂಟಾರಿಯೊದ ವಿಂಡ್ಸರ್ ಸಿಟಿಯ ಪೊಲೀಸರು ಘಟನೆಯ ಬಗ್ಗೆ ತನಿಖೆ ಆರಂಭಿಸಿದ್ದಾರೆ ಮತ್ತು ಇಬ್ಬರು ಶಂಕಿತರನ್ನು ಹುಡುಕುತ್ತಿರುವುದಾಗಿ ಬುಧವಾರ ಪೊಲೀಸರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕೆನಡಾದ ಒಟ್ಟಾವಾದಲ್ಲಿರುವ ಭಾರತದ ಹೈಕಮಿಷನ್ ಈ ಕೃತ್ಯವನ್ನು ತೀವ್ರವಾಗಿ ಖಂಡಿಸಿದೆ. ವಿಂಡ್ಸರ್‌ನ ಬಿಎಪಿಎಸ್ ಸ್ವಾಮಿನಾರಾಯಣ ದೇವಸ್ಥಾನದ ಗೋಡೆಗಳ ಮೇಲೆ ಭಾರತ ವಿರೋಧಿ ಬರಹಗಳನ್ನು ಬರೆಯಲಾಗಿದೆ. ಈ ಘಟನೆಯನ್ನು ಕೆನಡಾದ ಅಧಿಕಾರಿಗಳ ಗಮನಕ್ಕೆ ತರಲಾಗಿದ್ದು, ಈ ವಿಧ್ವಂಸಕ ಕೃತ್ಯವನ್ನು ನಾವು ಬಲವಾಗಿ ಖಂಡಿಸುತ್ತೇವೆ ಎಂದು ಹೈಕಮಿಷನ್ ಟ್ವೀಟ್ ಮಾಡಿದೆ.

ಸ್ವಾಮಿನಾರಾಯಣ ದೇವಸ್ಥಾನದ ಗೋಡೆಯ ಮೇಲೆ ಕಪ್ಪು ಮಸಿಯಿಂದ ಹಿಂದೂಸ್ಥಾನ್ ಮುರ್ದಾಬಾದ್ ಎಂದು ಬರೆದಿರುವುದು ಬೆಳಕಿಗೆ ಬಂದಿದೆ. ಸ್ವಾಮಿನಾರಾಯಣ ದೇವಸ್ಥಾನದ ಮೇಲೆ ನಡೆದ ಮೂರನೇ ದಾಳಿ ಇದಾಗಿದೆ.

ಕೆನಡಾದ ಹಿಂದೂ ದೇವಾಲಯಗಳಲ್ಲಿ ಇಂತಹ ಘಟನೆಗಳು ಈ ಹಿಂದೆ ಹಲವು ಬಾರಿ ನಡೆದಿವೆ. ಕಳೆದ ಫೆಬ್ರವರಿ 14 ರಂದು ಮಿಸ್ಸಿಸೌಗಾದ ರಾಮಮಂದಿರದಲ್ಲಿ ವಿಧ್ವಂಸಕ ಕೃತ್ಯಗಳ ಜೊತೆಗೆ ಹಿಂದೂ ವಿರೋಧಿ ಮತ್ತು ಭಾರತ ವಿರೋಧಿ ಘೋಷಣೆಗಳನ್ನು ಬರೆಯಲಾಗಿತ್ತು. ಅದೇ ಸಮಯದಲ್ಲಿ, ಕೆನಡಾದ ಬ್ರಾಂಪ್ಟನ್‌ನ ಗೌರಿಶಂಕರ ದೇವಾಲಯ ಮತ್ತು ರಿಚ್‌ಮಂಡ್‌ನ ವಿಷ್ಣು ದೇವಾಲಯದಲ್ಲೂ ಅನೇಕ ವಿಗ್ರಹಗಳನ್ನು ಧ್ವಂಸ ಮಾಡಲಾಗಿತ್ತು

ಸಿದ್ದೇಗೌಡರಿಗೆ ಚಾಮುಂಡೇಶ್ವರಿ ಟಿಕೆಟ್ ಘೋಷಣೆ ಹಿನ್ನೆಲೆ ಮಾವಿನಹಳ್ಳಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಂಭ್ರಮಾಚರಣೆ

ಮುಖಂಡರು, ಕಾರ್ಯಕರ್ತರಿಂದ ಅಭ್ಯರ್ಥಿಗೆ ಅಭಿನಂದನೆ



ಮೈಸೂರು, ಏ.6(ಎಸ್‌ಬಿಡಿ)– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸಿದ್ದೇಗೌಡರ ಹೆಸರು ಘೋಷಣೆಯಾಗುತ್ತಿದ್ದಂತೆ ಅವರ ಹುಟ್ಟೂರಲ್ಲಿ ಕಾರ್ಯಕರ್ತರು ಸಂಭ್ರಮಾಚರಿಸಿದರು.

ಜಯಪುರ ಹೋಬಳಿ ಮಾವಿನಹಳ್ಳಿಯಲ್ಲಿ ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಲಾಯಿತಲ್ಲದೆ, ಅಪಾರ ಸಂಖ್ಯೆಯ ಕಾರ್ಯಕರ್ತರು ಹಾಗೂ ಮುಖಂಡರು ಸಿದ್ದೇಗೌಡರ ನಿವಾಸಕ್ಕೆ ತೆರಳಿ ಅಭಿನಂದಿಸಿದರು.

ಬಳಿಕ ಸಿದ್ದೇಗೌಡರು ಚಾಮುಂಡಿಬೆಟ್ಟಕ್ಕೆ ತೆರಳಿ ತಾಯಿ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಿದರು. ಈ ವೇಳೆ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳಾಗಿದ್ದ ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಮಾಜಿ ಸದಸ್ಯರಾದ ಮಾದೇಗೌಡ ಬೀರಿಹುಂಡಿ ಬಸಪ್ಪ ರಾಕೇಶ್ ಪಾಪಣ್ಣ, ಮುಖಂಡರಾದ ಹಿನಕಲ್ ಕೆಂಪನಾಯಕ, ಕೃಷ್ಣಕುಮಾರ್ ಸಾಗರ್, ಕೂರ್ಗಳ್ಳಿ ಮಹದೇವು, ಕಡಕೊಳ ನಾಗರಾಜು, ಗುರುಸ್ವಾಮಿ, ಲೋಕೇಶ್, ಬಸವರಾಜು ಸೇರಿದಂತೆ ನೂರಾರು ಮಂದಿ ಸಿದ್ದೇಗೌಡರಿಗೆ ಸಾಥ್ ನೀಡಿದರು.

ಜಯಪುರ, ಮಾವಿನಹಳ್ಳಿ, ಬರಡನಪುರ, ಸೋಲಿಗರ ಕಾಲೋನಿ, ಗೋಪಾಲಪುರ, ಅನಗಹಳ್ಳಿ, ಡಿ.ಸಾಲುಂಡಿ, ಹಾರೋಹಳ್ಳಿ, ಮದ್ದೂರು, ಮಾರ್ಬಳ್ಳಿ, ಉದ್ಬೂರು, ಬೀರಿಹುಂಡಿ, ಧನಗಹಳ್ಳಿ, ಬೆಳವಾಡಿ, ಹಿನಕಲ್, ಆನಂದೂರು, ಇಲವಾಲ, ನಾಗವಾಲ, ಸಿದ್ದಲಿಂಗಪುರ, ಚಾಮುಂಡಿ ಬೆಟ್ಟ, ಶ್ರೀರಾಂಪುರ, ಕೇರ್ಗಳ್ಳಿ, ಬಡಗಲಹುಂಡಿ, ಸಿಂಧುವಳ್ಳಿ, ಕಡಕೊಳ, ಗುರೂರು, ಗೆಜ್ಜಗಹಳ್ಳಿ, ಹಂಚ್ಯಾ, ರಮ್ಮನಹಳ್ಳಿ, ನಾಗನಹಳ್ಳಿ, ಶೆಟ್ಟಿನಾಯಕನಹಳ್ಳಿ, ದೊಡ್ಡಮಾರಗೌಡನಹಳ್ಳಿ, ದಟ್ಟಗಳ್ಳಿ, ಶಾರದಾದೇವಿನಗರ, ಬೋಗಾದಿ, ರಾಮಕೃಷ್ಣ ನಗರ, ಟಿ.ಕೆ.ಲೇಔಟ್ ಸೇರಿದಂತೆ ಕ್ಷೇತ್ರದ ವಿವಿಧೆಡೆಯ ಮುಖಂಡರು, ಕಾರ್ಯಕರ್ತರು ಸಿದ್ದೇಗೌಡರನ್ನು ಅಭಿನಂದಿಸಿದರು ಎಂದು ಅವರ ಆಪ್ತರು ತಿಳಿಸಿದ್ದಾರೆ.



ಚಾಮುಂಡೇಶ್ವರಿಗೆ ವಿಶೇಷ ಪೂಜೆ


ರಾಡಾರ್ ಸಂಪರ್ಕ ಕಳೆದುಕೊಂಡ ಜಪಾನ್‌ನ ಮಿಲಿಟರಿ ಹೆಲಿಕಾಪ್ಟರ್

ಟೋಕಿಯೋ, ಏ.6–10 ಮಂದಿ ಪ್ರಯಾಣಿಸುತ್ತಿದ್ದ ಜಪಾನ್‌ನ ಮಿಲಿಟರಿ ಹೆಲಿಕಾಪ್ಟರ್, ಒಕಿನಾವಾದ ದಕ್ಷಿಣ ಪ್ರಾಂತ್ಯದಲ್ಲಿ ಗುರುವಾರ ರಾಡಾರ್ ಸಂಪರ್ಕ ಕಳೆದುಕೊಂಡಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಸಂಜೆ 4.30ರ ಸುಮಾರಿಗೆ ವಿಮಾನ ಕಣ್ಮರೆಯಾಗಿದೆ. ಮಿಲಿಟರಿ ಪಡೆಗಳು ಹೆಲಿಕಾಪ್ಟರ್ ಪತ್ತೆಯಲ್ಲಿ ತೊಡಗಿವೆ ಎಂದು ವರದಿ ತಿಳಿಸಿದೆ. ಹೆಲಿಕಾಪ್ಟರ್ ದಕ್ಷಿಣದ ಕುಮಾಟೊ ಪ್ರದೇಶದ ಮಿಲಿಟರಿ ಶಾಖೆಗೆ ಸೇರಿದ್ದಾಗಿದೆ ಎಂದು ಸರ್ಕಾರಿ ಮಾಧ್ಯಮ ಎನ್‌ಎಚ್‌ಕೆ ವರದಿ ಮಾಡಿದೆ. ಒಕಿನಾವಾದ ಮಿಯಾಕೊ ದ್ವೀಪದಿಂದ ಟೇಕಾಫ್ ಆದ ಹೆಲಿಕಾಪ್ಟರ್, ಒಂದು ಗಂಟೆಯಲ್ಲಿ ಹಿಂದಿರುಗಬೇಕಿತ್ತು. ಹೆಲಿಕಾಪ್ಟರ್‌ನಲ್ಲಿರುವ ಯೋಧರ ಪ್ರಾಣ ಉಳಿಸುವುದು ನಮ್ಮ ಆದ್ಯತೆ ಎಂದು ಫ್ಯುಮಿಯೊ ಕಿಷಿಡಾ ಮಾಧ್ಯಗಳಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಏಪ್ರಿಲ್ 14ರಂದು ಸುಪ್ರೀಂನಲ್ಲಿ ಜ್ಞಾನವಾಪಿ ಮಸೀದಿ ಪ್ರಕರಣದ ವಿಚಾರಣೆ

ಮುಸ್ಲಿಂ ಕಡೆಯಿಂದ ಅರ್ಜಿ ಸಲ್ಲಿಕೆಗೆ ಅವಕಾಶ

ನವದೆಹಲಿ, ಏ.6– ವಾರಣಾಸಿಯ ಜ್ಞಾನವಾಪಿ ಮಸೀದಿ ಪ್ರಕರಣದ ವಿಚಾರಣೆಯನ್ನು ಸುಪ್ರೀಂಕೋರ್ಟ್ ಏಪ್ರಿಲ್ 14ರಂದು ನಡೆಸಲಿದೆ. ಇದರೊಂದಿಗೆ ನ್ಯಾಯಾಲಯವು ಅರ್ಜಿಯೊಂದಕ್ಕೆ ಸಂಬಂಧಿಸಿದಂತೆ ಮುಸ್ಲಿಂ ಪರವಾಗಿ ಪರಿಹಾರವನ್ನು ನೀಡಿದೆ. ಮಸೀದಿ ಆವರಣದಲ್ಲಿ ಸ್ನಾನ ಮಾಡಲು ಅನುಮತಿ ಕೋರಿ ಅರ್ಜಿ ಸಲ್ಲಿಸಲು ಮುಸ್ಲಿಂ ಪಕ್ಷಕ್ಕೆ ಅವಕಾಶ ನೀಡುವುದಾಗಿ ನ್ಯಾಯಾಲಯ ಹೇಳಿದೆ.



ಏಪ್ರಿಲ್ 21ರಂದು ಹಿಂದೂ ಪರ ಅರ್ಜಿಗಳ ವಿಚಾರಣೆ: ಹಿಂದೂಗಳ ಪರ ಅರ್ಜಿಗಳನ್ನು ಆಲಿಸಲು ಸುಪ್ರೀಂ ಕೋರ್ಟ್ ಒಪ್ಪಿಕೊಂಡಿದೆ. ಈ ಅರ್ಜಿಗಳ ವಿಚಾರಣೆ ಏಪ್ರಿಲ್ 21ರಂದು ನಡೆಯಲಿದೆ. ಮುಖ್ಯ ನ್ಯಾಯಮೂರ್ತಿ ಡಿವೈ ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಪಿ ಎಸ್ ನರಸಿಂಹ ಮತ್ತು ಜೆಬಿ ಪರ್ದಿವಾಲಾ ಅವರ ಪೀಠವು ವಿಚಾರಣೆ ನಡೆಸುತ್ತಿದೆ. ಜ್ಞಾನವಾಪಿ ಮಸೀದಿಗೆ ಸಂಬಂಧಿಸಿದಂತೆ ವಾರಣಾಸಿ ನ್ಯಾಯಾಲಯದಲ್ಲಿ ಅರ್ಜಿಗಳನ್ನು ಸಲ್ಲಿಸಲಾಗಿದೆ ಎಂದು ವಕೀಲ ವಿಷ್ಣು ಜೈನ್ ನ್ಯಾಯಾಲಯಕ್ಕೆ ತಿಳಿಸಿದರು. ಅಲ್ಲದೆ ಜಿಲ್ಲಾ ನ್ಯಾಯಾಧೀಶರು ಈ ವಿಷಯದ ನಿರ್ಧಾರವನ್ನು ಐದು ಬಾರಿ ಮುಂದೂಡಿದ್ದಾರೆ. ವಕೀಲ ವಿಷ್ಣು ಜೈನ್ ಅವರ ವಾದವನ್ನು ಆಲಿಸಿದ ಸಿಜೆಐ, ಏಪ್ರಿಲ್ 21ರಂದು ಪ್ರಕರಣವನ್ನು ಆಲಿಸುವುದಾಗಿ ಹೇಳಿದರು.

ಜ್ಞಾನವಾಪಿ ಮಸೀದಿ ಸಂಕೀರ್ಣದಲ್ಲಿ 'ಶಿವಲಿಂಗ' ಕಂಡುಬಂದಿದೆ. ವಾರಣಾಸಿ ಜಿಲ್ಲಾ ನ್ಯಾಯಾಧೀಶರ ಮುಂದೆ ಅರ್ಜಿ ಸಲ್ಲಿಸಲು ಹಿಂದೂ ಪಕ್ಷಗಳಿಗೆ ಅವಕಾಶ ನೀಡಲಾಯಿತು. ಅಲಹಾಬಾದ್ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಅಂಜುಮನ್ ಇಂತೇಜಾಮಿಯಾ ಮಸೀದಿ ಸಮಿತಿಯ ಮೇಲ್ಮನವಿಯ ಬಗ್ಗೆ ಮೂರು ವಾರಗಳಲ್ಲಿ ಉತ್ತರವನ್ನು ಸಲ್ಲಿಸುವಂತೆ ಸುಪ್ರೀಂ ಕೋರ್ಟ್ ಹಿಂದೂ ಪಕ್ಷಗಳಿಗೆ ಸೂಚಿಸಿದೆ.

ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗಕ್ಕೆ ನೇಮಕ



ಮೈಸೂರು, ಏ.6– ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಮೈಸೂರಿನ ಕುರುಬಾರಹಳ್ಳಿ ನಿವಾಸಿ ಶ್ರೀಮತಿ ಎಂ.ಎ.ಕಮಲ ಅವರನ್ನು ನೇಮಕ ಮಾಡಲಾಗಿದೆ ಎಂದು ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಎಸ್.ಮಧು ಬಂಗಾರಪ್ಪ ತಿಳಿಸಿದ್ದಾರೆ.

2 ಲಕ್ಷ ಕೋಟಿ ವೆಚ್ಚದಲ್ಲಿ ಪಂಚರತ್ನ ಯೋಜನೆ ಜಾರಿ: ಹೆಚ್‌ಡಿಕೆ





ಕಂಪಲಾಪುರ, ಏ.6– ರಾಜ್ಯದ ಆರೂವರೆ ಕೋಟಿ ಜನರ ಹಿತಕ್ಕಾಗಿ ಅಂದಾಜು 2 ಲಕ್ಷ ಕೋಟಿ ವೆಚ್ಚದಲ್ಲಿ ಪಂಚರತ್ನ ಯೋಜನೆ ಜಾರಿಗೊಳಿಸಲಾಗುವುದು ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಘೋಷಿಸಿದರು.

ಪಿರಿಯಾಪಟ್ಟಣ ತಾಲೂಕಿನ ಹೆಬ್ಬಾಗಿಲು ಕಂಪಲಾಪುರದ ವಿನಾಯಕ ಸರ್ಕಲ್‌ನಲ್ಲಿ ಜೆಡಿಎಸ್ ಅಭ್ಯರ್ಥಿ ಕೆ.ಮಹದೇವ್ ಪರ ಮತಯಾಚಿಸಿ ಮಾತನಾಡಿದ ಅವರು, ಜೆಡಿಎಸ್ ಪಂಚರತ್ನ ರಥಯಾತ್ರೆ ಕೋಲಾರದ ಮುಳಬಾಗಿಲಿನಿಂದ ಪ್ರಾರಂಭವಾಗಿ ಮೈಸೂರಿನಲ್ಲಿ ಅಂತ್ಯಗೊಂಡಿತು. ಈಗ ಇಡೀ ರಾಜ್ಯ ಸಂಚರಿಸಿ ನಮ್ಮ ಅಭ್ಯರ್ಥಿಗಳ ಪರ ಪ್ರಚಾರ ಮಾಡುತ್ತಿದ್ದೇನೆ. ನಾನು ಪ್ರತಿದಿನ 18 ಗಂಟೆ ಪ್ರವಾಸ ಮಾಡುತ್ತಿದ್ದು, 2 ಬಾರಿ ಹೃದಯ ಶಸ್ತ್ರಚಿಕಿತ್ಸೆಯಾಗಿದ್ದರೂ ಜೀವ ಲೆಕ್ಕಿಸದೇ ನಿಮಗಾಗಿ ಹೋರಾಡುತ್ತಿದ್ದೇನೆ. ಮೇ 10ಕ್ಕೆ ವಿಧಾನಸಭೆ ಚುನಾವಣೆ ಘೋಷಣೆಯಾಗಿದೆ. ಆದ್ದರಿಂದ ಸ್ಪಷ್ಟ ಬಹುಮತ ನೀಡಿ ದೇವೇಗೌಡರಿಗೆ ನನಗೆ ಶಕ್ತಿ ನೀಡಿ ಎಂದರು.

ಪಿರಿಯಾಪಟ್ಟಣ ನನ್ನ ಆತ್ಮೀಯ ಕ್ಷೇತ್ರ: ರಾಜ್ಯದ ಎಲ್ಲಾ ಕ್ಷೇತ್ರಗಳನ್ನು ಹೋಲಿಸಿದರೆ ಪಿರಿಯಾಪಟ್ಟಣ ನನ್ನ ಅತ್ಯಂತ ಆತ್ಮೀಯ ಕ್ಷೇತ್ರ. ಏಕೆಂದರೆ ಈ ಭಾಗಕ್ಕೆ ನಾನು ಯಾವಾಗ ಭೇಟಿ ಕೊಡುವಾಗಲೂ ನಾಲ್ಕೈದು ಗಂಟೆ ತಡವಾದರೂ ನನಗೋಸ್ಕರ ಕಾಯುತ್ತಿರುತ್ತೀರಿ. ಈ ಋಣವನ್ನು ನಾನು ಯಾವ ರೀತಿ ತೀರಿಸಲಿ. 2 ಬಾರಿ ಸ್ಪರ್ಧಿಸಿ ಸೋತು 3ನೇ ಬಾರಿಗೆ ನಿಮ್ಮೆಲ್ಲರ ಆಶೀರ್ವಾದದಿಂದ ಕೆ.ಮಹದೇವ್ ಶಾಸಕರಾಗಿದ್ದಾರೆ. ಅತೀ ಕಡಿಮೆ ಅವಧಿಯಲ್ಲಿ ಜನಪರ ಕೆಲಸ ಮಾಡಿ ನಿಮ್ಮೆಲ್ಲರ ಹಿತಕ್ಕಾಗಿ ಶ್ರಮಿಸಿದ್ದಾರೆ. ಮತ್ತೊಮ್ಮೆ ಮಹದೇವ್ ಅವರಿಗೆ ನಿಮ್ಮ ಮತ ನೀಡಿ ಶಾಸಕರಾಗಿ ಮಾಡಿ ಎಂದರು.

ಇದಕ್ಕೂ ಮುನ್ನಾ ಗ್ರಾಮದ ಎಸ್‌ಎಂಎಸ್ ಕಲ್ಯಾಣ ಮಂಟಪದಿಂದ ಕುಮಾರಸ್ವಾಮಿ ರೋಡ್ ಶೋ ನಡೆಸಿದರು. ಈ ವೇಳೆ ಹಿಂದೆಂದೂ ಕಾಣದ ಜನಸ್ತೋಮ ಕಿಕ್ಕಿರಿದು ತುಂಬಿತ್ತು ರಸ್ತೆಯುದ್ದಕ್ಕೂ ಕುಮಾರಸ್ವಾಮಿ ಜನರತ್ತ ಕೈ ಮುಗಿದು ಮತಯಾಚಿಸಿದರು. ನಂತರ ವಿನಾಯಕ ಸರ್ಕಲ್‌ನಲ್ಲಿ ಭಾರೀ ಗಾತ್ರದ ಸೇಬಿನ ಹಾರವನ್ನು ಕ್ರೇನ್ ಮೂಲಕ ಹಾಕಲಾಯಿತು. ನಂತರ ಕುಮಾರಸ್ವಾಮಿ ರಾವಂದೂರು, ಕಿತ್ತೂರು ಮಾರ್ಗ ತೆರಳಿದರು.

ಸೇಬಿಗಾಗಿ ಕಿತ್ತಾಡಿದ ಕಾರ್ಯಕರ್ತರು: ಅತ್ತ ಕುಮಾರಸ್ವಾಮಿ ತೆರಳುತ್ತಿದ್ದಂತೆ ಇತ್ತ ಅವರಿಗೆ ಹಾಕಿದ್ದ ಭಾರೀ ಗಾತ್ರದ ಸೇಬಿನ ಹಾರವನ್ನು ಕ್ರೇನ್‌ನಿಂದ ಇಳಿಸುತ್ತಿದ್ದಂತೆ ಬಿಸಿಲಿನಿಂದ ದಣಿವರಿದಿದ್ದ ಕಾರ್ಯಕರ್ತರು ಸೇಬಿಗಾಗಿ ಒಬ್ಬರ ಮೇಲೊಬ್ಬರು ಬಿದ್ದು ಕಿತ್ತಾಡಿದ ದೃಶ್ಯ ಕಂಡು ಬಂದಿತು.

ಭರ್ಜರಿ ವ್ಯಾಪಾರ: ಇದೇ ಪ್ರಥಮ ಬಾರಿಗೆ ಚುನಾವಣಾ ಪ್ರಚಾರಕ್ಕೆ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಆಗಮಿಸಿದ್ದರಿಂದ ತಾಲೂಕಿನ ಮೂಲೆ ಮೂಲೆಯಿಂದ ಕಂಪಲಾಪುರಕ್ಕೆ ಕಾರ್ಯಕರ್ತರು ಆಗಮಿಸಿದ್ದರು. ಇದರಿಂದ ಬೇಕರಿ, ಟೀ ಅಂಗಡಿಗಳಿಗೆ ಭರ್ಜರಿ ವ್ಯಾಪಾರವಾಯಿತು.

ಟ್ರಾಫಿಕ್ ಜಾಮ್: ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ತಾಲೂಕಿನ ಪ್ರಮುಖ ಗ್ರಾಮಗಳಲ್ಲಿ ಚುನಾವಣಾ ಪ್ರಚಾರ ನಡೆಸಲು ಗುರುವಾರ ಬೆಳಗ್ಗೆ 9 ಗಂಟೆಗೆ ಸಮಯ ನಿಗದಿಯಾಗಿತ್ತಾದರೂ ಕಂಪಲಾಪುರಕ್ಕೆ ಆಗಮಿಸಿದ್ದು ಮಧ್ಯಾಹ್ನ 1 ಗಂಟೆಗೆ. ಹೀಗಾಗಿ ಬೆಳಗ್ಗೆಯಿಂದಲೇ ತಾಲೂಕಿನ ವಿವಿಧೆಡೆಗಳಿಂದ ಕಾರ್ಯಕರ್ತರು ಗ್ರಾಮಕ್ಕೆ ಆಗಮಿಸಿದ್ದರಿಂದ ಅಂಗಡಿ ಮುಂಗಟ್ಟುಗಳ ಮುಂದೆ ದ್ವಿಚಕ್ರ ವಾಹನಗಳನ್ನು ನಿಲ್ಲಿಸಿದ್ದರು. ಅಲ್ಲದೇ ನಾಲ್ಕು ಸಾವಿರಕ್ಕೂ ಹೆಚ್ಚು ಮಂದಿ ಜಮಾಯಿಸಿದ್ದರಿಂದ ಕಂಪಲಾಪುರ ರಾಷ್ಟ್ರೀಯ ಹೆದ್ದಾರಿ 275 ಸಂಪೂರ್ಣ ಕಿಲೋ ಮೀಟರ್‌ಗಟ್ಟಲೇ ಟ್ರಾಫಿಕ್ ಜಾಮ್ ಆಗಿತ್ತು. ಪೊಲೀಸರು ಟ್ರಾಫಿಕ್ ಜಾಮ್ ತೆರವುಗೊಳಿಸಲು ಹರಸಾಹಸಪಟ್ಟರು.

ಈ ವೇಳೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ, ಕ್ಷೇತ್ರದ ಅಭ್ಯರ್ಥಿ ಕೆ.ಮಹದೇವ್, ಜಿಲ್ಲಾಧ್ಯಕ್ಷ ನರಸಿಂಹ ಸ್ವಾಮಿ, ಮೈಮುಲ್ ಅಧ್ಯಕ್ಷ ಪಿ.ಎಂ. ಪ್ರಸನ್ನ, ಅಣ್ಣಯ್ಯಶೆಟ್ಟಿ ಇತರರಿದ್ದರು.

2023ಕ್ಕೆ ಜೆಡಿಎಸ್ ಸರ್ಕಾರ

ರಾಜ್ಯದ ಜನ ಕಾಂಗ್ರೆಸ್ ಹಾಗೂ ಬಿಜೆಪಿ ದುರಾಡಳಿತದಿಂದ ಬೇಸತ್ತಿದ್ದಾರೆ. ಬಡವರ, ದೀನ ದಲಿತರ ಉದ್ಧಾರಕ್ಕಾಗಿ ಪ್ರಾದೇಶಿಕ ಪಕ್ಷ ಜೆಡಿಎಸ್ ಬೆಂಬಲಿಸಿ. ಒಂದು ಬಾರಿ ಪೂರ್ಣ ಬಹುಮತ ನೀಡಿ ಎಂದ ಕುಮಾರಸ್ವಾಮಿ ನಾನು ಬಿಜೆಪಿ, ಕಾಂಗ್ರೆಸ್‌ನೊಂದಿಗೆ ಯಾವುದೇ ಕಾರಣಕ್ಕೂ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ ಎಂದರು.

ರಾಜ್ಯದಲ್ಲಿ ಈ ಬಾರಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಖಚಿತ

ಕಾಂಗ್ರೆಸ್ ಅಭ್ಯರ್ಥಿಯೂ ಆದ ಶಾಸಕ ಹೆಚ್.ಪಿ.ಮಂಜುನಾಥ್ ವಿಶ್ವಾಸ



ಹುಣಸೂರು, ಏ.6– ಹುಣಸೂರಿನಲ್ಲಿ ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಉತ್ತಮ ಸಾಧನೆ ಮಾಡಲಿದೆ. ಮತದಾರರ ಆಶೀರ್ವಾದದಿಂದ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ ಎಂದು ಶಾಸಕ ಹೆಚ್.ಪಿ. ಮಂಜುನಾಥ್ ವಿಶ್ವಾಸ ವ್ಯಕ್ತಪಡಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ದಸಂಸ ಕೆಲ ಮುಖಂಡರು ದಲಿತರಿಗೆ ಅಧಿಕಾರ ನೀಡಿಲ್ಲ ಎಂಬ ಆರೋಪದ ಬಗ್ಗೆ ಮಾತನಾಡಿದ ಅವರು, ಇವರೆಲ್ಲರೂ ನನ್ನಿಂದ ಸಹಾಯ ಪಡೆದವರು. ಕೆಲ ವರ್ಷಗಳಿಂದ ನಮ್ಮ ವಿರೋಧಿ ಬಣದಲ್ಲಿದ್ದಾರೆ. ನಾನು ಅವರ ಸುಳ್ಳು ಆರೋಪಗಳಿಗೆ ಉತ್ತರಿಸುವ ಅಗತ್ಯವಿಲ್ಲ. ಮಂಜುನಾಥ್ ಏನು ಎಂಬುದು ತಾಲೂಕಿನ ಜನತೆಗೆ ಗೊತ್ತಿದೆ. ದಲಿತರ ಮೀಸಲಾತಿ, ನಾಯಕತ್ವ, ಪಕ್ಷದ ಸ್ಥಾನ ಮಾನದ ಬಗ್ಗೆ ಪಕ್ಷದ ಪ್ರಾಮಾಣಿಕ ಕಾರ್ಯಕರ್ತರು ಮತ್ತು ಮುಖಂಡರು ಕೇಳುವ ಪ್ರಶ್ನೆಗೆ ನಾನು ಉತ್ತರಿಸುತ್ತೇನೆ ಎಂದರು.

ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಸಹಕಾರಿ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎಂದು ಇದೇ ವೇಳೆ ಆರೋಪಿಸಿದರು.

ಗೋಷ್ಠಿಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಟಿ.ವಿ.ನಾರಾಯಣ್, ನಗರಾಧ್ಯಕ್ಷ ರಮೇಶ್, ಕಾರ್ಯಾಧ್ಯಕ್ಷ ಪುಟ್ಟರಾಜು ಇದ್ದರು.

ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಧ್ರುವ ಬಿರುಸಿನ ಪ್ರಚಾರ



ಮಲ್ಕುಂಡಿ, ಏ.6– ನಂಜನಗೂಡು ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಧ್ರುವನಾರಾಯಣ್ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಗುರುವಾರ ಬಿರುಸಿನ ಪ್ರಚಾರ ನಡೆಸಿದರು.

ಕ್ಷೇತ್ರದ ಚನ್ನಪಟ್ಟಣ, ಹಂಚೀಪುರ, ಹೊಸವೀಡು, ಹೊಸವೀಡುಹುಂಡಿ, ಮಡುವಿನಹಳ್ಳಿ, ಬಳ್ಳೂರುಹುಂಡಿ ಗ್ರಾಮಗಳಲ್ಲಿ ಬಿರುಸಿನ ಪ್ರಚಾರ ನಡೆಸಿ ಮಾತನಾಡಿದ ಅವರು, ನನ್ನ ತಂದೆ ಆರ್.ಧ್ರುವನಾರಾಯಣ್ ಸಂಸದರಾಗಿದ್ದ ಸಂದರ್ಭ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಅವರ ಅಭಿವೃದ್ಧಿ ಕಾರ್ಯಗಳೇ ನನ್ನ ಗೆಲುವಿಗೆ ಶ್ರೀರಕ್ಷೆ ಅವರು ನಮ್ಮಿಂದ ದೈಹಿಕವಾಗಿ ದೂರವಾಗಿದ್ದರೂ, ಮಾನಸಿಕವಾಗಿ ನಮ್ಮ ಜೊತೆಯಲ್ಲಿದ್ದಾರೆ. ಅವರಿಗೆ ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿ ಮಾಡಬೇಕು ಹಾಗೂ ಹೆಡಿಯಾಲ ಭಾಗದಲ್ಲಿ ಕಾಡಾನೆಗಳಿಂದ ರೈತರ ಫಸಲನ್ನು ರಕ್ಷಿಸಲು ಯೋಜನೆ ರೂಪಿಸಿದ್ದರು. ಆದರೆ ದೇವರು ನಿಮ್ಮಿಂದ ಅವರನ್ನು ದೂರ ಮಾಡಿದ್ದಾರೆ. ಅವರ ಕನಸನ್ನು ನನಸು ಮಾಡುವ ಜವಾಬ್ದಾರಿ ನನ್ನ ಮೇಲಿದೆ. ಇದು ನನ್ನ ಚುನಾವಣೆ ಅಲ್ಲ. ನಿಮ್ಮೆಲ್ಲರ ಚುನಾವಣೆ. ನನ್ನ ತಂದೆ ನಿಮ್ಮ ಸಮಸ್ಯೆಗಳಿಗೆ ಹೇಗೆ ಸ್ಪಂದಿಸುತ್ತಿದ್ದರೋ, ಅದೇ ರೀತಿ ಅವರ ಹಾದಿಯಲ್ಲೇ ನಾನೂ ಕೂಡ ನಿಮ್ಮೆಲ್ಲರ ಕಷ್ಟ ಸುಖಗಳಿಗೆ ಸ್ಪಂದಿಸುತ್ತೇನೆ. ಹೀಗಾಗಿ ನನಗೊಂದು ಅವಕಾಶ ಮಾಡಿಕೊಡಿ ಎಂದು ಮನವಿ ಮಾಡಿದರು.

ಈಗಾಗಲೇ ಕ್ಷೇತ್ರದ ಪ್ರತಿ ಗ್ರಾಮದಲ್ಲೂ ಯುವಕರು, ರೈತರು ನನ್ನನ್ನು ಅದ್ದೂರಿಯಾಗಿ ಸ್ವಾಗತಿಸಿ ಬರಮಾಡಿಕೊಳ್ಳುತ್ತಿದ್ದಾರೆ. ಅಲ್ಲದೇ ಹಲವು ಪಕ್ಷಗಳನ್ನು ತೊರೆದು ಕಾಂಗ್ರೆಸ್‌ಗೆ ಸೇರ್ಪಡೆಗೊಳ್ಳುತ್ತಿರುವುದು ಸಂತಸದ ವಿಚಾರ. ಈ ಬಾರಿಯ ಚುನಾವಣೆಯಲ್ಲಿ ಹೆಚ್ಚಿನ ಮತಗಳಿಂದ ಆಯ್ಕೆ ಮಾಡುವಂತೆ ಮನವಿ ಮಾಡಿದರು.

ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್ ಮಾತನಾಡಿ, ರಾಜ್ಯದ ಬಿಜೆಪಿ ಸರ್ಕಾರದಿಂದ ಯಾವುದೇ ಅಭಿವೃದ್ಧಿಯಾಗಿಲ್ಲ. ಕೇವಲ ಭ್ರಷ್ಟಾಚಾರದಲ್ಲಿ ನಿರತವಾಗಿದೆ. ಕಾಂಗ್ರೆಸ್ ಸರ್ಕಾರದ ಸಾಧನೆಗಳನ್ನು ನಾವೇ ಮಾಡಿರುವುದು ಎಂದು ಸುಳ್ಳು ಹೇಳಿ ಮತ ಹಾಕಿಸಿಕೊಳ್ಳುತ್ತಾರೆ. ಹೀಗಾಗಿ ಈ ಬಾರಿ ಧ್ರುವನಾರಾಯಣ್ ಅವರ ಆಸೆಯಂತೆ ಕ್ಷೇತ್ರದ ಅಭಿವೃದ್ಧಿಗಾಗಿ ಅವರ ಪುತ್ರ ದರ್ಶನ್ ಅವರನ್ನು ಆಯ್ಕೆ ಮಾಡಬೇಕಿದೆ ಎಂದರು.

ಇದೇ ವೇಳೆ ಹುರ ಗ್ರಾಪಂ ಉಪಾಧ್ಯಕ್ಷೆ ತಾಯಮ್ಮ ಸೇರಿದಂತೆ 50ಕ್ಕೂ ಹೆಚ್ಚು ಮಂದಿ ಯುವಕರು ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಯಾದರು. ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಹಿಂದುಳಿದ ವರ್ಗಗಳ ಜಿಲ್ಲಾಧ್ಯಕ್ಷ ಕೆ.ಮಾರುತಿ, ಗ್ರಾಪಂ ಅಧ್ಯಕ್ಷ ಸಿದ್ದರಾಜು, ಕಾರ್ಮಿಕ ವಿಭಾಗದ ಅಧ್ಯಕ್ಷ ಮಣಿಕಂಠ, ಗ್ರಾಪಂ ಸದಸ್ಯ ಪಾಂಡು, ಉಸ್ತುವಾರಿ ಸೋಮೇಶ್, ಜಿಪಂ ಮಾಜಿ ಅಧ್ಯಕ್ಷೆ ಲತಾ, ಎಸ್ಸಿ ಘಟಕದ ಜಿಲ್ಲಾ ಉಪಾಧ್ಯಕ್ಷ ಮಹದೇವು, ಹುಲ್ಲಹಳ್ಳಿ ಬ್ಲಾಕ್ ಅಧ್ಯಕ್ಷ ಶ್ರೀಕಂಠನಾಯಕ, ಮುಖಂಡರಾದ ಅಭಿನಂದನ್ ಪಟೇಲ್, ಬಸವಣ್ಣ, ರಾಜೇಶ್, ಶಂಕರಪ್ಪ, ಜಿಪಂ ಪ್ರಧಾನ ಕಾರ್ಯದರ್ಶಿ ಜಯಮಾಲ, ಮಮತಾ, ಸೌಭಾಗ್ಯ, ನಗರ ಬ್ಲಾಕ್ ಅಧ್ಯಕ್ಷೆ ರೇಣುಕಾ, ಪರಿಮಳ ಸೇರಿದಂತೆ ಇತರರಿದ್ದರು.

ಧನಂಜೇಗೌಡಗೆ ಜಿಲ್ಲಾ ಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿ

ಹೆಚ್.ಡಿ.ಕೋಟೆ, ಏ.6– ಕೃಷಿ ಇಲಾಖೆ ಹಾಗೂ ಆತ್ಮಯೋಜನೆ ಜಂಟಿಯಾಗಿ ಕೊಡ ಮಾಡುವ ಜಿಲ್ಲಾ ಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿಗೆ ತಾಲೂಕಿನ ಬೆಳಗನಹಳ್ಳಿ ಗ್ರಾಮದ ರೈತ ಧನಂಜೇಗೌಡ ಆಯ್ಕೆಯಾಗಿದ್ದಾರೆ.



ತಾಲೂಕಿನ ಬೆಳಗನಹಳ್ಳಿ ಗ್ರಾಮದ ಕೆ.ಶಿವಲಿಂಗಯ್ಯ ಅವರ ಪುತ್ರ ಬಿ.ಎಸ್.ಧನಂಜೇಗೌಡ ತಮ್ಮ 9 ಎಕರೆ ಕೃಷಿ ಭೂಮಿಯಲ್ಲಿ ಸ್ವಂತ ಅನುಭವದೊಂದಿಗೆ ಹಲವಾರು ವಿನೂತನ ಪ್ರಯೋಗಗಳನ್ನು ಮಾಡುತ್ತಾ ಕೃಷಿಯಲ್ಲಿ ಸಾಕಷ್ಟು ಲಾಭ ಗಳಿಸಬಹುದು ಎಂಬುದನ್ನು ಸಾಧಿಸಿ ತೋರಿಸಿದ್ದು, ಈ ಬಾರಿಯ ಜಿಲ್ಲಾ ಶ್ರೇಷ್ಠ ಕೃಷಿಕ ಪ್ರಶಸ್ತಿಗೆ ಪಾತ್ರರಾಗುವಂತೆ ಮಾಡಿದೆ. ಬಿ.ಎಸ್.ಧನಂಜೇಗೌಡ ಓದಿದ್ದು 9ನೇ ತರಗತಿ. ಆದರೂ ಕೃಷಿ ಬಗ್ಗೆ ಅಪಾರ ಜ್ಞಾನ ಹೊಂದಿದ್ದಾರೆ. ಅದರಲ್ಲೂ ರೇಷ್ಮೆ, ಪಶು ಸಂಗೋಪನೆ, ಹೈನುಗಾರಿಕೆ, ಆಡು, ಕೋಳಿಗಳನ್ನು ಸಾಕುವ ಮೂಲಕ ಸಾಕಷ್ಟು ಪ್ರಗತಿ ಸಾಧಿಸಿದ್ದಾರೆ. ಅತ್ಯಂತ ಕಡಿಮೆ ವೆಚ್ಚದಲ್ಲಿ ಬೆಳೆಗಳನ್ನು ಬೆಳೆದು ಅಧಿಕ ಲಾಭ ಪಡೆಯುವ ಮೂಲಕ ಮಾದರಿ ಕೃಷಿಕ ಎನಿಸಿಕೊಂಡಿದ್ದಾರೆ. ಅಲ್ಲದೆ ಬೆಳೆಗಳಿಗೆ ತಾವೇ ತಯಾರು ಮಾಡಿದ ಸಾವಯವ ಗೊಬ್ಬರ ಬಳಸಿರುವುದು ಮತ್ತೊಂದು ವಿಶೇಷ.

ಕೃಷಿಕ ಬಿ.ಎಸ್.ಧನಂಜೇಗೌಡರ ಜಮೀನಿಗೆ ಜಿಲ್ಲಾ ತರಬೇತಿ ಕೇಂದ್ರದ ಉಪ ಕೃಷಿ ನಿರ್ದೇಶಕ ಯೋಗೇಶ್ವರ್, ಕೃಷಿ ಸಂಶೋಧನಾ ಕೇಂದ್ರದ ಸಹಾಯಕ ಡಾ.ಉಮೇಶ್, ಪ್ರಾಧ್ಯಾಪಕ ಸಹಾಯಕ ನಿರ್ದೇಶಕ ಕೃಷ್ಣಮೂರ್ತಿ, ಪಶುಸಂಗೋಪನೆ ಅಧಿಕಾರಿ ಸುನೀಲ್ ಕುಮಾರ್, ಸಹಾಯಕ ಅಧಿಕಾರಿ ರಾಹುಲ್, ಆತ್ಮ ಸಂಸ್ಥೆ ಉಪ ಯೋಜನಾ ನಿರ್ದೇಶಕಿ ಕುಮುದಾ, ತಾಲೂಕು ತಾಂತ್ರಿಕ ವ್ಯವಸ್ಥಾಪಕ ರೇಷ್ಮೆ ಡಾ.ಡಿ.ಪಿ.ರಾಜೇಶ್, ಸಹಾಯಕ ತಾಂತ್ರಿಕ ವ್ಯವಸ್ಥಾಪಕ ವಿನಯ್ ಮುಂತಾದವರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು.

ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಗೆ ದಸಂಸ ಬೆಂಬಲ



ಹುಣಸೂರು, ಏ.6– ಈ ಬಾರಿ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಜಿ.ಡಿ. ಹರೀಶ್‌ಗೌಡರನ್ನು ತಾಲೂಕಿನ ದಲಿತ ಸಂಘರ್ಷ ಸಮಿತಿ ಬೆಂಬಲಿಸಲಿದೆ ಎಂದು ದಸಂಸ ಜಿಲ್ಲಾ ಸಂಘಟನಾ ಸಂಚಾಲಕ ನಿಂಗರಾಜ್ ಮಲ್ಲಾಡಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹುಣಸೂರು ರಾಜ್ಯದಲ್ಲೇ ಒಂದು ಮಾದರಿ ವಿಧಾನಸಭಾ ಕ್ಷೇತ್ರವಾಗಿದೆ. ಈ ಕ್ಷೇತ್ರವನ್ನು ಸಾಮಾಜಿಕ ನ್ಯಾಯದ ಹರಿಕಾರ ಡಿ.ದೇವರಾಜ ಅರಸು ಪ್ರತಿನಿಧಿಸಿ, ರಾಜ್ಯದ ಮುಖ್ಯಮಂತ್ರಿಯಾಗಿ ಅನೇಕ ಮಾದರಿ ಕಾನೂನುಗಳನ್ನು ಜಾರಿಗೆ ತರಲು ಶ್ರಮಿಸಿದರು. ಹೀಗಾಗಿ ಇಡೀ ದೇಶವೇ ಇವರನ್ನು ಗೌರವದಿಂದ ಕಾಣುವಂತಾಗಿತ್ತು. ಹುಣಸೂರು ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರು ಹೆಚ್ಚು ವಾಸಿಸುವ ಕ್ಷೇತ್ರ. ಈ ಸಮುದಾಯಗಳು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿವೆ. ಇಲ್ಲಿವರೆಗೂ ನಮ್ಮನ್ನು ಆಳಿದ ರಾಜಕಾರಣಿಗಳು ಬಡವರ, ದಲಿತರ ಪರ ಕೆಲಸ ಮಾಡದೇ ನಮ್ಮನ್ನು ಕಡೆಗಣಿಸುತ್ತಾ ಬಂದಿದ್ದಾರೆ. ಚುನಾವಣೆ ವೇಳೆ ಹೇಳುವುದು ಒಂದು, ಗೆದ್ದ ನಂತರ ಮಾಡುವುದು ಮತ್ತೊಂದು ಎಂಬಂತಾಗಿದೆ. ನಮ್ಮ ತಾಲೂಕಿನ ಬಡವರಿಗೆ ಭಾಷಣ ಮಾಡುವ ನಾಯಕನ ಬದಲಿಗೆ ನಮ್ಮ ಕಷ್ಟ ಸುಖಗಳಿಗೆ ಸ್ಪಂದಿಸುವ ನಾಯಕ ಅಗತ್ಯ. ಹೀಗಾಗಿ ನಮ್ಮ ದಸಂಸ ತಾಲೂಕು ಘಟಕ ಸಭೆ ನಡೆಸಿ ಚುನಾವಣೆಯಲ್ಲಿ ಯಾರನ್ನು ಬೆಂಬಲಿಸಬೇಕೆಂದು ತೀರ್ಮಾನಿಸಲಾಗಿದೆ. ಅದರಂತೆ ಜೆಡಿಎಸ್ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡರನ್ನು ಬೆಂಬಲಿಸಲಾಗುವುದು ಎಂದರು.

ಹರೀಶ್‌ಗೌಡರು ಯುವಕರಾಗಿದ್ದು, ಎಲ್ಲಾ ಜಾತಿಯ ಬಡವರು, ದಲಿತರು, ಅಸಹಾಯಕರು, ಅಂಗವಿಕಲರು, ನೊಂದ ಜನರನ್ನು ಪ್ರೀತಿ, ವಿಶ್ವಾಸ ಹಾಗೂ ಗೌರವದಿಂದ ಕಾಣುವ ಮನಸ್ಥಿತಿ ಹೊಂದಿದ್ದಾರೆ. ಹೀಗಾಗಿ ಈ ಬಾರಿಯ ಚುನಾವಣೆಯಲ್ಲಿ ಇವರನ್ನು ಬೆಂಬಲಿಸಲು ಸಭೆಯಲ್ಲಿ ತೀರ್ಮಾನಿಸಿರುವುದರಿಂದ ಇವರ ಗೆಲುವಿಗೆ ದಸಂಸ ಕಾರ್ಯಕರ್ತರು ಶ್ರಮಿಸುವಂತೆ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ದಲಿತ ಮುಖಂಡರಾದ ಕೆಂಪರಾಜು, ಶೇಖರ, ಗಜೇಂದ್ರ ಉಪಸ್ಥಿತರಿದ್ದರು.



ತಿ.ನರಸೀಪುರದ ಭೈರಾಪುರದಲ್ಲಿ ಬಾಬು ಜಗಜೀವನ ರಾಂ ಜಯಂತಿ ಅಂಗವಾಗಿ ವರುಣಾ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿ ಬಿ.ಎನ್. ಸದಾನಂದ ಅವರು ಬಾಬೂಜಿ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಈ ವೇಳೆ ಪಿಎಸಿಎಸ್ ಅಧ್ಯಕ್ಷ ವೀರಭದ್ರ, ಹಿರಿಯ ಮುಖಂಡ ತೋಟದಪ್ಪ ಬಸವರಾಜು, ವಿಜಯೇಂದ್ರ ಅಭಿಮಾನಿ ಬಳಗದ ಭೈರಾಪುರ ಬಾಲು, ಬಿ.ಎಲ್.ಮಹದೇವ್ ಇದ್ದರು.

ಚುನಾವಣಾ ವೆಚ್ಚಕ್ಕಾಗಿ ದರ್ಶನ್ ಧ್ರುವಗೆ ಲಕ್ಷ ರೂ. ದೇಣಿಗೆ



ನಂಜನಗೂಡು, ಏ.6– ನಗರದ ಒಕ್ಕಲಗೇರಿ ಬಡಾವಣೆ ಯುವಕರು, ಮುಖಂಡರು ಜೆಡಿಎಸ್ ತೊರೆದು ಕಾಂಗ್ರೆಸ್ ಸೇರ್ಪಡೆಯಾಗುವ ಮೂಲಕ ಅಭ್ಯರ್ಥಿ ದರ್ಶನ್ ಧ್ರುವನಾರಾಯಣ ಅವರ ಚುನಾವಣಾ ವೆಚ್ಚಕ್ಕಾಗಿ 1 ಲಕ್ಷ ರೂ. ದೇಣಿಗೆ ನೀಡಿದರು.


ದೇಣಿಗೆ ಸ್ವೀಕರಿಸಿ ಮಾತನಾಡಿದ ದರ್ಶನ್, ನನ್ನ ತಂದೆ ಜನಪರ ಕಾರ್ಯಗಳನ್ನು ಈಗಲೂ ಕ್ಷೇತ್ರದ ಜನರು ನೆನಪಿಸಿಕೊಳ್ಳುತ್ತಿದ್ದಾರೆ. ಪ್ರತಿ ಗ್ರಾಮದಲ್ಲೂ ನನ್ನನ್ನು ಪ್ರೀತಿಯಿಂದ ಅದ್ದೂರಿಯಾಗಿ ಬರಮಾಡಿಕೊಳ್ಳುತ್ತಿದ್ದಾರೆ. ಅಲ್ಲದೇ ವಿವಿಧ ಪಕ್ಷಗಳ ಮುಖಂಡರು ನನ್ನ ಬೆಂಬಲಕ್ಕೆ ಬರುತ್ತಿರುವುದರಿಂದ ನನ್ನಲ್ಲಿ ಚುನಾವಣೆ ಎದುರಿಸುವ ಆತ್ಮವಿಶ್ವಾಸ ಹೆಚ್ಚಾಗಿದೆ. ನನ್ನ ತಂದೆಗೆ ನೀಡಿದಂತೆ ನನಗೂ ಸಹ ಸಹಕಾರ, ಬೆಂಬಲ ನೀಡಿದಲ್ಲಿ ಜನರ ನಂಬಿಕೆಗೆ ಚ್ಯುತಿ ಬಾರದಂತೆ ಸದಾ ಜನರ ಮಧ್ಯೆ ಇದ್ದು ಜನಪರ ಕೆಲಸ ಮಾಡುವ ಮೂಲಕ ತಂದೆಯ ಹಾದಿಯಲ್ಲಿ ಸಾಗಿ ಜನರ ಪ್ರೀತಿಗಳಿಸುವೆ ಎಂದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮಾತನಾಡಿ, ಕಾಂಗ್ರೆಸ್ ತತ್ವ, ಸಿದ್ಧಾಂತ ಒಪ್ಪಿ ಮತ್ತು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಸಾಧನೆಗಳನ್ನು ಮೆಚ್ಚಿ ಪ್ರತಿ ಗ್ರಾಮಗಳಲ್ಲೂ ಎಲ್ಲಾ ಸಮುದಾಯದ ಮುಖಂಡರು ಪಕ್ಷ ಸೇರ್ಪಡೆಗೊಳ್ಳುತ್ತಿದ್ದಾರೆ. ಇದರಿಂದ ಕ್ಷೇತ್ರದಲ್ಲಿ ಕಾಂಗ್ರೆಸ್ ಅಲೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಜೊತೆಗೆ ಧ್ರುವನಾರಾಯಣ್ ಸಾವಿಗೆ ನ್ಯಾಯ ಒದಗಿಸಲು ಜನರು ಸಜ್ಜಾಗಿದ್ದು ಎಲ್ಲೆಡೆ ವ್ಯಾಪಕ ಬೆಂಬಲ ವ್ಯಕ್ತವಾಗುತ್ತಿದೆ. ಕ್ಷೇತ್ರದಲ್ಲಿ ಈ ಬಾರಿ ದರ್ಶನ್ ಗೆಲುವು ಶತಸಿದ್ಧ ಎಂದರು.

ಮುಖಂಡ ಸಂತೋಷ್ ಮಾತನಾಡಿದರು. ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ಮುಖಂಡರಾದ ನಾಗೇಶ್‌ರಾಜ್, ದೊರೆಸ್ವಾಮಿ ನಾಯಕ, ಶ್ರೀಧರ್, ರಾಜೇಶ್, ಗೋವಿಂದರಾಜು, ಕೃಷ್ಣ, ಸುನೀಲ್, ಜಯರಾಮು, ಮಂಜುನಾಥ್, ಸೋಮು, ನಗರಸಭಾ ಸದಸ್ಯ ಎಸ್.ಪಿ.ಮಹೇಶ್, ಶರತ್, ಮಧು, ಆನಂದ, ರವಿ, ಮಹೇಶ್, ಸಂದೀಪ್, ಸುಬ್ಬು, ಪ್ರೀತಮ್ ಸೇರಿದಂತೆ ಇತರರಿದ್ದರು.

ತಿ.ನರಸೀಪುರದಲ್ಲಿ ಶ್ರೀ ಗುಂಜಾ ನರಸಿಂಹಸ್ವಾಮಿ ಬ್ರಹ್ಮ ರಥೋತ್ಸವ ವೈಭವ

- ರಥೋತ್ಸವಕ್ಕೆ ತಹಸೀಲ್ದಾರ್ ಸಿ.ಜೆ.ಗೀತಾ ಚಾಲನೆ
- ಹರಿದು ಬಂದ ಭಕ್ತಸಾಗರ



ತಿ.ನರಸೀಪುರ, ಏ.6– ತ್ರಿವೇಣಿ ಸಂಗಮ ಕ್ಷೇತ್ರ ಖ್ಯಾತಿಯ ತಿರುಮಕೂಡಲು ನರಸೀಪುರದ ಪ್ರಸಿದ್ಧ ಶ್ರೀ ಗುಂಜಾನರಸಿಂಹಸ್ವಾಮಿ ಬ್ರಹ್ಮ ರಥೋತ್ಸವ ಗುರುವಾರ ಸಹಸ್ರಾರು ಭಕ್ತರ ಹರ್ಷೋದ್ಗಾರದ ನಡುವೆ ವಿಜೃಂಭಣೆಯಿಂದ ನೆರವೇರಿತು.

ಗುರುವಾರ ಮಧ್ಯಾಹ್ನ ತಹಸೀಲ್ದಾರ್ ಸಿ.ಜೆ.ಗೀತಾ ದೇವಸ್ಥಾನದ ಮುಂಭಾಗ ಅಲಂಕೃತಗೊಂಡು ಕಂಗೊಳಿಸುತ್ತಿದ್ದ ರಥಕ್ಕೆ ಪೂಜೆ ಸಲ್ಲಿಸುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು. ಈ ವೇಳೆ ದೇವಸ್ಥಾನದ ಮುಂಭಾಗ ರಾಜ್ಯದ ವಿವಿಧೆಡೆಗಳಿಂದ ಆಗಮಿಸಿದ್ದ ಸಹಸ್ರಾರು ಭಕ್ತರು ಶ್ರದ್ಧಾಭಕ್ತಿಯಿಂದ ರಥ ಎಳೆದರು. ದೇವಾಲಯದ ಮುಂಭಾಗದಿಂದ ಆರಂಭಗೊಂಡ ರಥೋತ್ಸವ ವಿಶ್ವಕರ್ಮ ರಸ್ತೆ, ಪ್ರಾಥಮಿಕ ಶಾಲೆ ರಸ್ತೆ ಮೂಲಕ ತೇರಿನ ಬೀದಿಗೆ ಆಗಮಿಸಿ ಯಾವುದೇ ಅಡೆತಡೆ ಇಲ್ಲದೇ ಸ್ವಸ್ಥಾನ ತಲುಪಿತು.

ಅಲಂಕೃತ ರಥದಲ್ಲಿ ವಿರಾಜಮಾನರಾಗಿದ್ದ ಮಹಾಲಕ್ಷ್ಮಿ ಸಮೇತ ಶ್ರೀ ಗುಂಜಾನರಸಿಂಹಸ್ವಾಮಿ ಉತ್ಸವ ಮೂರ್ತಿಗಳನ್ನು ಕಂಡು ಪುಳಕಿತರಾದ ಭಕ್ತರು ರಥೋತ್ಸವದ ವೈಭವ ಕಣ್ತುಂಬಿಕೊಂಡರು. ಅಲ್ಲದೇ ಚಲಿಸುತ್ತಿದ್ದ ರಥಕ್ಕೆ ಹಣ್ಣು ಜವನ ಎಸೆದು ಧನ್ಯತೆ ಮೆರೆದರು. ರಥೋತ್ಸವದ ಹಿನ್ನೆಲೆಯಲ್ಲಿ ಪಟ್ಟಣ ಸೇರಿದಂತೆ ಗುಂಜಾನರಸಿಂಹಸ್ವಾಮಿ ದೇವಸ್ಥಾನ ಜನಸಾಗರದಿಂದ ತುಂಬಿಹೋಗಿತ್ತು. ಹೆಚ್ಚಿನ ಸಂಖ್ಯೆಯಲ್ಲಿದ್ದ ಯುವಕರು ಬಣ್ಣದೋಕುಳಿ ಆಡುವ ಮೂಲಕ ಜಾತ್ರೆಗೆ ರಂಗು ತಂದುಕೊಟ್ಟರು.

ರಥೋತ್ಸವ ಅಂಗವಾಗಿ ದೇವಾಲಯದಲ್ಲಿ ಬೆಳಗ್ಗೆಯಿಂದಲೇ ಪ್ರಧಾನ ಅರ್ಚಕ ಸಂಪತ್ ಕುಮಾರ್, ಆಗಮಿಕ ಶ್ರೀಧರ್ ಭಟ್, ಸಹಾಯಕ ವೆಂಕಟೇಶ್, ಪಾರುಪತ್ತೇಗಾರ ತಿರುಮಕೂಡಲು ದೀಪು ನೇತೃತ್ವದಲ್ಲಿ ಧಾರ್ಮಿಕ ಕೈಂಕರ್ಯ, ಅಭಿಷೇಕ ಉತ್ಸವಗಳು ಸಾಂಗವಾಗಿ ನೆರವೇರಿದವು.

ಪಾನಕ, ಮಜ್ಜಿಗೆ, ಪ್ರಸಾದ ವಿತರಣೆ: ನೆತ್ತಿ ಸುಡುವ ಉರಿ ಬಿಸಿಲಿನ ನಡುವೆಯೂ ಭಕ್ತರ ಧಾರ್ಮಿಕ ಆಚರಣೆಗೆ ಯಾವುದೇ ಅಡ್ಡಿಯಾಗಲಿಲ್ಲ. ವಿವಿಧ ಸಂಘ ಸಂಸ್ಥೆಗಳ ಮುಖಂಡರು ಮಜ್ಜಿಗೆ, ಪಾನಕ ಹಾಗೂ ಪ್ರಸಾದ ವಿತರಿಸುವ ಮೂಲಕ ದಣಿದಿದ್ದ ಭಕ್ತರ ದಾಹ ನೀಗಿಸಿದರು.

ಮಂಟಪೋತ್ಸವ: ಪಟ್ಟಣದ ರಥದ ಬೀದಿಗಳಲ್ಲಿ ಉತ್ಸವ ಮೂರ್ತಿಗಳ ಮೆರವಣಿಗೆಯ ಮಂಟಪೋತ್ಸವ ನಡೆಯಿತು. ಮದುವಣಗಿತ್ತಿಯಂತೆ ಸಿಂಗಾರಗೊಂಡಿದ್ದ ರಥದ ಬಳಿಗೆ ಉತ್ಸವ ಮೂರ್ತಿಗಳನ್ನು ಹೊತ್ತು ತಂದು ವೇದ ಮಂತ್ರ ಪಠಿಸಿ ರಥದಲ್ಲಿ ಪ್ರತಿಷ್ಠಾಪಿಸಲಾಯಿತು.

ಸಂಪ್ರದಾಯ ಪಾಲನೆ: ಅನೇಕ ವರ್ಷಗಳಿಂದ ನಡೆದು ಬಂದ ಸಂಪ್ರದಾಯದಂತೆ ಕೆಬ್ಬೆ ವ್ಯಾಸರಾಜಪುರ, ಆಲಗೂಡು, ಟಿ.ನರಸೀಪುರ, ಗೋಪಾಲಪುರ ಗ್ರಾಮದ ಯಜಮಾನರು ಗ್ರಾಮಕ್ಕೆ ತೆರಳಿ ಅಲ್ಲಿನ ಯಜಮಾನರನ್ನು ರಥೋತ್ಸವದಲ್ಲಿ ಭಾಗವಹಿಸುವಂತೆ ಆಹ್ವಾನ ನೀಡಿ ಅವರನ್ನು ಕರೆತಂದು ಪಟ್ಟಣದ ಯಜಮಾನರ ಜೊತೆ ಗೂಡಿ ಮಹಾ ಮಂಗಳಾರತಿ ನೆರವೇರಿಸಿ ದೇವಾಲಯದ ಸುತ್ತ ಉತ್ಸವ ಮೂರ್ತಿಯನ್ನು ಪ್ರದಕ್ಷಿಣೆ ಹಾಕಿಸಿ ಮತ್ತೊಮ್ಮೆ ಉತ್ಸವ ಮೂರ್ತಿಗಳಿಗೆ ಮಹಾ ಮಂಗಳಾರತಿ ನೆರವೇರಿದ ಬಳಿಕ ಬ್ರಹ್ಮ ರಥೋತ್ಸವ ವಿಧ್ಯುಕ್ತವಾಗಿ ಆರಂಭವಾಯಿತು.

ರಥೋತ್ಸವ ಹಿನ್ನೆಲೆಯಲ್ಲಿ ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ, ಶಾಸಕ ಎಂ.ಅಶ್ವಿನ್ ಕುಮಾರ್ ಭೇಟಿ ನೀಡಿ ದೇವರ ದರ್ಶನ ಪಡೆದರು. ಪುರಸಭಾಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ, ಸದಸ್ಯ ಬಾದಾಮಿ ಮಂಜು, ಎಸ್.ಕೆ.ಕಿರಣ್ ಸೇರಿದಂತೆ ಮತ್ತಿತರ ಮುಖಂಡರು ರಥೋತ್ಸವದಲ್ಲಿ ಪಾಲ್ಗೊಂಡಿದ್ದರು.

ಶತಾಯುಷಿ ಜವರಮ್ಮ ನಿಧನ



ಹೆಚ್.ಡಿ.ಕೋಟೆ, ಏ.6– ತಾಲೂಕಿನ ಶಿಂಡೇನಹಳ್ಳಿ ಗ್ರಾಮದ ಕಾಂಗ್ರೆಸ್ ಮುಖಂಡ ಎಂ.ಗಿರೀಶ್ ಅವರ ಅಜ್ಜಿ ಜವರಮ್ಮ (102)ಗುರುವಾರ ನಿಧನರಾದರು. ಮೃತರು ಏಳು ಮಂದಿ ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಮೃತರ ಸ್ವಗ್ರಾಮ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಮೈಸೂರಿನ ಒಂಟಿಕೊಪ್ಪಲಿನಲ್ಲಿರುವ ಚಾಮರಾಜ ಕ್ಷೇತ್ರದ ಬಿಜೆಪಿ ಕಚೇರಿ ಮುಂಭಾಗ ಗುರುವಾರ ಬಿಜೆಪಿ ಸಂಸ್ಥಾಪನಾ ದಿನದ ಹಿನ್ನೆಲೆಯಲ್ಲಿ ಪಕ್ಷದ ಧ್ವಜಾರೋಹಣ ನೆರವೇರಿಸಿ, ದೆಹಲಿಯ ಕಾರ್ಯಕ್ರಮದಲ್ಲಿ ಪ್ರಧಾನಮಂತ್ರಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರು ಮಾಡಿದ ಭಾಷಣವನ್ನು ಆಲಿಸಲಾಯಿತು. ಈ ಸಂದರ್ಭದಲ್ಲಿ ಶಾಸಕ ಎಲ್.ನಾಗೇಂದ್ರ, ಕ್ಷೇತ್ರದ ಬಿಜೆಪಿ ಅಧ್ಯಕ್ಷ ಕೆ.ಸೋಮಶೇಖರ ರಾಜು, ಪ್ರಧಾನ ಕಾರ್ಯದರ್ಶಿಗಳಾದ ಪುನೀತ್, ರಮೇಶ್, ಕ್ಷೇತ್ರದ ಎಲ್ಲಾ ಬಿಜೆಪಿ ನಗರಪಾಲಿಕೆ ಸದಸ್ಯರು, ಪಕ್ಷದ ವಿವಿಧ ಮೋರ್ಚಾಗಳ ಅಧ್ಯಕ್ಷರು, ಪದಾಧಿಕಾರಿಗಳು, ಕಾರ್ಯಕರ್ತರು ಉಪಸ್ಥಿತರಿದ್ದರು.

ಜಗ ನಡೆಯಲಿ ಬುದ್ಧನ ಕಡೆ ಸಂಗೀತ ಕಾರ್ಯಕ್ರಮ



ಮೈಸೂರು, ಏ.6(ಎಂಕೆ)– ನಗರದ ಬಲ್ಲಾಳ್ ವೃತ್ತದ ಸಮೀಪದಲ್ಲಿರುವ ವಿಶ್ವಮೈತ್ರಿ ಬುದ್ಧ ವಿಹಾರದಲ್ಲಿ ಗಾಯಕ ಲಕ್ಷ್ಮಿರಾಮ್ ನೇತೃತ್ವದಲ್ಲಿ 'ಜಗ ನಡೆಯಲಿ ಬುದ್ಧನ ಕಡೆ ಸಂಗೀತ ಕಾರ್ಯಕ್ರಮ' ನಡೆಯಿತು. ಕಾರ್ಯಕ್ರಮವನ್ನು ಉದ್ಘಾಟಿಸಿದ ಎಪಿಎಂಸಿ ಮಾಜಿ ಉಪಾಧ್ಯಕ್ಷ ಅಹಿಂದ ಚಿಕ್ಕಜವರಪ್ಪ, ಕಳೆದ 10 ತಿಂಗಳಿಂದ ನಡೆಯುತ್ತಿರುವ ಈ ಸಂಗೀತ ಕಾರ್ಯಕ್ರಮ ಎಲ್ಲರಲ್ಲೂ ಭಗವಾನ್ ಬುದ್ಧನ ವಿಚಾರಗಳನ್ನು ತಿಳಿಸುವಲ್ಲಿ ಕಾರ್ಯೋನ್ಮುಖವಾಗಿದೆ ಎಂದರು.

ಸಾಮಾನ್ಯವಾಗಿ ಬುದ್ಧ ಹಾಗೂ ಅಂಬೇಡ್ಕರ್ ಅವರ ವಿಚಾರಗಳನ್ನು, ಬಸವಣ್ಣನವರ ವಚನಗಳ ಬಗ್ಗೆ ಮಾತನಾಡುತ್ತೇವೆಯೇ ಹೊರತು ನಮ್ಮ ವೈಯಕ್ತಿಕ ಜೀವನದಲ್ಲಿ ಅಳವಡಿಸಿಕೊಳ್ಳುವುದಿಲ್ಲ. ಅಲ್ಲದೆ ನಮ್ಮ ನಮ್ಮಲ್ಲಿಯೇ ದ್ವೇಷ, ಅಸೂಯೆ ಹೆಚ್ಚಾಗುತ್ತಿದೆ. ಇದೆಲ್ಲಕ್ಕೂ ಪರಿಹಾರ ಬುದ್ಧನ ಮಾರ್ಗ. ಸಮ ಸಮಾಜ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಜವಾಬ್ದಾರಿ ಅರಿತುಕೊಳ್ಳಬೇಕಿದೆ ಎಂದರು. ಅಂಕಣಕಾರ ಅಮ್ಮಸಂದ್ರ ಸುರೇಶ್ ಮತ್ತಿತರರು ಇದ್ದರು.

ಎರಡು ವಾರಗಳಲ್ಲಿ ದೇಶದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಶೇ.400ರಷ್ಟು ಹೆಚ್ಚಳ; ಆದರೂ ಪರೀಕ್ಷೆ ಹೆಚ್ಚಿಸದ ಕೇಂದ್ರ ಸರ್ಕಾರ



ನವದೆಹಲಿ: ದೇಶದಲ್ಲಿ ಕೋವಿಡ್–19 ಪಾಸಿಟಿವ್ ಪ್ರಕರಣಗಳ ಸಂಖ್ಯೆ ಮತ್ತೆ ಹೆಚ್ಚಾಗುತ್ತಿದ್ದು, ಕಳೆದ ಎರಡು ವಾರಗಳಲ್ಲಿ ಪ್ರಕರಣಗಳ ಸಂಖ್ಯೆ ಶೇ.400ರಷ್ಟು ಏರಿಕೆಯಾಗಿದ್ದರೂ ಸರ್ಕಾರ ಕೋವಿಡ್ ಪರೀಕ್ಷೆಯನ್ನು ಹೆಚ್ಚಿಸಿಲ್ಲ. ಕೋವಿಡ್ ಪರೀಕ್ಷೆಗಳನ್ನು ಹೆಚ್ಚಿಸುವಂತೆ ಕೇಂದ್ರ ಸರ್ಕಾರ ರಾಜ್ಯಗಳಿಗೆ ಸಲಹೆಗಳನ್ನು ನೀಡಿದ್ದರೂ ಪರೀಕ್ಷೆ ಹೆಚ್ಚಿಸಿಲ್ಲ. ಇನ್ನೂ ಕೆಲವು ರಾಜ್ಯಗಳು ಪ್ರತಿದಿನ ನಡೆಸಲಾಗುವ ಆರ್‌ಟಿ–ಪಿಸಿಆರ್ ಪರೀಕ್ಷೆಗಳ ಸಂಖ್ಯೆಯ ಮಾಹಿತಿಯನ್ನೂ ಸಾರ್ವಜನಿಕವಾಗಿ ಹಂಚಿಕೊಳ್ಳುತ್ತಿಲ್ಲ. ಕೋವಿಡ್–19 ರೋಗಲಕ್ಷಣಗಳನ್ನು ಹೊಂದಿದ್ದರೂ ಜನರು ಕೋವಿಡ್ –19 ಪರೀಕ್ಷೆಗಳನ್ನು ಮಾಡಿಸಿಕೊಳ್ಳುತ್ತಿಲ್ಲ ಎಂದು ಹೊಸ ಸಮೀಕ್ಷೆಯೊಂದು ದೃಢಪಡಿಸಿದೆ. ದೇಶದ 303 ಜಿಲ್ಲೆಗಳಲ್ಲಿ 11,000 ಜನರಲ್ಲಿ ನಡೆಸಿದ ಸಮೀಕ್ಷೆಯಲ್ಲಿ ಶೇ.76ರಷ್ಟು ಜನ ಕೋವಿಡ್ ರೋಗ ಲಕ್ಷಣಗಳನ್ನು ಹೊಂದಿದ್ದರೂ ಸಹ ಕೊರೊನಾ ಪರೀಕ್ಷೆ ಮಾಡಿಸಿಕೊಂಡಿಲ್ಲ ಎಂಬುದು ತಿಳಿದು ಬಂದಿದೆ. ಪರೀಕ್ಷೆ ಹೆಚ್ಚಿಸದ ಹಿನ್ನೆಲೆಯಲ್ಲಿ ದೇಶದಲ್ಲಿ ಕೋವಿಡ್–19 ಪ್ರಕರಣಗಳು ಶೇ.300ರಷ್ಟು ಕಡಿಮೆ ವರದಿಯಾಗುತ್ತಿವೆ ಎಂದು ಸಮೀಕ್ಷೆಯು ಎತ್ತಿ ತೋರಿಸಿದೆ.

ಕೋವಿಡ್–19 ಪರೀಕ್ಷೆಯು ಹೆಚ್ಚು "ನಿಖರವಾದ ಸಾಂಕ್ರಾಮಿಕ ರೋಗದ ಚಿತ್ರಣ"ವನ್ನು ತಿಳಿಯಲು ಮಾತ್ರವಲ್ಲದೆ, ಸಮುದಾಯದಲ್ಲಿ ರೋಗವನ್ನು ಹರಡುವ ಲಕ್ಷಣರಹಿತ ರೋಗಿಗಳಿಗೆ ತ್ವರಿತ ಚಿಕಿತ್ಸೆ ಮತ್ತು ಪ್ರತ್ಯೇಕತೆಯನ್ನು ಒದಗಿಸಲು ಸಹಾಯ ಮಾಡುತ್ತದೆ ಎಂದು ಕೇಂದ್ರದ ತಜ್ಞರ ತಂಡ ಹೇಳಿದೆ.

ಹೈಪೋಥೈರಾಯಿಡ್ ತಪಾಸಣಾ ಶಿಬಿರ

ಮೈಸೂರು,ಏ.6–ಮೈಸೂರಿನ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಏ.7ರಿಂದ 15ರವರೆಗೆ ಬೆಳಗ್ಗೆ 9.30ರಿಂದ 4.30ರವರೆಗೆ ಹೈಪೋಥೈರಾಯಿಡ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಮೊ.9538367282, ದೂ.0821–2548231 ಸಂಪರ್ಕಿಸಬಹುದು.

ಚೆಸ್ ತರಬೇತಿ ಶಿಬಿರ

ಮೈಸೂರು,ಏ.6–ಮೈಸೂರು ಚೆಸ್ ಕ್ಲಬ್ ನಂಜುಮಳಿಗೆ ಬಳಿಯ ಗೋಪಾಲಸ್ವಾಮಿ ಶಿಶುವಿಹಾರದಲ್ಲಿ ಏ.13ರಿಂದ ಬೇಸಿಗೆ ಚೆಸ್ ತರಬೇತಿ ಏರ್ಪಡಿಸಿದೆ. ಮಾಹಿತಿಗೆ ಮೊ.9686116711 ಸಂಪರ್ಕಿಸಿ.



10ನೇ ವರ್ಷದ ಸವಿನೆನಪು



ಶ್ರೀಮತಿ ಸಾವಿತ್ರಮ್ಮ

ನೀವು ನಮ್ಮನ್ನಗಲಿ 10ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ಮಗ ಜಿ.ಟಿ. ಸುರೇಶ್‌ಕುಮಾರ್, ಸೊಸೆ: ಕೆ.ಆರ್.ಗಾಯತ್ರಿ, ಮೊಮ್ಮಕ್ಕಳಾದ ಮೇಘನ ಮತ್ತು ಭಾವನ (ಈಶ್ವರ್ ವೀಡಿಯೋ ಗ್ರೂಪ್ಸ್)



ಸ್ಥಾಪನೆ: 1916, Regd.No.888 Mob: 8904771073, 0821-2424909

ದಿ ಭಾವಸಾರ ಕ್ಷತ್ರಿಯ ಕೋ–ಆಪರೇಟಿವ್ ಸೊಸೈಟಿ ಲಿ.,

'ಎ' ಶ್ರೇಣಿಯ ಸಹಕಾರ ಸಂಘ

ಕಛೇರಿ ವಿಳಾಸ: ನಂ. 279, ಬೆಂಕಿನವಾಬ ರಸ್ತೆ, ಮಂಡಿ ಮೊಹಲ್ಲಾ, ಮೈಸೂರು – 570021


ಆಹ್ವಾನ ಪತ್ರಿಕೆ

ದಿ: 06.04.2023

ಮೇಲ್ಕಂಡ ನಮ್ಮ ಸಂಘದ **ನೂತನ ಕಟ್ಟಡ ಉದ್ಘಾಟನಾ ಸಮಾರಂಭವು** ದಿನಾಂಕ: 09.04.2023ರ ಭಾನುವಾರ ಬೆಳಗ್ಗೆ 10.30 ಗಂಟೆಗೆ ಸ್ಥಳ: "ಶ್ರೀ ವಿಠ್ಠಲ ರುಕ್ಮಿಣಿ ಕನ್ವೆನ್‌ಷನ್ ಹಾಲ್", ಐಶ್ವರ್ಯ ಪೆಟ್ರೋಲ್ ಬಂಕ್ ಹತ್ತಿರ, ವಿಜಯನಗರ 3ನೇ ಹಂತ, ಮೈಸೂರು ಇಲ್ಲಿ ಅಧ್ಯಕ್ಷರಾದ ಶ್ರೀ ಎಲ್.ವಿ.ದಯಾಶಂಕರ್ ಲಾಲೆ ರವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ನಿರ್ದೇಶಕ ಮಂಡಳಿ ತೀರ್ಮಾನಿಸಿದ್ದು, ಎಲ್ಲಾ ಸದಸ್ಯರಿಗೂ ಆಹ್ವಾನ ಪತ್ರಿಕೆಗಳನ್ನು ನೀಡಿದ್ದು, ತಲುಪದೇ ಇದ್ದಲ್ಲಿ ಇದೇ ಆಹ್ವಾನ ಪತ್ರಿಕೆಯೆಂದು ತಿಳಿದು ದಯಮಾಡಿ ಸಮಾರಂಭದಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ, ಸಹಿ/– ಶ್ರೀ ಎಲ್.ವಿ. ದಯಾಶಂಕರ್ ಲಾಲೆ, (ಅಧ್ಯಕ್ಷರು)

10ನೇ ವರ್ಷದ ಸವಿನೆನಪು



ಚಿಕ್ಕಣ್ಣರವರು

ನೀವು ನಮ್ಮನ್ನಗಲಿ ಇಂದಿಗೆ 10 ವರ್ಷ ಕಳೆದರೂ ನಿಮ್ಮ ನೆನಮ ಸದಾ ನಮ್ಮ ಮನದಲ್ಲಿದೆ

ದುಃಖತಪ್ತರು: ಲೇಟ್ ಕೆಂಪಲಿಂಗಪ್ಪನವರ ಲೇಟ್ ಜವರೇಗೌಡರ ಕುಟುಂಬ, ಜಯನಗರ, ಕೆ.ಜಿ.ಕೊಪ್ಪಲ್

ರದ್ದಾದ ಹಿಂದಿನ ಸಾರ್ವಜನಿಕ ಪ್ರಕಟಣೆ

ದಿನಾಂಕ : 30–10–2022 ರಂದು ನಮ್ಮ ಪತ್ರಿಕೆಯಲ್ಲಿ ಪ್ರಕಟಣೆಗೊಂಡಿದ್ದ ಪ್ರಕಟಣೆಯನ್ನು ಈ ಮೂಲಕ ರದ್ದುಗೊಳಿಸಿದ್ದು, ಮೈಸೂರು ಜಿಲ್ಲೆ & ತಾಲ್ಲೂಕು, ಇಲವಾಲ ಹೋಬಳಿ, ಕೆ. ಹೆಮ್ಮನಹಳ್ಳಿ ಗ್ರಾಮದ ಸರ್ವೆ ನಂ 106/1 ರಲ್ಲಿ 0–29 ಗುಂಟೆ ಖುಷ್ಕಿ ಜಮೀನನ್ನು ಮೈಸೂರಿನ ಎ.ವಿ. ಜಾನ್ ಮತ್ತು ಕುಟುಂಬಸ್ಥರಿಂದ ನಮ್ಮ ಕಕ್ಷಿದಾರರಾದ ಬಸವರಾಜು ಗಂಜೀಗಾಯಿರವರು ಖರೀದಿಸಲು ವ್ಯವಹರ ನಡೆದಿದ್ದು, ಈ ಮೊದಲು ಸದರಿ ಸ್ವತ್ತು ನಿಂಗಯ್ಯರವರ ಮಗ ರವಿಕುಮಾರ್ ಎನ್. ಎಂಬುವವರಿಗೆ ನೊಂದಾಯಿತ ಕ್ರಯದ ಅಗ್ರಿಮೆಂಟ್ ಆಗಿದ್ದು ಅವರ ಒಪ್ಪಿಗೆ ಮೇರೆಗೆ ಖರೀದಿಸಲು ಅಡ್ವಾನ್ಸ್ ಸಹ ನೀಡಿರುತ್ತಾರೆ. ಈ ಸ್ವತ್ತಿಗೆ ಸಂಬಂಧಿಸಿದಂತೆ ಆಸಕ್ತಿವುಳ್ಳ ವ್ಯಕ್ತಿಗಳು ಇದ್ದರೆ ಮೇಲ್ಕಂಡ ವಕೀಲರ ಕಛೇರಿಗೆ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸತಕ್ಕದ್ದು. ಇಲ್ಲದಿದ್ದರೆ ಮೇಲ್ಕಂಡ ಬಸವರಾಜು ಗುಂಜೀಗಾಯಿರವರು ಷೆಡ್ಯೂಲ್ ಸ್ವತ್ತನ್ನ ನೋಂದಣಿ ಮಾಡಿಸಿಕೊಳ್ಳುವವರಿದ್ದಾರೆಂದು ಹಿಂದೆ ಇದೇ ಪತ್ರಿಕೆಯಲ್ಲಿ ತಿಳಿಸಿದ್ದು, ಉಭಯತ್ರಯರ ವ್ಯವಹಾರ ರದ್ದಾಗಿರುತ್ತದೆಂದು ಈ ಮೂಲಕ ಪತ್ರಿಕಾ ಹೇಳಿಕೆ ನೀಡಲಾಗಿರುತ್ತದೆ

ಷೆಡ್ಯೂಲ್

ಮೈಸೂರು ಜಿಲ್ಲೆ & ತಾಲ್ಲೂಕು, ಇಲವಾಲ ಹೋಬಳಿ, ಕೆ. ಹೆಮ್ಮನಹಳ್ಳಿ ಗ್ರಾಮದ ಸರ್ವೆ ನಂ. 106/1 ರಲ್ಲಿ 0–29 ಗುಂಟೆ ಖುಷ್ಕಿ ಜಮೀನಿನ ಚಕ್ಕುಬಂದಿ : ಪೂರ್ವಕ್ಕೆ : ಬ್ಲಾಕ್ ನಂ. 1, ಪಶ್ಚಿಮಕ್ಕೆ : ನಾಲಾ, ಉತ್ತರಕ್ಕೆ : ಮಾದಗಳ್ಳಿ ಗಡಿ ಮತ್ತು ದಕ್ಷಿಣಕ್ಕೆ : ರಸ್ತೆ.

ಸ್ಥಳ : ಮೈಸೂರು
06–04–2023

(ಹೆಚ್.ಪಿ. ಮಹದೇವಪ್ಪ)
ವಕೀಲರು, ನಂ. 1531/1, ಕೆ 15/1, ನವಗ್ರಹ ದೇವಸ್ಥಾನದ ರಸ್ತೆ, ಮೈಸೂರು – 570004, ಮೊ : 9900501881

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರಾದ ಶ್ರೀಮತಿ ಸುಕನ್ಯಾ ಕೋಂ ಕೆ.ಚಂದ್ರಶೇಖರ್ ಇವರು ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ಅದರ ಮಾಲೀಕರಾದ ಶ್ರೀ ಚಿಕ್ಕಣ್ಣ ಬಿನ್ ಲೇಟ್ ಪುಟ್ಟತಿಮ್ಮೇಗೌಡ, ಶ್ರೀಮತಿ ತಾಯಮ್ಮ, ಸುಮ ಸಿ., ಆನಂದ್ ಬಿ.ಸಿ. ಇವರುಗಳಿಂದ ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದ ಸಂಬಂಧ ದಿನಾಂಕ 08–09–2013 ರಂದು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ನೋಂದಾಯಿತ ಕ್ರಯದ ಕರಾರು ಆಗಿದ್ದು, ಸದರಿ ಕ್ರಯದ ಕರಾರಿನ ಅಡಿಯಲ್ಲಿ ಸದರಿಯವರುಗಳು ನಮ್ಮ ಕಕ್ಷಿದಾರರಿಗೆ ನೋಂದಾಯಿತ ಕ್ರಯಪತ್ರವನ್ನು ಬರೆದುಕೊಡದೇ ಇರುವ ಸಂಬಂಧ ನಮ್ಮ ಕಕ್ಷಿದಾರರು ಮೈಸೂರಿನ ಮಾನ್ಯ 7ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ : 769/2018ರಂತೆ ದಾವೆಯನ್ನು ದಾಖಲಿಸಿದ್ದು, ಸದರಿ ನ್ಯಾಯಾಲಯದ ಆದೇಶದ ವಿರುದ್ಧ ನಮ್ಮ ಕಕ್ಷಿದಾರರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಆರ್.ಎಫ್.ಎ.ಸಂಖ್ಯೆ: 336/2021 ರಂತೆ ಪ್ರಕರಣವನ್ನು ದಾಖಲಿಸಿದ್ದು, ಸದರಿ ಪ್ರಕರಣದಲ್ಲಿ ಘನ ಉಚ್ಛ ನ್ಯಾಯಾಲಯವು ತಡೆಯಾಜ್ಞೆ ಆದೇಶವನ್ನು ಹೊರಡಿಸಿದ್ದು, ಸದರಿ ಪ್ರಕರಣವು ಚಾಲ್ತಿಯಲ್ಲಿದ್ದು, ಘನ ಕರ್ನಾಟಕ ಉಚ್ಛ ನ್ಯಾಯಾಲಯವು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ವ್ಯವಹರಣೆಗಳನ್ನು ಕೈಗೊಳ್ಳಬಾರದೆಂದು ಮಧ್ಯಕಾಲಿನ ಆದೇಶವನ್ನು ಹೊರಡಿಸಿರುತ್ತದೆ. ಆದ್ದರಿಂದ ಸಾರ್ವಜನಿಕರು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ವ್ಯವಹರಣೆಗಳನ್ನು ಮಾಡಬಾರದೆಂದು ಈ ಮೂಲಕ ತಿಳಿಯಪಡಿಸಲಾಗಿದ್ದು, ಒಂದು ವೇಳೆ ಮುಂದುವರೆದು ಯಾವುದೇ ರೀತಿಯ ವ್ಯವಹರಣೆ ಮಾಡಿದಲ್ಲಿ ಸದರಿ ವ್ಯವಹರಣೆಯು ಮೇಲ್ಕಂಡಂತೆ ಘನ ನ್ಯಾಯಾಲಯದ ಆದೇಶದ ರೀತ್ಯಾ ನಮ್ಮ ಕಕ್ಷಿದಾರರ ಹಕ್ಕಿಗೆ ಬದ್ಧಪಡಿಸುವುದಿಲ್ಲವೆಂದು ಹಾಗೂ ಮುಂದೆ ಉಂಟಾಗಬಹುದಾದ ಕಷ್ಟನಷ್ಟಗಳಿಗೆ ಅವರುಗಳೇ ಜವಾಬ್ದಾರರಾಗಿರುತ್ತಾರೆ ಎಂದು ಈ ಮೂಲಕ ತಿಳಿಯಪಡಿಸಲಾಗಿರುತ್ತದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಬಲ್ಲಹಳ್ಳಿ ಗ್ರಾಮದ ಸರ್ವೆ ನಂ. 125/1ರಲ್ಲಿ 1ಎಕರೆ 10 ಗುಂಟೆ ಪೈಕಿ 1–00 ಎಕರೆ ಖುಷ್ಕಿ ಜಮೀನು, ಇದಕ್ಕೆ ಚಕ್ಕುಬಂದಿ:

ಪೂರ್ವಕ್ಕೆ : ಶಿವಣ್ಣನವರ ಜಮೀನು, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಚಿಕ್ಕಣ್ಣನವರಿಗೆ ಸೇರಿದ ಉಳಿಕೆ ಸ್ವತ್ತು, ದಕ್ಷಿಣಕ್ಕೆ : ಪುಟ್ಟೇಗೌಡರಿಗೆ ಸೇರಿದ ಜಮೀನು.

ಸಹಿ/–**ಹೇಮಂತ್ ಕುಮಾರ್ ಬಿ.**, ವಕೀಲರು
ನಂ. 514, ಬಿಂದಿಯಾ ಕಾಂಪ್ಲೆಕ್ಸ್, ತ್ಯಾಗರಾಜ ರಸ್ತೆ, ಕೆ.ಆರ್. ಮೊಹಲ್ಲಾ, ಮೈಸೂರು
ಮೊ: 8884557259, 9632876252

ಮೈಸೂರು ಮಿತ್ರ 43 ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ

ವಾರ್ಷಿಕೋತ್ಸವ ವಿಶೇಷ ಸಂಚಿಕೆ

"ಮೈಸೂರು ಮಿತ್ರ" ತನ್ನ ಓದುಗರು ಹಾಗೂ ಜಾಹೀರಾತುದಾರರ ಸೇವೆಯಲ್ಲಿ ಏಪ್ರಿಲ್ 16, 2023ಕ್ಕೆ 43 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 44ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ವರ್ಣರಂಜಿತ ವಿಶೇಷಾಂಕವನ್ನು ಹೊರತರಲಾಗುತ್ತಿದೆ. ಹಾಗಾಗಿ ಜಾಹೀರಾತುದಾರರಿಗೆ ಇದೊಂದು ಸುಸಮಯ. ಮುದ್ರಣದ ದೃಷ್ಟಿಯಿಂದ ತಮ್ಮ ಜಾಹೀರಾತುಗಳನ್ನು ಏಪ್ರಿಲ್ 10, 2023 ರೊಳಗೆ ನೀಡಬೇಕಾಗಿ ಕಳಕಳಿಯ ಮನವಿ.

ಪ್ರಧಾನ ಕಛೇರಿ
0821-2496522, 2496523, 0821-2496520 (5 ಲೈನುಗಳು)
ಮರಿಯ ಫರ್ನಾಂಡೀಸ್, ಜಾಹೀರಾತು ವ್ಯವಸ್ಥಾಪಕರು: 9448525060
ಜಾಯ್ ಅಂಥೋಣಿ ಡೋವ್: 8951668960
ಪ್ರೇಮ: 9880549879
ಕೆ.ಆರ್. ಸರ್ಕಲ್ ಕಛೇರಿ: 0821-2431774
ದೇವರಾಜ ಅರಸ್ ರಸ್ತೆ ಕಛೇರಿ: 0821-2428695

ಕೊಡಗು: ಪ್ರಸಾದ್, ಪೂಜಾ ಆರ್ಕೇಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ 08272223517, 9731469871
ಮಂಡ್ಯ: ಕೆ. ಮೋಹನ್‌ರಾಜ್, 3ನೇ ಕ್ರಾಸ್, ಅಶೋಕನಗರ, ಮಂಡ್ಯ 8762960325
ಶ್ರೀರಂಗಪಟ್ಟಣ: ವಿನಯ್ ಕಾರೇಕುರ, ಶ್ರೀರಂಗಪಟ್ಟಣ 9686893234
ಹುಣಸೂರು: ಕೆ. ಕೃಷ್ಣ (ಕೆ.ಕೆ.), EWS 204, KHB ಕಾಲೋನಿ, ಹುಣಸೂರು. 9448720626
ಚಾಮರಾಜನಗರ: ಸಿದ್ದಲಿಂಗಸ್ವಾಮಿ, ಸಿ.ಹೆಚ್.ಆರ್. ಕಾಂಪ್ಲೆಕ್ಸ್, ಸರ್ಕಾರಿ ಆಸ್ಪತ್ರೆ ಎದುರು, ಚಾಮರಾಜನಗರ 9242265667
ಟಿ. ನರಸೀಪುರ: ಕುಮಾರ್, ಸಾರ್ವಜನಿಕ ಆಸ್ಪತ್ರೆ ರಸ್ತೆ, ಆರ್ಯ ಮಹಲ್ ಛತ್ರದ ಎದುರು, ಟಿ. ನರಸೀಪುರ. 9986719590
ಗುಂಡ್ಲುಪೇಟೆ: ಸೋಮಶೇಖರ್, ದ.ರಾ. ಬೇಂದ್ರೆ ನಗರ, ಅಶ್ವಿನಿ ಲೇಔಟ್,ಗುಂಡ್ಲುಪೇಟೆ. 9845995426
ಕೆ.ಆರ್. ನಗರ: ಕೆ.ಟಿ. ರಮೇಶ್, ಸ್ನೇಹ ಎಂಟರ್ ಪ್ರೈಸಸ್, ಬಿ.ಎಂ.ರಸ್ತೆ, ಕೆ.ಆರ್. ನಗರ. 9448021368
ಮಳವಳ್ಳಿ: ಶಿವಶಂಕರ, ನಂ.47, 1ನೇ ಕ್ರಾಸ್, ಎನ್.ಇ.ಎಸ್ ಮಳವಳ್ಳಿ ಟೌನ್–571430 9632407806
ಕೊಳ್ಳೇಗಾಲ: ರಾಜು, ಮೈಸೂರು ಮಿತ್ರ ರಿಪೋರ್ಟರ್ #101, ಮರಳಕೇರಿ ಬೀದಿ, ಕೊಳ್ಳೇಗಾಲ 9916621007
ಹಾಸನ: ಆರ್.ಎನ್.ಸೋಮೇಶ್‌ಗೌಡ, ಪೋಲಿ ಚಿಲ್ಡ್ರನ್ ಶಾಲೆ ಹತ್ತಿರ, ಜಯನಗರ, 1ನೇ ಹಂತ, 2ನೇ ಕ್ರಾಸ್, ಹಾಸನ. 9448401176
ಕುಶಾಲನಗರ: ರಘು, ಮೈಸೂರು ಮಿತ್ರ ರಿಪೋರ್ಟರ್ ಮನು ಪ್ರೆಸ್, ಐ.ಬಿ.ರಸ್ತೆ, ಕುಶಾಲನಗರ 9845698401
ಜಯಪುರ: ಬಿಳಿಗಿರಿ, ಜಯಪುರ 9945479288
ಪಿರಿಯಾಪಟ್ಟಣ: ವಿರೇಶ್, ಪಿರಿಯಾಪಟ್ಟಣ 8660057128
ವಿರಾಜಪೇಟೆ: ಮಂಜುನಾಥ, ವಿರಾಜಪೇಟೆ 9900949353
ಕೆ.ಆರ್.ಪೇಟೆ: (ಶ್ರೀನಿವಾಸ), ಅಗ್ರಹಾರ ಬಾಚಹಳ್ಳಿ, ಕೆ.ಆರ್.ಪೇಟೆ 9449326847, 7022757438
ಹೆಚ್.ಡಿ.ಕೋಟೆ: ಮಂಜುನಾಥ ಎಸ್., ಹೆಚ್.ಡಿ.ಕೋಟೆ 9483574452
ಕೆ.ಎಂ.ದೊಡ್ಡಿ: ಸತೀಶ್ ಎ.ಎಲ್, ಕೆ.ಎಂ.ದೊಡ್ಡಿ 9242120338
ನಂಜನಗೂಡು: ರಂಗಸ್ವಾಮಿ, ನಂ.4565, ಕಬಿನಿ ಕಾಲೋನಿ ಹಿಂಭಾಗ, ನೀಲಕಂಠ ನಗರ, ನಂಜನಗೂಡು ಟೌನ್–571301 9901602226
ಹುಣಸೂರು: ಹೆಚ್.ಆರ್. ಕೃಷ್ಣಕುಮಾರ್ (ಪನ್ ರಾಮೇಗೌಡ), ಸುರಭಿ ಮಾರಾಟ ಕೇಂದ್ರ, ಮಾರುತಿ ಪೆಟ್ರೋಲ್ ಬಂಕ್ ಹತ್ತಿರ, ಹಳೆಯ ಬಿ.ಎಂ. ರಸ್ತೆ ಹತ್ತಿರ, ಹುಣಸೂರು 9060406093
ಕೊಳ್ಳೇಗಾಲ: ನಾಗೇಂದ್ರ ಸ್ವಾಮಿ, ನಂ.7ಎ, 684, 14 ನೇ ಕ್ರಾಸ್, ಬಸವೇಶ್ವರ ನಗರ, ಕೊಳ್ಳೇಗಾಲ 9448576247, 7899849868

ನಿಧನ



ಶ್ರೀಮತಿ ಶಿವಮ್ಮ ಇಲವಾಲ

01.04.1927 – 06.04.2023 (97 ವರ್ಷ)

ಲೇಟ್.ಜಿ. ಶಿಂಗೇಗೌಡ ರವರ ಧರ್ಮಪತ್ನಿಯಾದ ಶ್ರೀಮತಿ. ಶಿವಮ್ಮರವರು ವಿಧಿವಶರಾಗಿದ್ದಾರೆ ಎಂದು ತಿಳಿಸಲು ವಿಷಾಧಿಸುತ್ತೇವೆ. ಮೃತರ ಅಂತ್ಯಕ್ರಿಯೆಯನ್ನು ಇಲವಾಲದ ಫಾರಂ ಹೌಸ್‌ನ ಜಮೀನಿನಲ್ಲಿ ದಿನಾಂಕ: 07-04-2023, ಶುಕ್ರವಾರ ಮಧ್ಯಾಹ್ನ 12.00 ಗಂಟೆಗೆ ನೆರವೇರಿಸಲಾಗುವುದು.

ದುಃಖತಪ್ತರು

ಮಕ್ಕಳುಗಳಾದ: ಶ್ರೀಧರ್ ಎಸ್, ಸುರೇಶ್.ವೈ.ಎಸ್ (S.V. Bricks) ಸತ್ಯನಾರಾಯಣ. ವೈ.ಎಸ್ (Sathya Poultry Farm, S N Briquettes, Sri Vinayaka Garden City, Yelwala) ಮತ್ತು ಅಪಾರ ಬಂದು ಮಿತ್ರರನ್ನು ಅಗಲಿರುತ್ತಾರೆ.

ಮೊ.ನಂ: 6360300142